
ಜಿಲ್ಲಾ ಪಂಚಾಯತ್, ಮೈಸೂರು ಜಿಲ್ಲೆ. ಕರ್ನಾಟಕ ಸರಕಾರ ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು.


**ಮಕ್ಕಳ ರಕ್ಷಣೆ – ಶಿಕ್ಷಣ ಗುಣವರ್ಧನೆ – ನಮ್ಮೆಲ್ಲರ ಹೊಣೆ**

**2015–16 ನೆಯ ಸಾಲಿನ ನಮ್ಮ ಮೈಸೂರು ಜಿಲ್ಲೆಯ ಎಸ್. ಎಸ್. ಎಲ್. ಸಿ. ವಿದ್ಯಾರ್ಥಿಗಳಿಗಾಗಿ,**

**ಪರಿಪೂರ್ಣ ಉತ್ತೀರ್ಣತಾ ಸಾಧನೆಗಾಗಿ ಅಭಿಯಾನ.**






# "ಮೈಸೂರು – ಗುರಿ ನೂರು"

**"ಪರಿಪೂರ್ಣ ಫಲಿತಾಂಶದೆಡೆ ನಮ್ಮ ನಡೆ"**

# ಸಶಕ್ತ

## ಹತ್ತನೆಯ ತರಗತಿ ಫಲಿತಾಂಶ ಉತ್ತಮೀಕರಣಕ್ಕಾಗಿ ಪ್ರಶ್ನೋತ್ತರ ಮಾಲಿಕೆ

## ಸಿರಿ ಕನ್ನಡ – 10 – ಪ್ರಥಮ ಭಾಷೆ ಕನ್ನಡ

ಪ್ರಕಟಣೆ
ಶ್ರೀ ಎಚ್. ಆರ್. ಬಸಪ್ಪ
ಉಪನಿರ್ದೇಶಕರು (ಆಡಳಿತ),
ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು.

## ಪರಿಕಲ್ಪನೆ

**ಶ್ರೀ ಎಚ್. ಆರ್. ಬಸಪ್ಪ**
ಉಪನಿರ್ದೇಶಕರು (ಆಡಳಿತ)
ಸಾ. ಶಿ. ಇಲಾಖೆ, ಮೈಸೂರು ಜಿಲ್ಲೆ.

## ಸಂಯೋಜಕರು

**ಶ್ರೀ ಎಸ್. ಪಿ. ನಾಗರಾಜು**
ವಿದ್ಯಾಧಿಕಾರಿಗಳು ಹಾಗೂ ನೋಡೆಲ್ ಅಧಿಕಾರಿಗಳು
ಉಪನಿರ್ದೇಶಕರ ಕಚೇರಿ,
ಸಾ. ಶಿ. ಇಲಾಖೆ, ಮೈಸೂರು ಜಿಲ್ಲೆ.

**ಶ್ರೀ ಕೃಷ್ಣ**
ವಿಷಯ ಪರಿವೀಕ್ಷಕರು (ಕನ್ನಡ),
ಉಪನಿರ್ದೇಶಕರ ಕಚೇರಿ,
ಸಾ. ಶಿ. ಇಲಾಖೆ, ಮೈಸೂರು ಜಿಲ್ಲೆ.

## ಸಂಪನ್ಮೂಲ ಶಿಕ್ಷಕರ ತಂಡ

**ಶ್ರೀ ವೆಂಕಟಾಚಲ ಜಿ.**
ಮುಖ್ಯೋಪಾಧ್ಯಾಯರು,
ಸರ್ಕಾರಿ ಪ್ರೌಢಶಾಲೆ, ಗಾಂಧಿನಗರ,
ಹೆ. ದೇ. ಕೋಟೆ ತಾಲೂಕು, ಮೈಸೂರು ಜಿಲ್ಲೆ.

**ಶ್ರೀ ರಾಮನಾಥ ಹೆಗಡೆ**
ಕನ್ನಡ ಭಾಷಾ ಶಿಕ್ಷಕರು
ಸರ್ಕಾರಿ ಪ್ರೌಢಶಾಲೆ, ಬೀರಿಹುಂಡಿ,
ಮೈಸೂರು ತಾಲೂಕು ಮತ್ತು ಜಿಲ್ಲೆ.

**ಶ್ರೀ ಬಾಲಕೃಷ್ಣಯ್ಯ ಬಿ.**
ಕನ್ನಡ ಭಾಷಾ ಶಿಕ್ಷಕರು
ಸರ್ಕಾರಿ ಪ್ರೌಢಶಾಲೆ, ಬೋಗಾದಿ,
ಮೈಸೂರು ತಾಲೂಕು ಮತ್ತು ಜಿಲ್ಲೆ.

**ಶ್ರೀಮತಿ ಯಶೋಧ ಎಂ.**
ಕನ್ನಡ ಭಾಷಾ ಶಿಕ್ಷಕರು
ಸರ್ಕಾರಿ ಪ್ರೌಢಶಾಲೆ, ಕುಕ್ಕರಹಳ್ಳಿ,
ಮೈಸೂರು ನಗರ (ದಕ್ಷಿಣ ವಲಯ)

**ಶ್ರೀ. ಅಶ್ವತ್ಥನಾರಾಯಣ ಪಿ.**
ಕನ್ನಡ ಭಾಷಾ ಶಿಕ್ಷಕರು
ಸರ್ಕಾರಿ ಪ್ರೌಢಶಾಲೆ, ವರಕೋಡು,
ಮೈಸೂರು ತಾಲೂಕು ಮತ್ತು ಜಿಲ್ಲೆ.

**ಶ್ರೀ ರಾಜುಶೆಟ್ಟಿ ಜಿ. ವಿ.**
ಕನ್ನಡ ಭಾಷಾ ಶಿಕ್ಷಕರು
ಸ. ಪ. ಪೂ. ಕಾಲೇಜು, ಹೊಮ್ಮರಗಳ್ಳಿ,
ಹೆ. ದೇ. ಕೋಟೆ ತಾಲೂಕು, ಮೈಸೂರು ಜಿಲ್ಲೆ.

**ಶ್ರೀ. ರವೀಶ್ ಕುಮಾರ್ ಬಿ.**
ಕನ್ನಡ ಭಾಷಾ ಶಿಕ್ಷಕರು
ಸರ್ಕಾರಿ ಪ್ರೌಢಶಾಲೆ, ಕೇರ್ಗಳ್ಳಿ,
ಮೈಸೂರು ತಾಲೂಕು ಮತ್ತು ಜಿಲ್ಲೆ

**ಶ್ರೀಮತಿ ಸವಿತಾ ಬಿ. ಟಿ.**
ಕನ್ನಡ ಭಾಷಾ ಶಿಕ್ಷಕರು,
ಸರ್ಕಾರಿ ಪ್ರೌಢಶಾಲೆ, ಬನ್ನಿಮಂಟಪ್ಪ,
ಮೈಸೂರು ನಗರ (ಉತ್ತರ ವಲಯ)

# ಮುನ್ನುಡಿ



**ಆತ್ಮೀಯ ಶಿಕ್ಷಕ ಮಿತ್ರರೇ,**

**ಮೈಸೂರು ಜಿಲ್ಲೆಯ ಎಸ್. ಎಸ್. ಎಲ್. ಸಿ. ವಿದ್ಯಾರ್ಥಿಗಳಿಗಾಗಿ, ಪರಿಪೂರ್ಣ ಉತ್ತೀರ್ಣತಾ ಸಾಧನೆಗಾಗಿ ಅಭಿಯಾನದಡಿಯಲ್ಲಿ "ಮೈಸೂರು – ಗುರಿ ನೂರು" – "ಪರಿಪೂರ್ಣ ಫಲಿತಾಂಶದೆಡೆ ನಮ್ಮ ನಡೆ"** ಎಂಬ ವಿನೂತನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಇದರನ್ವಯ ಹತ್ತನೆಯ ತರಗತಿಯ ಕಲಿಕೆಯನ್ನು ಗುಣಾತ್ಮಕವಾಗಿ ಉತ್ತಮಪಡಿಸುವ ಸಲುವಾಗಿ ಹಾಗೂ ಎಸ್.ಎಸ್.ಎಲ್.ಸಿ. ಪರೀಕ್ಷೆಯ ಫಲಿತಾಂಶವನ್ನು ಉನ್ನತೀಕರಿಸುವ ದೃಷ್ಟಿಯಿಂದ ಎಲ್ಲಾ ಭಾಷೆಗಳು ಮತ್ತು ಕೋರ್ ವಿಷಯಗಳಲ್ಲಿ ವಿದ್ಯಾರ್ಥಿಗಳ ಕಲಿಕೆಗೆ ಸಹಾಯಕವಾಗುವಂತೆ ಪ್ರಶ್ನೋತ್ತರ ಮಾಲಿಕೆಗಳನ್ನು ರಚಿಸಲಾಗಿದೆ. ಇದನ್ನು ಮೈಸೂರು ಜಿಲ್ಲೆಯ ವಿವಿಧ ಪ್ರೌಢಶಾಲೆಗಳ ಕರ್ತವ್ಯನಿರತ ವಿಷಯವಾರು ಆಯ್ದ ಸಂಪನ್ಮೂಲ ಶಿಕ್ಷಕರಿಂದ ಸಿದ್ಧಪಡಿಸಲಾಗಿದೆ. ಈ ಕಲಿಕಾ ಸಹಾಯಕಗಳನ್ನು ಶಿಕ್ಷಕರು ಪಠ್ಯಪುಸ್ತಕಗಳಿಗೆ ಪೂರಕವಾಗಿ ಬಳಸಿಕೊಂಡು ವಿದ್ಯಾರ್ಥಿಗಳ ಯಶಸ್ಸಿಗೆ ಕಾರ್ಯಪ್ರವೃತ್ತರಾಗಬೇಕೆಂಬುದು ನಮ್ಮ ಆಶಯವಾಗಿದೆ. ಜಿಲ್ಲೆಯ ಎಲ್ಲಾ ಶಾಲೆಗಳ ಮುಖ್ಯಶಿಕ್ಷಕರು ಮತ್ತು ವಿಷಯವಾರು ಶಿಕ್ಷಕರು ಇದರ ಸಂಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳುವ ಮೂಲಕ ವಿದ್ಯಾರ್ಥಿಗಳ ಉತ್ತಮ ಫಲಿತಾಂಶಕ್ಕಾಗಿ ಶ್ರಮಿಸುವುದು. ಈ ಕಾರ್ಯದಲ್ಲಿ ಪಾಲ್ಗೊಂಡು ಕಿರು ಹೊತ್ತಗೆಗಳನ್ನು ಹೊರತರಲು ಶ್ರಮಿಸಿದ ಎಲ್ಲಾ ಅಧಿಕಾರಿವರ್ಗದವರಿಗೂ, ಸಂಪನ್ಮೂಲ ಶಿಕ್ಷಕರು ಮತ್ತು ಸಿಬ್ಬಂದಿ ವರ್ಗದವರಿಗೂ ಹೃತ್ಪೂರ್ವಕ ಧನ್ಯವಾದಗಳು.

**ಶ್ರೀ ಎಚ್. ಆರ್. ಬಸಪ್ಪ**
ಉಪನಿರ್ದೇಶಕರು(ಆಡಳಿತ)
ಸಾ. ಶಿ. ಇಲಾಖೆ, ಮೈಸೂರು ಜಿಲ್ಲೆ.

.

# ಸೂಚನೆಗಳು

- ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಶಿಕ್ಷಕರ ಸಹಕಾರ ಅತ್ಯಗತ್ಯ.
- 'ಸಶಕ್ತ' ಎಂಬ ಹೊತ್ತಗೆಯನ್ನು ವಿದ್ಯಾರ್ಥಿಗಳು ಓದಿ ಮನನ ಮಾಡಿಕೊಳ್ಳುವುದು.
- ನಿಧಾನ ಗತಿಯಲ್ಲಿ ಕಲಿಯುವವರಿಗೆ ನಿಗದಿತ ಸಮಯದಲ್ಲಿ ಪರೀಕ್ಷೆಯನ್ನು ಎದುರಿಸಲು ಪಠ್ಯಾಂಶದಲ್ಲಿ ಅತಿಮುಖ್ಯವೆನಿಸಿದ ಕೆಲವೇ ಅಂಶಗಳನ್ನು **'ಸಶಕ್ತ'** ಕಲಿಕಾ ಸಹಾಯಕದಲ್ಲಿ ಸಂಗ್ರಹಿಸಿದ್ದು, ಅವುಗಳನ್ನು ಕಲಿಯುಂತೆ ಮಾಡುವುದು.
- ಈ ಕಲಿಕಾ ಸಹಾಯಕದ ಪಠ್ಯಾಂಶಗಳನ್ನು ಶಾಲಾವಧಿಯ ಪೂರ್ವದ ವಿಶೇಷ ತರಗತಿ ಮತ್ತು ಶಾಲಾವಧಿಯ ನಂತರದ ವಿಶೇಷ ತರಗತಿಗಳಲ್ಲಿ ಸತತ ಅಭ್ಯಾಸ ಮಾಡಿಸುವುದು.
- ನಿಗದಿತ ವೇಳಾಪಟ್ಟಿಯಂತೆ ತರಗತಿಯ ಅವಧಿಗಳಲ್ಲಿ ವಾರ್ಷಿಕ ಪಾಠಯೋಜನೆಯಂತೆ ಕಲಿಕಾ ಮತ್ತು ಬೋಧನಾ ಚಟುವಟಿಕೆಗಳನ್ನು ನಡೆಸುವುದು.
- **ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ ಓದುವ ಅಭ್ಯಾಸವನ್ನು ಕಡ್ಡಾಯವಾಗಿ ರೂಢಿಸುವುದು.**
- **ನಿರಂತರ ಅಭ್ಯಾಸ ಮತ್ತು ಪುನರವಲೋಕನಕ್ಕೆ ಹೆಚ್ಚು ಒತ್ತು ನೀಡುವುದು.**
- **ಇದು ಕೇವಲ ಕಲಿಕಾ ಸಹಾಯಕವೇ ಹೊರತು ಪರೀಕ್ಷಾ ತಯಾರಿಕೆಗೆ ಅಂತಿಮವಲ್ಲ ಎಂಬುದು ಗಮನಿಸಬೇಕಾದ ಅಂಶ.**

**ಪ್ರೀತಿಯ ವಿದ್ಯಾರ್ಥಿಗಳೇ**

**ನಿಮ್ಮ ಭವಿಷ್ಯವನ್ನು ನಿರ್ಮಿಸಿಕೊಳ್ಳುವವರು ನೀವೇ ಎಂಬುದನ್ನು ಮರೆಯಬೇಡಿ. ಎಲ್ಲ ಹೊಣೆಯನ್ನು ಹೊರಲು ಸಿದ್ಧರಾಗಿ, ಮಿಂಚಿಹೋದ ಕಾರ್ಯವನ್ನು ಕುರಿತು ಚಿಂತಿಸುತ್ತಾ ವ್ಯರ್ಥ ಕಾಲಹರಣ ಬೇಡ. ಅನಂತ ಭವಿಷ್ಯ ನಿಮ್ಮ ಮುಂದೆ ಇದೆ. ನೀವು ಈ ಸಂಗತಿಯನ್ನು ಸದಾ ನೆನೆಪಿನಲ್ಲಿಡಬೇಕು. ನಿಮ್ಮ ಪ್ರತಿಯೊಂದು ಯೋಚನೆ, ಮಾತು ಮತ್ತು ಕೆಲಸ–ಇವೇ ನಿಮ್ಮ ಭವಿಷ್ಯತ್ತಿನ ಬೆಳಸಿನ ಬುತ್ತಿಯಾಗಿ ಪರಿಣಮಿಸುವುವು. "ಕೆಟ್ಟ ಯೋಚನೆ, ಕೆಟ್ಟ ಕೆಲಸಗಳು ಕ್ರೂರ ಹುಲಿಯಂತೆ ನಿಮ್ಮ ಮೇಲೆ ನೆಗೆಯಲು ಸಿದ್ಧವಾಗಿದ್ದರೆ, ಒಳ್ಳೆಯ ಯೋಚನೆ ಮತ್ತು ಒಳ್ಳೆಯಕಾರ್ಯಗಳು ನೂರಾರು, ಸಾವಿರಾರು ದೇವತೆಗಳ ಸಾತ್ವಿಕ ಶಕ್ತಿಯಿಂದ ನಿಮ್ಮನ್ನು ಸದಾ ರಕ್ಷಿಸಲು ಸಿದ್ಧವಾಗಿರುತ್ತವೆ" ಎಂಬ ದೃಢ ವಿಶ್ವಾಸ ನಿಮ್ಮ ಪಾಲಿಗೆ ಸತ್ಕಾರ್ಯದ ಮಹಾಪ್ರೇರಕ ಶಕ್ತಿಯಾಗುತ್ತದೆ.**

**ಒಳಿತೋ ಕೆಡುಕೋ ನಿಮ್ಮ ಅದೃಷ್ಟವನ್ನು ನೀವೇ ರೂಪಿಸಿಕೊಳ್ಳುತ್ತೀರಿ. ಆದುದರಿಂದ ಸ್ಯಾಮ್ಯುಯೇಲ್ ಸ್ಮೈಲ್ಸ್ ಹೇಳುವಂತೆ "ಒಂದು ಒಳ್ಳೆಯ ಯೋಚನೆ ಮಾಡಿ – ಅದು ನಿಮ್ಮನ್ನು ಒಂದು ಒಳ್ಳೆಯ ಕೆಲಸಕ್ಕೆ ಪ್ರೇರೇಪಿಸೀತು. ಒಂದು ಒಳ್ಳೆಯ ಕಾರ್ಯವನ್ನು ಕೈಗೊಳ್ಳಿರಿ – ಅದು ನಿಮ್ಮನ್ನು ಒಂದು ಒಳ್ಳೆಯ ಅಭ್ಯಾಸಕ್ಕೆಳೆಸೀತು. ಒಂದು ಒಳ್ಳೆಯ ಅಭ್ಯಾಸವನ್ನು ರೂಢಿಸಿಕೊಳ್ಳಿ – ಅದು ನಿಮ್ಮ ನಡತೆಗೆ ಪುಟಗೊಟ್ಟೀತು. ಒಳ್ಳೆಯ ನಡತೆಯಿಂದ ನಿಮ್ಮ ಅದೃಷ್ಟ ಕುದುರಲೇಬೇಕು." ಅಭ್ಯಾಸದ ಹಿರಿಮೆ ಗರಿಮೆಯೇ ಇಲ್ಲಿ ಧ್ವನಿತವಾಗಿದೆ,**

**ನಿತ್ಯ ಜೀವನದ ಎಲ್ಲ ಭಾಗಕ್ಕೂ ಕ್ರಮಬದ್ಧತೆಯ ನಿಯಮವನ್ನು ಅನ್ವಯಿಸಬೇಕು. ಗೊತ್ತುಪಡಿಸಿಕೊಂಡ ಸಮಯದಲ್ಲಿ ನಿರ್ದಿಷ್ಟ ಕೆಲಸ ಮಾಡುವ ಕಲೆ ಅದು. ಕೆಲವರಿಗೆ ಈ ನಿಯಮ ಬಾಲ್ಯದಿಂದಲೇ ಸ್ವಭಾವ ಸಿದ್ಧವಾಗಿರಬಹುದು. ಇನ್ನು ಕೆಲವರು ಪ್ರಯತ್ನದಿಂದ ಈ ಕಲೆಯನ್ನು ಕಲಿಯಬೇಕಾಗಬಹುದು. ಹಾಕಿಕೊಂಡ ನಿಯಮಗಳನ್ನು ನಿತ್ಯ ನಿಯಮಿತ ರೀತಿಯಲ್ಲಿ ಪಾಲಿಸುವುದೇ ನಿಷ್ಠೆ. ನಿಷ್ಠೆಯಿಲ್ಲದೆ ಯಾವ ಪ್ರಗತಿಯೂ ಇಲ್ಲ. ಜ್ಞಾನ ಸಂಗ್ರಹ ನಿಜವಾದ ಶಕ್ತಿಯಾಗಿ ಪರಿಣಮಿಸಬೇಕಾದರೆ ನಿಮಯ ಪಾಲನೆಯಲ್ಲಿ ದೃಢನಿಷ್ಠೆ ಇರಬೇಕು.**

**ಒಂದು ಹೊಸ ಅಭ್ಯಾಸವನ್ನು ಕಲಿತು, ರೂಢಿಸಿ ದೃಢಪಡಿಸಿಕೊಂಡು, ಅದನ್ನು ಮನಸ್ಸಿನಲ್ಲಿ ನೆಲೆ ನಿಲ್ಲುವಂತೆ ಮಾಡಲು ಅತ್ಯಂತ ದೃಢ ಸಂಕಲ್ಪದಿಂದ ಪ್ರಾರಂಭಿಸಬೇಕು. ಹೊಸ ಅಭ್ಯಾಸ ಮನಸ್ಸು, ನರವ್ಯೂಹಗಳಲ್ಲಿ ಆಳವಾಗಿ ಬೇರುಬಿಡುವವರೆಗೂ ಯೋಜಿಸಿಕೊಂಡ ಕಾರ್ಯಗಳನ್ನು ಒಂದೇ ಒಂದು ದಿನದಮಟ್ಟಿಗೂ ಬಿಡಬಾರದು.**

**ಕೃತಿ :– ಬದುಕಲು ಕಲಿಯಿರಿ.**
**ರಚನೆ :– ಸ್ವಾಮಿ ಜಗದಾತ್ಮಾನಂದ**

# ಪಠ್ಯಾಂಶಗಳನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.

## 1. ಗದ್ಯ ಭಾಗ

| ಕ್ರ.ಸಂ. | ಗದ್ಯ ಪಾಠದ ಹೆಸರು | ಅಂಕಗಳು |
|---|---|---|
| 1 | ಶಬರಿ | 04 |
| 2 | ಅಮೆರಿಕದಲ್ಲಿ ಗೊರೂರು | 04 |
| 3 | ಜೀವನದೃಷ್ಟಿ | 03 |
| 4 | ಧರ್ಮಸಮದೃಷ್ಟಿ | 03 |
| 5 | ಭಾಗ್ಯಶಿಲ್ಪಿ ಸರ್. ಎಂ. ವಿಶ್ವೇಶ್ವರಯ್ಯ | 03 |
| 6 | ಎದಗೆ ಬಿದ್ದ ಅಕ್ಷರ | 03 |
| 7 | ವೃಕ್ಷಸಾಕ್ಷಿ | 03 |
| 8 | ವ್ಯಾಘ್ರಗೀತೆ | 03 |
| | ಗದ್ಯ ಒಟ್ಟು | 26 |

## 2. ಪದ್ಯ ಭಾಗ

| ಕ್ರ.ಸಂ | ಪದ್ಯ ಪಾಠದ ಹೆಸರು | ಅಂಕಗಳು |
|---|---|---|
| 1 | ಎಮ್ಮ ನುಡಿಗೇಳ್ | 04 |
| 2 | ಹಕ್ಕಿ ಹಾರುತಿದೆ ನೋಡಿದಿರಾ | 04 |
| 3 | ಹಲಗಲಿ ಬೇಡರು | 03 |
| 4 | ವಚನ ಸೌರಭ | 03 |
| 5 | ಸಂಕಲ್ಪಗೀತೆ | 04 |
| 6 | ಕೌರವೇಂದ್ರನ ಕೊಂದೆ ನೀನು | 04 |
| 7 | ವೀರಲವ | 03 |
| 8 | ಸಾರ್ಥಕತೆ | 03 |
| | ಪದ್ಯ ಒಟ್ಟು | 28 |

## 3. ಪಠ್ಯ ಪೋಷಕ ಅಧ್ಯಯನ

| ಕ್ರ.ಸಂ | ಪಠ್ಯಪೋಷಕ ಅಧ್ಯಯನ ಪಾಠದ ಹೆಸರು | ಅಂಕಗಳು |
|---|---|---|
| 1 | ವಿಜ್ಞಾನ ಮತ್ತು ಸಮಾಜ | 02 |
| 2 | ನಾಮಫಲಕ | 02 |
| 3 | ಉದಾತ್ತ ಚಿಂತನೆಗಳು | 02 |
| 4 | ಪಾರಿವಾಳ | 01 |
| 5 | ಜನಪದ ಒಗಟುಗಳು | 02 |
| | ಪಠ್ಯಪೋಷಕ ಅಧ್ಯಯನ ಒಟ್ಟು | 09 |

## 4. ಅಪಠಿತ ಗದ್ಯ

| ಕ್ರ.ಸಂ | ಅಪಠಿತ ಗದ್ಯ | ಅಂಕಗಳು |
|---|---|---|
| 1 | ಅಪಠಿತ ಗದ್ಯ | 04 |

## 5. ವ್ಯಾಕರಣಾಂಶ, ಛಂದಸ್ಸು, ಅಲಂಕಾರ, ವಾಕ್ಯ ರಚನೆಗಳು

| ಕ್ರ.ಸಂ. | ವಿಷಯ | ಅಂಕಗಳು |
|---|---|---|
| 1 | ವ್ಯಾಕರಣ | 14 |
| 2 | ಅಲಂಕಾರ | 03 |
| 3 | ಛಂದಸ್ಸು | 03 |
| 4 | ಗಾದೆ ವಿಸ್ತರಣೆ | 03 |
| 5 | ಪತ್ರಲೇಖನ | 05 |
| 6 | ಪ್ರಬಂಧ ಲೇಖನ | 05 |
| | ವ್ಯಾಕರಣಾಂಶ, ಛಂದಸ್ಸು, ಅಲಂಕಾರ, ವಾಕ್ಯ ರಚನೆಗಳ ಒಟ್ಟು | 33 |

## ಪ್ರಶ್ನೆ ಪತ್ರಿಕೆ ಅಂಕ ವಿತರಣೆ :

| ಪ್ರಶ್ನೆಗಳ ಸ್ವರೂಪ | ಗದ್ಯ | ಪದ್ಯ | ಪೋಷಕ ಅಧ್ಯಯನ / ಅಪಠಿತ ಗದ್ಯ | ವ್ಯಾಕರಣ | ವಾಕ್ಯ ರಚನೆ | ಒಟ್ಟು |
|---|---|---|---|---|---|---|
| ಬಹು ಆಯ್ಕೆ | – | – | – | 10*01=10 | – | 10 |
| ಸಂಬಂಧೀಕರಿಸಿಬರೆಯುವುದು | – | – | – | 04*01=04 | – | 04 |
| ಒಂದು ವಾಕ್ಯದ ಉತ್ತರ | 05*01=05 | 03*01=03 | 01*01=01 | – | – | 09 |
| 3 / 4 ವಾಕ್ಯಗಳ ಉತ್ತರಗಳು | 04*02=8 | 02*02=04 | 04*02=08 | – | – | 20 |
| ಸಂದರ್ಭದೊಡನೆ ಸ್ವಾರಸ್ಯ | 02*03=06 | 02*03=06 | – | – | – | 12 |
| ಕವಿ ಕೃತಿ ಪರಿಚಯ | 01*03=03 | 01*03=03 | – | – | – | 06 |
| ಛಂದಸ್ಸು | – | – | – | 01*03=03 | – | 03 |
| ಅಲಂಕಾರ | | – | – | 01*03=03 | – | 03 |
| ಗಾದೆಗಳ ವಿಸ್ತರಣೆ | | | | | 01*03=03 | 03 |
| ಕಂಠಪಾಠ | – | 01*04=04 | – | – | – | 04 |
| ಮೌಲ್ಯವನ್ನಾಧರಿಸಿ ಪದ್ಯದ ಸಾರಾಂಶ ಬರೆಯುವುದು | – | 01*04=04 | – | – | – | 04 |
| 8 / 10 ವಾಕ್ಯಗಳ ಉತ್ತರಗಳು | 01*04=04 | 01*04=04 | – | – | – | 08 |
| ಅಪಠಿತ ಗದ್ಯ | | | 01*04=04 | | | 04 |
| ಪತ್ರ ಲೇಖನ | – | – | – | – | 01*05=05 | 05 |
| ಪ್ರಬಂಧ ರಚನೆ | – | – | – | – | 01*5=05 | 05 |
| ಒಟ್ಟು | 26 | 28 | 09 + 04 | 20 | 13 | 100 |
| ಪ್ರಶ್ನೆಗಳ ಸಂಖ್ಯೆ | 13 | 11 | 05 + 1 | 16 | 03 | 49 |

# ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು.
## ಎಸ್. ಎಸ್. ಎಲ್. ಸಿ. ಸಾರ್ವತ್ರಿಕ ಪರೀಕ್ಷೆ
## ಮಾದರಿ ಪ್ರಶ್ನೆ ಪತ್ರಿಕೆ
## ಪ್ರಥಮ ಭಾಷೆ ಕನ್ನಡ

**ಗರಿಷ್ಠ ಅಂಕಗಳು : 100** **ಅವಧಿ : 3 ಗಂಟೆಗಳು**

**ಸೂಚನೆಗಳು :** ಪ್ರಶ್ನೆ ಪತ್ರಿಕೆಯು ಎ, ಬಿ ಮತ್ತು ಸಿ ಎಂಬ ಮೂರು ಭಾಗಗಳನ್ನು ಒಳಗೊಂಡಿದೆ.
ಸೂಚನೆಯನ್ನು ಅನುಸರಿಸಿ ಉತ್ತರಗಳನ್ನು ಬರೆಯಿರಿ.
ಉತ್ತರಗಳು ನೇರವೂ ಸ್ಪಷ್ಟವೂ ಆಗಿದ್ದು, ಅಂಕಗಳಿಗೆ ತಕ್ಕಂತೆ ವಿಸ್ತಾರವಿರಲಿ.
ಪ್ರತಿ ಪ್ರಶ್ನೆಗೂ ಉತ್ತರಕ್ಕಾಗಿ ಮೀಸಲಿಟ್ಟ ಜಾಗದಲ್ಲೇ ಉತ್ತರ ಬರೆಯುವುದು ಕಡ್ಡಾಯ.

### ಭಾಗ – 'ಎ'

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **09 * 01 = 09**

1. ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು?
2. ಗೃಹಸ್ಥಾಶ್ರಮವು ಧನ್ಯ ಎಂದು ಹೇಳಿದವರು ಯಾರು?
3. ರಾಯನು ವಿಧಿಸಿದ ಕಟ್ಟಳೆಯನ್ನು ಮೀರಿದರೆ ಆಗುವ ಪರಿಣಾಮವೇನು?
4. ವಿಶ್ವೇಶ್ವರಯ್ಯನವರ ಪೂರ್ವಜರು ಎಲ್ಲಿಯವರು?
5. ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಯಾವ ಆರೋಪವನ್ನು ಹೊರಿಸಿದನು?
6. ಹಕ್ಕಿ ಯಾವ ವೇಗದಲ್ಲಿ ಹಾರುತ್ತಿದೆ?
7. ಶಿವನಿಗೆ ಯಾರ ಭಕ್ತಿ ಹಿತವೆನಿಸುತ್ತದೆ?
8. ಅಜ್ಞಾನ ತೊಲಗಿಸಲು ಕವಯಿತ್ರಿ ಏನಾಗ ಬಯಸಿದ್ದಾರೆ?
9. ಮುದ್ದು ಪಾರಿವಾಳಗಳ ಜೋಡಿ ಎಲ್ಲಿ ಸಂಸಾರ ಹೂಡಿತ್ತು?

**ಈ ಕೆಳಗಿನವುಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ** **10 * 02 = 20**

10. ಸಹಾನುಭೂತಿಗಾಗಿ ಇರಬೇಕಾದ ಎರಡು ಕಣ್ಣುಗಳಾವುವು?
11. 'ಧರ್ಮಸಮದೃಷ್ಟಿ' ಪಾಠದಲ್ಲಿ ರಾಮಾನುಜಾಚಾರ್ಯರ ಗುಣವಿಶೇಷತೆಯನ್ನು ಹೇಗೆ ಕೊಂಡಾಡಲಾಗಿದೆ?
12. ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯ ಅವರು ಏನೆಂದು ಹೇಳಿದ್ದಾರೆ?
13. ಧರ್ಮಾಧಿಕರಣರು ವಟವೃಕ್ಷಕ್ಕೆ ಏನು ಹೇಳಿದರು?
14. ಮಾತಿನ ಮಹತ್ತ್ವವನ್ನು ಬಸವಣ್ಣನವರು ಹೇಗೆ ವಿಶ್ಲೇಷಿಸಿದ್ದಾರೆ?
15. ಗಡಿಯ ಆಚೆ–ಈಚೆ ಜೀವಿಗಳು ಏಕೆ ಶವವಾದವು?
16. ವೈಜ್ಞಾನಿಕ ಸಂಶೋಧನೆಗಳು ಯಾವಾಗ ಅರ್ಥರಹಿತವಾಗುತ್ತವೆ?
17. ಭರತಚಕ್ರವರ್ತಿಗೆ ತನ್ನ ಹೆಸರನ್ನು ಬರೆಸಲು ಏಕೆ ಸಾಧ್ಯವಾಗಲಿಲ್ಲ?
18. ಬಾಳಿನಲ್ಲಿ ತೃಪ್ತಿ ದೊರಕಬೇಕಾದರೆ ಏನು ಮಾಡಬೇಕೆಂಬುದು ವಿವೇಕಾನಂದರ ಅಭಿಪ್ರಾಯ?
19. ಕೊಕ್ಕರೆಯ ಕುರಿತಾದ ಒಗಟನ್ನು ಬರೆಯಿರಿ.

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **04 * 03 = 12**

20. "ಆವುದೀ ಮರುಳು? ನಮ್ಮೆಡೆಗೆ ಬರುತಿಹುದು."
21. "ಖಂಡವಿದೆಕೋ, ಮಾಂಸವಿದೆಕೋ, ಗುಂಡಿಗೆಯ ಬಿಸಿರಕ್ತವಿದೆಕೋ."
22. "ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ."
23. "ರಾಜ್ಯದ ಸಾಮ್ರಾಜ್ಯದ ತೆನೆ ಒಕ್ಕಿ."

**ಈ ಸಾಹಿತಿ/ಕವಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.**

24. ದೇವನೂರ ಮಹದೇವ **02*03 =06**
25. ಲಕ್ಷ್ಮೀಶ

**ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ.** **01 * 04 = 04**

**26.** ಕೊರಳ ಸೆರೆ ಹಿಗ್ಗಿದವು ದೃಗುಜಲ

______________________________

______________________________________

______________________________

______________________________

ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ ॥

**ಅಥವಾ**

ಮಾರಿಗೌತಣವಾಯ್ತು ನಾಳಿನ

_______________________________

______________________________________

_______________________________

_______________________________

ವೀರರೈವರ ನೋಯಿಸೆನು ರಾಜೀವಸಖನಾಣೆ ॥

**ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ.** **01 * 04 = 04**

**27.**
ಬಿದ್ದುದನ್ನು ಮೇಲೆಬ್ಬಿಸಿ ನಿಲ್ಲಿಸಿ
ಹೊಸ ಭರವಸೆಗಳ ಕಟ್ಟೋಣ.
ಮನುಜರ ನಡುವಣ ಅಡ್ಡಗೋಡೆಗಳ
ಕೆಡವುತ ಸೇತುವೆಯಾಗೋಣ.

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **02 * 04 = 08**

**28.** ಗೊರೂರು ರಾಮಸ್ವಾಮಿ ಅಯ್ಯಂಗಾರರ ವೇಷಭೂಷಣಗಳು ಹೇಗಿದ್ದವು ?

**ಅಥವಾ**

ಖಾದಿ ಬಟ್ಟೆಯ ವೈಶಿಷ್ಟ್ಯವನ್ನು ಗೊರೂರರು ಅಮೆರಿಕಾದ ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳಿಗೆ ಹೇಗೆ ಪರಿಚಯಿಸಿದರು?

**29.** ಧೃತರಾಷ್ಟ್ರನು ಸಂಧಿಮಾಡಿಕೊ ಎಂದು ದುರ್ಯೋಧನನಿಗೆ ಹೇಳಲು ಕಾರಣವೇನು ?

**ಅಥವಾ**

ದುರ್ಯೋಧನನ ತಂದೆ–ತಾಯಿಯರು ಅವನನ್ನು ಸಂಧಿಗಾಗಿ ಪ್ರಾರ್ಥಿಸಿದ ರೀತಿಯನ್ನು ವಿವರಿಸಿ.

**ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

**01*04 =04(2+2)**

**30.** ಸಿ.ವಿ.ರಾಮನ್ ಶಿಷ್ಯನನ್ನು ಆರಿಸಿಕೊಂಡ ಮೇಲೆ ಅವನಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟು, ಅವನನ್ನು ಮಗನಿಗಿಂತ ಹೆಚ್ಚಾಗಿ ನೋಡಿಕೊಳ್ಳುತ್ತಿದ್ದರು. ತಮ್ಮ ಶಿಷ್ಯರೂ ತಮ್ಮಂತೆಯೇ ವಿಜ್ಞಾನದ ಅಭ್ಯಾಸಿಗಳು, ತಮ್ಮ ನಡುವೆ ಮೇಲುಕೀಳೆಂಬ ತಾರತಮ್ಯವಿರಕೂಡದು, ವಿಜ್ಞಾನದ ಅನ್ವೇಷಣ ಕಾರ್ಯದಲ್ಲಿ ನಾವೆಲ್ಲ ಸರಿಸಮಾನರಾದ ಕೆಲಸಗಾರರು ಎಂದು ಭಾವಿಸಿದ್ದರು. ಅದರಂತೆಯೇ ನಡೆದುಕೊಳ್ಳುತ್ತಿದ್ದರು. ಶಿಷ್ಯರು ನಡೆಸುವ ಸಂಶೋಧನೆ ಅತ್ಯುತ್ತಮ ವರ್ಗದ್ದಾಗಿರಬೇಕು, ಇತರರನ್ನು ಸುಮ್ಮನೆ ಅನುಸರಿಸುವುದು ಸರ್ವಥಾ ಕೂಡದು, ಸ್ವಂತಿಕೆ ಇರಬೇಕು, ಹೊಸ ದಾರಿಯನ್ನು ಗುರುತಿಸಿ ಮುಂದುವರೆಯಬೇಕು ಎಂದು ಒತ್ತಿ ಒತ್ತಿ ಹೇಳುತ್ತಿದ್ದರು. ಬೆಳಿಗ್ಗೆ ಪ್ರಯೋಗಾಲಯಕ್ಕೆ ಬಂದಕೂಡಲೆ ಒಂದು ಸುತ್ತು ಹೊರಟು ಎಲ್ಲ ಭಾಗಗಳಿಗೂ ಭೇಟಿಯಿತ್ತು, ಪ್ರತಿಯೊಬ್ಬ ಶಿಷ್ಯನೂ ಏನು ಮಾಡುತ್ತಿದ್ದಾನೆ, ಕೆಲಸದಲ್ಲಿ ಅವನ ಪ್ರಗತಿ ಎಷ್ಟು ಎಂದು ವಿಚಾರಿಸುತ್ತಿದ್ದರು. ಮುಂದೆ ಏನು ಮಾಡಬೇಕೆನ್ನುವ ವಿಷಯವಾಗಿ ಸಲಹೆಗಳನ್ನು ಕೊಡುತ್ತಿದ್ದರು. ಶಿಷ್ಯನೇನಾದರೂ ಹೊಸ ವಿಷಯವೊಂದನ್ನು ಬಯಲಿಗೆ ತಂದಿದ್ದನೆಂದರೆ, ಬೆನ್ನುತಟ್ಟಿ, ಅವನನ್ನು ಎಲ್ಲರ ಎದುರಿಗೂ ಹೊಗಳಿ ಅಟ್ಟಕ್ಕೇರಿಸುತ್ತಿದ್ದರು. ಶಿಷ್ಯರು ಗುರುವಿನ ಕೊಂಡಾಟದಿಂದ ಉಬ್ಬಿಹೋಗುತ್ತಿದ್ದರು. ಸಂಶೋಧನೆಗಳನ್ನು ಮತ್ತಷ್ಟು ಹುರುಪಿನಿಂದ ಮುಂದುವರೆಸುತ್ತಿದ್ದರು.

**ಪ್ರಶ್ನೆಗಳು :**

1. ಶಿಷ್ಯರನ್ನು ಕುರಿತು ರಾಮನ್ ಅವರ ಮನೋಭಾವನೆ ಏನಾಗಿತ್ತು?
2. ಶಿಷ್ಯರನ್ನು ಹುರಿದುಂಬಿಸುವ ರಾಮನ್ ಅವರ ದೈನಂದಿನ ಕಾರ್ಯವನ್ನು ತಿಳಿಸಿ.

## ಭಾಗ – 'ಬಿ'

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದದ್ದನ್ನು ಆರಿಸಿ, ಉತ್ತರಕ್ಕಾಗಿಯೇ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಬರೆಯಿರಿ.** **10 * 01 = 10**

31. 'ಶ್ಚುತ್ವ ಸಂಧಿಗೆ' ಉದಾಹರಣೆಯಾದ ಪದ :
(ಎ) ಅಷ್ಟೈಶ್ವರ್ಯ (ಬಿ) ಬೃಹಚ್ಛತ್ರ (ಸಿ) ಜ್ಞಾನೇಶ್ವರ (ಡಿ) ಕೋಟ್ಯಧೀಶ್ವರ
32. ತಾವು ಕಡಿಮೆ ಮಾತನಾಡಿದ್ದೀರಿ ಹೆಚ್ಚು ಕೆಲಸ ಮಾಡಿದ್ದೀರಿ ಈ ವಾಕ್ಯದಲ್ಲಿ ಇರಬೇಕಾದ ಲೇಖನ ಚಿಹ್ನೆ :
(ಎ) ಅಲ್ಪವಿರಾಮ (ಬಿ) ಆವರಣ (ಸಿ) ಅರ್ಧವಿರಾಮ (ಡಿ) ಪ್ರಶ್ನಾರ್ಥಕ
33. "ಕಲ್ಪನೆಯು ಧ್ಯೇಯಗಳ ಜಗತ್ತಿನಲ್ಲಿ ಹೊಳೆಯುತ್ತದೆ" ಈ ವಾಕ್ಯದಲ್ಲಿರುವ ಕಾಲಪ್ರತ್ಯಯ :
(ಎ) ಗಳ (ಬಿ) ಅಲ್ಲಿ (ಸಿ) ಉತ್ತ (ಡಿ) ಅದೆ
34. 'ನೆಯ್ದುವಸ್ತ್ರ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ :
(ಎ) ದ್ವಂದ್ವ (ಬಿ) ಕ್ರಿಯಾ (ಸಿ) ತತ್ಪುರುಷ (ಡಿ) ಗಮಕ
35. 'ಲಿಖಿತಮಂ' ಪದವು ಈ ವಿಭಕ್ತಿಯಲ್ಲಿದೆ.
(ಎ) ಪ್ರಥಮಾ (ಬಿ) ದ್ವಿತೀಯಾ (ಸಿ) ತೃತೀಯಾ (ಡಿ) ಚತುರ್ಥೀ
36. 'ಅನ್ವರ್ಥನಾಮ' ಪದಕ್ಕೆ ಉದಾಹರಣೆಯಿದು :
(ಎ) ವ್ಯಾಪಾರಿ (ಬಿ) ಮನುಷ್ಯ (ಸಿ) ಆಗ್ನೇಯ (ಡಿ) ಕಮಲಾಕ್ಷ
37. 'ಅನಾನಸು' ಪದವು ಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ :
(ಎ) ಪೋರ್ಚುಗೀಸ್ (ಬಿ) ಉರ್ದು (ಸಿ) ಫಾರ್ಸಿ (ಡಿ) ರೋಮನ್
38. "ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ" ಅಂತಹ ವಾಕ್ಯವು :
(ಎ) ನಿಷೇಧಾರ್ಥಕ ವಾಕ್ಯ (ಬಿ) ಮಿಶ್ರ ವಾಕ್ಯ (ಸಿ) ಸಂಯೋಜಿತ ವಾಕ್ಯ (ಡಿ) ಸಾಮಾನ್ಯ ವಾಕ್ಯ
39. ತದ್ಧಿತಾಂತ ಅವ್ಯಯಕ್ಕೆ ಉದಾಹರಣೆಯಾದ ಪದ ಇದು :
(ಎ) ಜಾಣತನ (ಬಿ) ಕನ್ನಡತಿ (ಸಿ) ಚಂದ್ರನಂತೆ (ಡಿ) ಉಡುಗೆ
40. ಕೊಟ್ಟಿರುವ ಧಾತುಗಳಲ್ಲಿ ಅಕರ್ಮಕಧಾತು ಪದವಿದು :
(ಎ) ಕೊಡು (ಬಿ) ಬಿಡು (ಸಿ) ಓಡು (ಡಿ) ನೋಡು

**ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀಪದವನ್ನು ಬರೆಯಿರಿ.** **04 * 01 = 04**

41. ವಿದ್ಯಾಧರ : ಬಿಜ್ಜೋದರ : : ವೈಶಾಖ : ____________
42. ಹಾಲ್ಜೇನು : ಜೋಡುನುಡಿ : : ನಟ್ಟನಡುವೆ : ____________
43. ಬಡವಾ : ಹೆಣ್ಣುಕುದುರೆ : : ಮೋಷ್ಟಿಕ : ____________
44. ಆದ್ದರಿಂದ : ಸಂಬಂಧಾರ್ಥಕ ಅವ್ಯಯ : : ಚುರುಚುರು : ____________

**ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ.**

**45.** ನೀನುಳ್ಳೊಡೆಲ್ಲರೊಳರೆಮ **01*03=03**
ಗೇನುಮಳಲ್ ಮನದೊಳಿಲ್ಲದೆಂತೆನೆ ಮಗನೇ ।

**ಅಥವಾ**

ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ
ನೊರ್ವನೇ ವೀರನಾತನ ಯಜ್ಞತುರಗಮಿದು
ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ ।

**ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಿಸಿ.**

46. "ಮಾರಿಗೌತಣವಾಯ್ತು ನಾಳಿನ ಭಾರತವು" **01 * 03 =03**

**ಅಥವಾ**

"ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು"

## ಭಾಗ – 'ಸಿ'

**47.** ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ. **01 * 03 = 03**

* ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ
* ಹೆತ್ತತಾಯಿ ಹೊತ್ತನಾಡು ಸ್ವರ್ಗಕ್ಕಿಂತ ಮಿಗಿಲು
* ಉಪ್ಪು ತಿಂದ ಮನೆಗೆ ಎರಡು ಬಗೆಯ ಬೇಡ

**48.** ನಿಮ್ಮನ್ನು ವಿಜಯಪುರದ ಮುರಾರ್ಜಿ ವಸತಿ ಶಾಲೆಯ 'ಸಮರ್ಥ' ಎಂದು ಭಾವಿಸಿಕೊಂಡು, ಅಂತರಶಾಲಾ ವಿಜ್ಞಾನ ವಸ್ತುಪ್ರದರ್ಶನ ಕಾರ್ಯಕ್ರಮದ ವರದಿಯನ್ನು ಪ್ರಕಟಿಸುವಂತೆ ಕೋರಿ ನಿಮ್ಮೂರಿನ ವಿಜಯ ಕರ್ನಾಟಕ ದಿನಪತ್ರಿಕೆಯ ಸಂಪಾದಕರಿಗೆ ಮನವಿಪತ್ರ ಬರೆಯಿರಿ. **01 * 05 = 05**

**ಅಥವಾ**

ನಿಮ್ಮನ್ನು ಬನಶಂಕರಿಯ ಸರ್ಕಾರಿ ಪ್ರೌಢಶಾಲೆಯ 'ಹರ್ಷಿತ' ಎಂದು ಭಾವಿಸಿಕೊಂಡು, ಮಂಗಳೂರಿನಲ್ಲಿ ವಾಸವಾಗಿರುವ ತಾಯಿಯವರಿಗೆ ವಿದ್ಯಾಭ್ಯಾಸದ ಪ್ರಗತಿಯನ್ನು ವಿವರಿಸಿ ಪತ್ರ ಬರೆಯಿರಿ.

**49.** ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧಬರೆಯಿರಿ. **01 * 05 = 05**

* ಬಾಲಕಾರ್ಮಿಕ ಪದ್ಧತಿ
* ಶಾಲಾ ಗ್ರಂಥಾಲಯಗಳ ಸದ್ಬಳಕೆ
* ಸ್ವಚ್ಛಭಾರತ ಅಭಿಯಾನದಲ್ಲಿ ವಿದ್ಯಾರ್ಥಿಗಳ ಪಾತ್ರ

---- 0 ----

# ಸಶಕ್ತ

## ಭಾಗ – 'ಎ'

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. 09 * 01 = 09**

**(ಗದ್ಯಭಾಗದಿಂದ 5, ಪದ್ಯಭಾಗದಿಂದ 3 ಮತ್ತು ಪಠ್ಯಪೋಷಕ ಅಧ್ಯಯನ ಭಾಗದಿಂದ 1 ಪ್ರಶ್ನೆ ಬರುತ್ತದೆ.)**

**ಗದ್ಯಭಾಗ – 5 ಪ್ರಶ್ನೆಗಳು**

**1. ಶ್ರೀ ರಾಮನ ತಂದೆಯ ಹೆಸರೇನು?**
ಶ್ರೀ ರಾಮನ ತಂದೆಯ ಹೆಸರು **ದಶರಥ.**

**2. ಶ್ರೀರಾಮನಿಗೆ ಸಮರ್ಪಿಸಲು ಶಬರಿ ಏನನ್ನು ಸಂಗ್ರಹಿಸಿದ್ದಳು?**
ಶ್ರೀರಾಮನಿಗೆ ಸಮರ್ಪಿಸಲು ಶಬರಿ **ಪರಿಮಳದ ಹೂವು, ಮಧುಪರ್ಕ ಮತ್ತು ರುಚಿಕರ ಹಣ್ಣುಹಂಪಲುಗಳನ್ನು** ಸಂಗ್ರಹಿಸಿದ್ದಳು.

**3. ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು?**
ಮತಂಗಾಶ್ರಮದಲ್ಲಿ ವಾಸವಿದ್ದ **ತಪಸ್ವಿನಿ ಶಬರಿ.**

**4. ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಯಾರು?**
ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು **ದಂಡಕಾರಣ್ಯದಲ್ಲಿ ವಾಸಮಾಡುತ್ತಿದ್ದ ದನು ಎಂಬ ಹೆಸರಿನ ರಾಕ್ಷಸ.**

**5. ಶಬರಿ ಗೀತನಾಟಕದ ಕರ್ತೃ ಯಾರು?**
ಶಬರಿ ಗೀತನಾಟಕದ ಕರ್ತೃ **ಪು. ತಿ. ನರಸಿಂಹಾಚಾರ್ಯ.**

*****

**6. ಪಾಶ್ಚಾತ್ಯರಲ್ಲಿ ಮಕ್ಕಳಾದಿಯಾಗಿ ತಿಳಿದುಕೊಂಡಿರುವ ಅಂಶಗಳಾವುವು?**
ಪಾಶ್ಚಾತ್ಯರಲ್ಲಿ ಮಕ್ಕಳಾದಿಯಾಗಿ ಎಲ್ಲರೂ "ಯಾಂತ್ರೀಕರಣ, ವಿದ್ಯುದೀಕರಣ, ಔದ್ಯೋಗೀಕರಣ, ಅಣುಶಕ್ತಿ ಇವುಗಳಿಂದ ಆಗುವ ಉಪಯೋಗ, ಬಳಸುವ ವಿಧಾನ ಹಾಗೂ ಹಾನಿಗಳ ಬಗ್ಗೆ ತಕ್ಕಮಟ್ಟಿನ ಜ್ಞಾನವನ್ನು ಪಡೆದುಕೊಂಡಿರುತ್ತಾರೆ.

**7. ಅಮೆರಿಕ, ಕೆನಡಾ ದೇಶಗಳಲ್ಲಿ ಬೆಂಕಿಯ ಅಪಾಯ ಹೆಚ್ಚು ಏಕೆ?**
ಅಮೆರಿಕ, ಕೆನಡಾ ದೇಶಗಳಲ್ಲಿ ಬೆಂಕಿಯ ಅಪಾಯ ಹೆಚ್ಚು ಏಕೆಂದರೆ ಇಲ್ಲಿ ಮನೆಗಳನ್ನು ಸಾಧಾರಣವಾಗಿ ಮರದಿಂದಲೇ ಕಟ್ಟಿರುತ್ತಾರೆ.

**8. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಸ್ಕೂಲಿನತ್ತ ಹೆಜ್ಜೆ ಹಾಕಲು ಕಾರಣವೇನು?**
ಅಡುಗೆ ಮನೆಯ ವಿದ್ಯುತ್ ಒಲೆಯಿಂದ ಬರುತ್ತಿದ್ದ ಕೊಂಬಿನ ಸದ್ದನ್ನು ನಿಲ್ಲಿಸಲು ತಿಳಿಯದೆ, ಯಾರನ್ನಾದರೂ ಕರೆಯುವ ಉದ್ದೇಶದಿಂದ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಸ್ಕೂಲಿನತ್ತ ಹೆಜ್ಜೆ ಹಾಕಿದರು.

**9. ಅಮೆರಿಕದ ವಿದ್ಯಾರ್ಥಿಗಳನ್ನು ರಂಜಿಸಿದ ಕನ್ನಡ ಸಾಹಿತ್ಯ ಭಾಗಗಳಾವುವು?**
ಗೊರೂರು ರಾಮಸ್ವಾಮಿ ಅಯ್ಯಂಗಾರರು ಹೇಳಿದ ಕನ್ನಡನಾಡಿನ ಅನೇಕ ಜಾನಪದ ಹಾಸ್ಯ ಕಥೆಗಳು, ಗಾದೆಗಳು ಮತ್ತು ಪಂಚತಂತ್ರದ ಕಥೆಗಳು ಅಮೆರಿಕದ ವಿದ್ಯಾರ್ಥಿಗಳನ್ನು ರಂಜಿಸಿದ ಕನ್ನಡ ಸಾಹಿತ್ಯ ಭಾಗಗಳಾಗಿವೆ.

**10. ಶಾಲೆಗೆ ಹೋದ ಕೆಲಸದ ಬಗ್ಗೆ ಗೊರೂರರಿಗೆ ಯಾವಾಗ ಜ್ಞಾನೋದಯವಾಯಿತು?**
'ಅವರ ಹೆಂಡತಿ ಶಾಲೆಯ ಬಾಗಿಲಿನಿಂದ ಒಳಗೆ ಬಂದು, ಅವರ ಮುಂದೆ ನಿಂತಾಗ' ಗೊರೂರು ರಾಮಸ್ವಾಮಿ ಅಯ್ಯಂಗಾರರಿಗೆ ಶಾಲೆಗೆ ಹೋದ ಕೆಲಸದ ಬಗ್ಗೆ ಜ್ಞಾನೋದಯವಾಯಿತು.

*****

**11. ಜೀವನದಲ್ಲಿ ಯಾವುದಕ್ಕೆ ಹೆಚ್ಚಿನ ಸ್ಥಾನವಿದೆ?**
ನಮ್ಮ ಜೀವನದಲ್ಲಿ ಅನ್ಯರ ದೃಷ್ಟಿಕೋನಕ್ಕೂ ಅನ್ಯರ ಜೀವನದಲ್ಲಿ ನಮ್ಮ ದೃಷ್ಟಿಕೋನಕ್ಕೂ ಒಂದು ಹೆಚ್ಚಿನ ಸ್ಥಾನವಿದೆ.

**12. ಅಂತರ್‌ಜೀವಿಗೆ ಯಾವುದು ದೊಡ್ಡ ಸಮಸ್ಯೆಯಾಗುತ್ತದೆ?**
ಅಂತರ್‌ಜೀವಿಗೆ ಉಳಿದವರ ಯೋಗಕ್ಷೇಮವನ್ನು ನೋಡಿಕೊಳ್ಳುವುದು ಒಂದು ದೊಡ್ಡ ಸಮಸ್ಯೆಯಾಗುತ್ತದೆ.

**13. ಅಂತರ್‌ಜೀವಿಯ ಶಕ್ತಿ ಹೇಗೆ ವೆಚ್ಚವಾಗುತ್ತಿರುತ್ತದೆ?**
ಅಂತರ್‌ಜೀವಿಗೆ ತನ್ನ ಮನದ ಮೊಗಸಾಲೆಯನ್ನು ಓರಣವಾಗಿಸುವುದರಲ್ಲಿಯೇ ಅವನ ಎಲ್ಲ ಶಕ್ತಿಯೂ ವೆಚ್ಚವಾಗುತ್ತಿರುತ್ತದೆ.

**14. ಧರ್ಮಗಳು ಹಾಕಿಕೊಟ್ಟಿರುವ ರತ್ನಪಾಠ ಏನು?**
ಸಾಧಕನಿಗೆ, ಅಂತರ್‌ಜೀವಿಗೆ ಯಾವ ತೊಂದರೆಯೂ ಆಗಬಾರದೆಂದು ಅವನನ್ನು ಸಮಾಜವೇ ನೋಡಿಕೊಳ್ಳಬೇಕೆಂಬುದು ಧರ್ಮಗಳು ಹಾಕಿಕೊಟ್ಟ ರತ್ನಪಾಠ.

**15. ಗೃಹಸ್ಥಾಶ್ರಮವು ಧನ್ಯ ಎಂದು ಹೇಳಿದವರು ಯಾರು?**
ಗೃಹಸ್ಥಾಶ್ರಮವು ಧನ್ಯವೆಂದು ಕಾಲಿದಾಸನು ಕಲ್ಪಿಸಿದ ಒಬ್ಬ ಋಷಿ ಅರಣ್ಯಕನು ಹೇಳುತ್ತಾನೆ.

**16. ಬುಕ್ಕರಾಯನ ಹಿರಿಮೆ ಏನು?**
ಅರಿರಾಯ ವಿಭಾಡ ಹಾಗೂ ಭಾಷೆಗೆ ತಪ್ಪುವ ರಾಯರ ಗಂಡ ಎಂಬುದು ಬುಕ್ಕರಾಯನ ಹಿರಿಮೆ.
**17. ಬುಕ್ಕರಾಯನ ರಾಜ್ಯಭಾರ ಕಾಲದಲ್ಲಿ ಯಾರೊಳಗೆ ಸಂವಾದ ನಡೆಯಿತು?**
ಬುಕ್ಕರಾಯನ ರಾಜ್ಯಭಾರ ಕಾಲದಲ್ಲಿ ಜೈನರಿಗೂ ಭಕ್ತರಿಗೂ (ಶ್ರೀವೈಷ್ಣವರಿಗೂ) ಸಂವಾದ ನಡೆಯಿತು.
**18. ನಾಡ ಭವ್ಯ ಜನರು ಬುಕ್ಕರಾಯನ ಬಳಿ ಏನೆಂದು ಬಿನ್ನಹ ಮಾಡಿದರು?**
ನಾಡ ಭವ್ಯ ಜನರು ಬುಕ್ಕರಾಯನ ಬಳಿ ಭಕ್ತರು (ಶ್ರೀವೈಷ್ಣವರು) ಮಾಡುವ ಅನ್ಯಾಯಗಳನ್ನು ಬಿನ್ನಹ ಮಾಡಿದರು.
**19. ಶ್ರೀವೈಷ್ಣವರೊಡನೆ ಮಹಾರಾಜನು ಏನು ಹೇಳಿದನು?**
ಶ್ರೀವೈಷ್ಣವರೊಡನೆ ಮಹಾರಾಜನು ವೈಷ್ಣವ ದರ್ಶನಕ್ಕೂ ಜೈನದರ್ಶನಕ್ಕೂ ಭೇದವಿಲ್ಲವೆಂದು ಹೇಳಿದನು.
**20. ರಾಯನು ವಿಧಿಸಿದ ಕಟ್ಟಳೆಯನ್ನು ಮೀರಿದರೆ ಆಗುವ ಪರಿಣಾಮವೇನು?**
ರಾಯರು ವಿಧಿಸಿದ ಕಟ್ಟಳೆಯನ್ನು ಮೀರಿದರೆ ಅವನು ರಾಜದ್ರೋಹಿ ಎನಿಸುವನು.

*****

**21. ವಿಶ್ವೇಶ್ವರಯ್ಯನವರ ಪೂರ್ವಜರು ಎಲ್ಲಿಯವರು?**
ವಿಶ್ವೇಶ್ವರಯ್ಯನವರ ಪೂರ್ವಜರು ಮೂಲತ: ಆಂಧ್ರಪ್ರದೇಶದ ಕರ್ನೂಲು ಜಿಲ್ಲೆಯ ಗಿಡ್ಡಲೂರು ತಾಲೂಕಿನ 'ಮೋಕ್ಷಗೊಂಡಂ' ಅಗ್ರಹಾರಕ್ಕೆ ಸೇರಿದವರು
**22. ವೆಂಕಟಲಕ್ಷ್ಮಮ್ಮ ಅವರು ತಮ್ಮ ಕುಟುಂಬವನ್ನು ಚಿಕ್ಕಬಳ್ಳಾಪುರಕ್ಕೆ ಸ್ಥಳಾಂತರಿಸಿದ್ದು ಏಕೆ?**
ವೆಂಕಟಲಕ್ಷ್ಮಮ್ಮ ಅವರಿಗೆ ಮಕ್ಕಳು ಹೆಚ್ಚು ಓದಿ ದೊಡ್ಡ ವ್ಯಕ್ತಿಗಳಾಗಬೇಕೆಂಬ ಹಂಬಲವಿತ್ತು ಆದ್ದರಿಂದ ಅವರು ತಮ್ಮ ಕುಟುಂಬವನ್ನು ಚಿಕ್ಕಬಳ್ಳಾಪುರಕ್ಕೆ ಸ್ಥಳಾಂತರಿಸಿದರು.
**23. ಬ್ರಿಟಿಷ್ ಸರ್ಕಾರ ವಿಶ್ವೇಶ್ವರಯ್ಯ ಅವರಿಗೆ ಯಾವ ಪದವಿಯನ್ನು ನೀಡಿ ಗೌರವಿಸಿತು?**
ಬ್ರಿಟಿಷ್ ಸರ್ಕಾರ ವಿಶ್ವೇಶ್ವರಯ್ಯ ಅವರಿಗೆ 'ಸರ್' ಪದವಿಯನ್ನು ನೀಡಿ ಗೌರವಿಸಿತು.
**24. ವಿಶ್ವೇಶ್ವರಯ್ಯ ಅವರನ್ನು ದಿವಾನರಾಗಿ ನೇಮಿಸಿದವರು ಯಾರು?**
ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು ವಿಶ್ವೇಶ್ವರಯ್ಯ ಅವರನ್ನು ದಿವಾನರಾಗಿ ನೇಮಿಸಿದರು.
**25. ವಿಶ್ವೇಶ್ವರಯ್ಯ ಅವರ ಹುಟ್ಟು ಹಬ್ಬದ ನೆನಪಿಗಾಗಿ ಯಾವ ದಿನಾಚರಣೆಯನ್ನು ಮಾಡಲಾಗುತ್ತಿದೆ?**
ವಿಶ್ವೇಶ್ವರಯ್ಯ ಅವರ ಹುಟ್ಟು ಹಬ್ಬದ ನೆನಪಿಗಾಗಿ 'ಎಂಜನಿಯರ್ಸ್ ದಿನಾಚರಣೆ'ಯನ್ನು ಮಾಡಲಾಗುತ್ತಿದೆ.

*****

**26. ಮನೆ ಮಂಚಮ್ಮ ಯಾರು?**
**ಕವಿ ಸಿದ್ಧಲಿಂಗಯ್ಯ ಅವರು ದೇವನೂರು ಮಹಾದೇವ ಅವರಿಗೆ ಹೇಳಿದ ಕತೆಯಲ್ಲಿನ ಗ್ರಾಮದೇವತೆ** ಮನೆ ಮಂಚಮ್ಮ.
**27. ಮನೆಮಂಚಮ್ಮನ ಕತೆ ಹೇಳಿದ ಕವಿ ಯಾರು?**
ಮನೆಮಂಚಮ್ಮನ ಕತೆ ಹೇಳಿದ **ಕವಿ ಸಿದ್ಧಲಿಂಗಯ್ಯ.**
**28. 'ಮಲೆಗಳಲ್ಲಿ ಮದುಮಗಳು' ಯಾರು ಬರೆದ ಕಾದಂಬರಿ?**
'ಮಲೆಗಳಲ್ಲಿ ಮದುಮಗಳು' **ಕುವೆಂಪು (ಕೆ. ವಿ. ಪುಟ್ಟಪ್ಪ)** ಬರೆದ ಕಾದಂಬರಿ.
**29. ಅಶೋಕ ಪೈ ಅವರ ವೃತ್ತಿ ಯಾವುದು?**
ಅಶೋಕ ಪೈ ಅವರು **ಮನೋವೈದ್ಯರು.**
**30. ದೇವನೂರರ 'ನನ್ನ ದೇವರು' ಯಾರೆಂಬುದನ್ನು ಸ್ಪಷ್ಟೀಕರಿಸಿ?**
**ಚಾವಣಿ ಇಲ್ಲದ ಗುಡಿಯಲ್ಲಿ ಕಾರುಣ್ಯ ಸಮತೆಯ ಬುದ್ಧನನ್ನು ಇಟ್ಟರೆ** ಅದು ದೇವನೂರು ಮಹಾದೇವ ಅವರ ದೇವರು ಆಗುತ್ತದೆ.
**31. ಇಂದಲ್ಲ ನಾಳೆ ಫಲ ಕೊಡುವ ಅಂಶಗಳಾವುವು?**
**'ಭೂಮಿಗೆ ಬಿದ್ದ ಬೀಜ ಮತ್ತು ಎದೆಗೆ ಬಿದ್ದ ಅಕ್ಷರ'** ಇಂದಲ್ಲ ನಾಳೆ ಫಲ ಕೊಡುವ ಅಂಶಗಳಾಗಿವೆ.

*****

**32. 'ವೃಕ್ಷಸಾಕ್ಷಿ' ಕತೆಯನ್ನು ಯಾವ ಕೃತಿಯಿಂದ ಆರಿಸಲಾಗಿದೆ?**
'ವೃಕ್ಷಸಾಕ್ಷಿ' ಕತೆಯನ್ನು **ದುರ್ಗಸಿಂಹನ 'ಕರ್ನಾಟಕ ಪಂಚತಂತ್ರ'** ಕೃತಿಯಿಂದ ಆರಿಸಲಾಗಿದೆ.
**33. ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಯಾವ ಆರೋಪವನ್ನು ಹೊರಿಸಿದನು?**
ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ **ಹೊನ್ನಿನ ಕಳ್ಳತನದ** ಆರೋಪವನ್ನು ಹೊರಿಸಿದನು.
**34. ಧರ್ಮಾಧಿಕರಣರು ಏಕೆ ವಿಸ್ಮಯ ಹೊಂದಿದರು?**
**ದುಷ್ಟಬುದ್ಧಿಯು "ಆ ಸ್ಥಳದಲ್ಲಿ ಹೊನ್ನನ್ನು ಇಡುವಾಗ ಈತ ಮತ್ತು ನಾನು ಅಲ್ಲದೆ ಬೇರೆ ಯಾರು ಮನುಷ್ಯರು ಇರಲಿಲ್ಲ. ಆ ಸ್ಥಳದಲ್ಲಿ ಇದ್ದ ಆಲದ ಮರವೇ ಸಾಕ್ಷಿ" ಎಂದು ಹೇಳಿದ್ದನ್ನು ಕೇಳಿ** ಧರ್ಮಾಧಿಕರಣರು ವಿಸ್ಮಯ ಹೊಂದಿದರು.

**35. ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು ಹೇಗೆ ಕಳೆದನು?**
ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು **ದೇವರು, ಗುರುಗಳು, ವೇದಾಧ್ಯಯನ ನಿರತರನ್ನು ಪೂಜೆ ಮಾಡುತ್ತ** ಕಳೆದನು.
**36. ಧರ್ಮಾಧಿಕರಣರು ವಟವೃಕ್ಷದ ಸಮೀಪಕ್ಕೆ ಏಕೆ ಬಂದರು?**
ದುಷ್ಟಬುದ್ಧಿ ಮತ್ತು ಧರ್ಮಬುದ್ಧಿಯ ನಡುವಿನ ವ್ಯಾಜ್ಯವನ್ನು ಪರಿಹರಿಸಲು, ವೃಕ್ಷಸಾಕ್ಷಿಯನ್ನು ಕೇಳಲು **ಧರ್ಮಾಧಿಕರಣರು ವಟವೃಕ್ಷದ ಸಮೀಪಕ್ಕೆ ಬಂದರು.**

*****

**37. ಭಗವದ್ಗೀತೆಯನ್ನು ರಚಿಸಿದವರು ಯಾರು?**
ಭಗವದ್ಗೀತೆಯನ್ನು ರಚಿಸಿದವರು ಮಹರ್ಷಿ ವೇದವ್ಯಾಸರು.
**38. ಹುಲಿಗೆ ಪರಮಾನಂದವಾಗಲು ಕಾರಣವೇನು?**
ಶಾನುಭೋಗರ ದುಂಡುದುಂಡಾದ ಶರೀರವನ್ನು ನೋಡಿ ಹುಲಿಗೆ ಪರಮಾನಂದ ಆಯಿತು.
**39. ಶಾನುಭೋಗರಿಗೆ ತಲೆ ಸುತ್ತಲು ಕಾರಣವೇನು?**
ಹುಲಿಗೆ ತಮ್ಮ ಮುಖದರ್ಶನವಾಗದಂತೆ ತಪ್ಪಿಸಿಕೊಳ್ಳುವ ದೊಂಬರಾಟದಲ್ಲಿ ಶಾನುಭೋಗರಿಗೆ ತಲೆ ಸುತ್ತಲಾರಂಭಿಸಿತು.
**40. ಶಾನುಭೋಗರ ಬ್ರಹ್ಮಾಸ್ತ್ರ ಯಾವುದು?**
ಶಾನುಭೋಗರ ಬ್ರಹ್ಮಾಸ್ತ್ರ ಖಿರ್ದಿ ಪುಸ್ತಕ
**41. ಹಸಿದು ಮಲಗಿದ್ದ ಹುಲಿಯು ಏನೆಂದು ಯೋಚಿಸಿತು?**
ಹಸಿದು ಮಲಗಿದ್ದ ಹುಲಿಯು ವಿಧಿ ಆಹಾರಕ್ಕೆ ಏನನ್ನು ಒದಗಿಸುವುದೋ ಎಂದು ಯೋಚಿಸಿತು.

*****

## ಪದ್ಯಭಾಗ – 3 ಪ್ರಶ್ನೆಗಳು

**1. ಭೀಮನಿಗೆ ಪವನನಂದನನೆಂದು ಹೆಸರು ಬರಲು ಕಾರಣವೇನು?**
**ಪವನನ (ವಾಯುವಿನ) ವರಬಲದಿಂದ ಕುಂತಿಯಲ್ಲಿ ಜನಿಸಿದ್ದರಿಂದ** ಭೀಮನಿಗೆ ಪವನನಂದನ ಎಂದು ಹೆಸರು ಬಂದಿತು.
**2. ಘಟ ಸಂಭೂತ ಯಾರು?**
ಘಟ ಸಂಭೂತ **ಎಂದರೆ ದ್ರೋಣಾಚಾರ್ಯ.**
**3. ಗಾಂಡೀವಿ ಎಂದು ಅರ್ಜುನನನ್ನು ಏಕೆ ಕರೆಯುತ್ತಾರೆ?**
**ಗಾಂಡೀವ ಎಂಬ ಬಿಲ್ಲನ್ನು ಹೊಂದಿರುವುದರಿಂದ** ಅರ್ಜುನನನ್ನು ಗಾಂಡೀವಿ ಎಂದು ಕರೆಯುತ್ತಾರೆ.
**4. ಪಂಪ ಭಾರತದ ಇನ್ನೊಂದು ಹೆಸರೇನು?**
ಪಂಪ ಭಾರತದ ಇನ್ನೊಂದು ಹೆಸರು **'ವಿಕ್ರಮಾರ್ಜುನ ವಿಜಯ'.**

*****

**5. ಹಕ್ಕಿ ಯಾವ ವೇಗದಲ್ಲಿ ಹಾರುತ್ತಿದೆ?**
ಹಕ್ಕಿಯು **ಎವೆ ತೆರೆದಿಕ್ಕುವ ಹೊತ್ತಿನೊಳಗೆ ಅಂದರೆ ಕಣ್ಣು ರೆಪ್ಪೆ ಮಿಟಿಕಿಸುವಷ್ಟು ಸಮಯದಲ್ಲಿ (ನಿಮಿಷದಲ್ಲಿ) ಗಾವುದ ಗಾವುದ ಗಾವುದ ಮುಂದೆ** ಹಾರುತ್ತಿದೆ.
**6. ಹಕ್ಕಿಯ ಗರಿಯಲ್ಲಿ ಯಾವ ಬಣ್ಣಗಳಿವೆ?**
ಹಕ್ಕಿಯ **ಗರಿಯಲ್ಲಿ ಬಿಳಿಯ ಹೊಳೆಯುವ** ಬಣ್ಣಗಳಿವೆ.
**7. ಹಕ್ಕಿಯು ಕಣ್ಣುಗಳು ಯಾವುವು?**
**ಸೂರ್ಯ ಚಂದ್ರರು** ಹಕ್ಕಿಯ ಕಣ್ಣುಗಳು.
**8. ಹಕ್ಕಿಯು ಯಾರ ನೆತ್ತಿಯನ್ನು ಕುಕ್ಕಿದೆ?**
ಹಕ್ಕಿಯು **ಸಾರ್ವಭೌಮರ** ನೆತ್ತಿಯನ್ನು ಕುಕ್ಕಿದೆ.
**9. ಹಕ್ಕಿ ಯಾರನ್ನು ಹರಸಿದೆ?**
ಹಕ್ಕಿಯು **ಹೊಸಗಾಲದ ಹಸುಮಕ್ಕಳನ್ನು** ಹರಸಿದೆ.
**10. ಹಕ್ಕಿಯು ಯಾವುದರ ಸಂಕೇತವಾಗಿದೆ?**
ಹಕ್ಕಿಯು **ಕಾಲಪಕ್ಷಿಯ** ಸಂಕೇತವಾಗಿದೆ.

*****

**11. ಕುಂಪಣಿ ಸರ್ಕಾರ ಹೊರಡಿಸಿದ ಆದೇಶ ಏನು?**
ಕುಂಪಣಿ ಸರ್ಕಾರದ ಅನುಮತಿ ಇಲ್ಲದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು ಎಂಬ ಆದೇಶ ಹೊರಡಿಸಿತು.
**12. ಹಲಗಲಿಯ ನಾಲ್ವರು ಪ್ರಮುಖರು ಯಾರು?**
ಪೂಜೇರಿ ಹನುಮ, ಬ್ಯಾಡರ ಬಾಲ, ಜಡಗ, ರಾಮ ಈ ನಾಲ್ವರು ಹಲಗಲಿಯ ಪ್ರಮುಖರು.

**13 ಹಲಗಲಿಯ ಗುರುತು ಉಳಿಯದಂತಾದದು ಏಕೆ?**
ಹಲಗಲಿಯ ಮೇಲೆ ಬ್ರಿಟಿಷ್ ಸರ್ಕಾರದ ದಂಡು ದಾಳಿ ಮಾಡಿ, ಬೆಂಕಿ ಹಚ್ಚಿದ್ದರಿಂದ ಹಲಗಲಿಯ ಗುರುತು ಉಳಿಯದಂತಾಯಿತು.
**14.ಯಾವ ಘಟನೆ ಹಲಗಲಿ ಲಾವಣಿಗೆ ಕಾರಣವಾಗಿದೆ?**
ಹಲಗಲಿಯ ಭಂಟರ ಹತಾರ ಕದನ ಘಟನೆ ಹಲಗಲಿ ಲಾವಣಿಗೆ ಕಾರಣವಾಗಿದೆ.
**15. ಹಲಗಲಿ ಗ್ರಾಮ ಎಲ್ಲಿದೆ?**
ಹಲಗಲಿ ಗ್ರಾಮವು ಮುಧೋಳ ಸಂಸ್ಥಾನದಲ್ಲಿದ್ದು ಇಂದಿನ ಬಾಗಲಕೋಟೆ ಜಿಲ್ಲೆಗೆ ಸೇರಿದೆ.

*****

**16. ಶಿವನಿಗೆ ಯಾರ ಭಕ್ತಿ ಹಿತವೆನಿಸುತ್ತದೆ?**
ಶಿವನಿಗೆ **ಸತಿಪತಿಗಳು ಒಂದಾದ** ಭಕ್ತಿ ಹಿತವೆನಿಸುತ್ತದೆ.
**17. ನಿಷ್ಠೆಯುಳ್ಳ ಭಕ್ತನಿಗೆ ನಟ್ಟಡವಿಯೂ ಸಹ ಏನೆನಿಸುತ್ತದೆ?**
ನಿಷ್ಠೆಯುಳ್ಳ ಭಕ್ತನಿಗೆ ನಟ್ಟಡವಿಯೂ ಸಹ **ಪಟ್ಟಣ** ಎಂದು ಎನಿಸುತ್ತದೆ.
**18. ಮಾನವನ ಸ್ವಭಾವವನ್ನು ವಚನಕಾರರು ಯಾವುದಕ್ಕೆ ಹೋಲಿಸಿದ್ದಾರೆ?**
ಮಾನವನ ಸ್ವಭಾವವನ್ನು ವಚನಕಾರರು **ಅಂದಣವನ್ನು** ಏರಿದ **ಸೊಣಗನ (ಶುನಕ) ಸ್ವಭಾವಕ್ಕೆ** ಹೋಲಿಸಿದ್ದಾರೆ.
**19. ಕೂಡಲ ಸಂಗಮದೇವ ಯಾವಾಗ ಒಲಿಯುವುದಿಲ್ಲ?**
ಕೂಡಲ ಸಂಗಮದೇವ **ನುಡಿಗೆ ತಕ್ಕ ನಡೆ ಇಲ್ಲದಿದ್ದರೆ** ಒಲಿಯುವುದಿಲ್ಲ.

*****

**20. ಯಾವುದನ್ನು ಎಚ್ಚರದಲಿ ಮುನ್ನಡೆಸಬೇಕು?**
ಬಿರುಗಾಳಿಗೆ ಹೊಯ್ದಾಡುವ ಹಡಗನ್ನು ಎಚ್ಚರದಲ್ಲಿ ಮನ್ನಡೆಸಬೇಕು.
**21. ನದೀಜಲಗಳು ಏನಾಗಿವೆ?**
ನದೀಜಲಗಳು ಕಲುಷಿತವಾಗಿವೆ.
**22. ಯಾವುದಕ್ಕೆ ಮುಂಗಾರಿನ ಮಳೆಯಾಗಬೇಕು?**
ಕಲುಷಿತವಾಗಿರುವ ನದೀಜಲಗಳಿಗೆ ಮುಂಗಾರಿನ ಮಳೆಯಾಗಬೇಕು.
**23. ಕಾಡುಮೇಡುಗಳ ಸ್ಥಿತಿ ಹೇಗಿದೆ?**
ಕಾಡುಮೇಡುಗಳು ಬರಡಾಗಿವೆ.
**24. ಯಾವ ಎಚ್ಚರದೊಳು ಬದುಕಬೇಕಿದೆ?**
ಮತಗಳೆಲ್ಲವೂ ಪಥಗಳು ಎನ್ನುವ ಎಚ್ಚರದೊಳು ಬದುಕಬೇಕಿದೆ.

*****

**25. ಶ್ರೀಕೃಷ್ಣನು ಕರ್ಣನನ್ನು ರಥದಲ್ಲಿ ಹೇಗೆ ಕೂರಿಸಿಕೊಂಡನು?**
**ಕೃಷ್ಣನು ಕರ್ಣನ** ಸಂಗಡ ಮೈದುನತನದ ಸರಸವನ್ನು ಮಾಡಿ, ಕೈಹಿಡಿದು ಎಳೆದು ರಥದ **ಪೀಠದಲ್ಲಿ ಕೂರಿಸಿದನು.**
**26. ಕುಮಾರ ವ್ಯಾಸನ ಆರಾಧ್ಯ ದೈವ ಯಾರು?**
ಕುಮಾರವ್ಯಾಸನ ಆರಾಧ್ಯ ದೈವ **ಗದುಗಿನ ವೀರನಾರಾಯಣ.**
**27. ಅಶ್ವಿನೀದೇವತೆಗಳ ವರಬಲದಿಂದ ಜನಿಸಿದವರು ಯಾರು?**
ಅಶ್ವಿನೀದೇವತೆಗಳ ವರಬಲದಿಂದ ಜನಿಸಿದವರು **ನಕುಲ ಮತ್ತು ಸಹದೇವ.**
**28. ಕುಮಾರವ್ಯಾಸನಿಗೆ ಇರುವ ಬಿರುದು ಯಾವುದು?**
ಕುಮಾರವ್ಯಾಸನಿಗೆ **'ರೂಪಕ ಸಾಮ್ರಾಜ್ಯ ಚಕ್ರವರ್ತಿ'** ಎಂಬ ಬಿರುದು ಇದೆ.
**29. ನಾರಣಪ್ಪನಿಗೆ ಕುಮಾರವ್ಯಾಸ ಎಂಬ ಹೆಸರು ಏಕೆ ಬಂತು?**
ನಾರಣಪ್ಪನು ವ್ಯಾಸರ ಸಂಸ್ಕೃತ ಮಹಾಭಾರತವನ್ನು ಕನ್ನಡದಲ್ಲಿ **'ಕರ್ನಾಟ ಭಾರತ ಕಥಾಮಂಜರಿ'** ಎಂಬ ಕೃತಿಯಾಗಿ ರಚಿಸಿದ್ದರಿಂದ **'ಕುಮಾರವ್ಯಾಸ'** ಎಂಬ ಹೆಸರು ಬಂದಿತು.

*****

**30. 'ಜೈಮಿನಿ ಭಾರತ' ಕಾವ್ಯವನ್ನು ಬರೆದ ಕವಿ ಯಾರು?**
ಜೈಮಿನಿ ಭಾರತ ಕಾವ್ಯವನ್ನು ಬರೆದ ಕವಿ ಲಕ್ಷ್ಮೀಶ.
**31. ಯಜ್ಞಾಶ್ವವನ್ನು ಕಟ್ಟಿದವರು ಯಾರು?**
ಯಜ್ಞಾಶ್ವವನ್ನು ಕಟ್ಟಿದವರು ಲವ.
**32. ಕುದುರೆಯನ್ನು ಲವನು ಯಾವುದರಿಂದ ಕಟ್ಟಿದನು?**
ಕುದುರೆಯನ್ನು ಲವನು ತನ್ನ ಉತ್ತರೀಯದಿಂದ ಕಟ್ಟಿದನು.

**33. ಮುನಿಸುತರು ಹೆದರಲು ಕಾರಣವೇನು?**
ಲವನು ಯಜ್ಞಾಶ್ವವನ್ನು ಕಟ್ಟಿ ಹಾಕಿದ್ದರಿಂದ ಮುನಿಸುತರು ಹೆದರಿದರು.
**34. ಮಾನವ ಗಡಿಯನ್ನು ಹೇಗೆ ನಿರ್ಮಿಸಿಕೊಂಡನು?**
ಮಾನವ ಗಡಿಯನ್ನು **ಮಣ್ಣಿನ (ಭೂಮಿಯ) ಮಾಲೀಕ ಆದೆನೆಂಬ ಅಮಲಿನಿಂದ ಭೂಮಿಯ ಮೇಲೆ ಗೆರೆ ಎಳೆದು** ನಿರ್ಮಿಸಿಕೊಂಡನು.
**35. ಮಾನವನ ಕಾದಾಟಕ್ಕೆ ಕಾರಣವೇನು?**
ಮಾನವನ ಕಾದಾಟಕ್ಕೆ ಕಾರಣ **ಹಮ್ಮು (ಗರ್ವ)**
**36. ಅಜ್ಞಾನ ತೊಲಗಿಸಲು ಕವಯಿತ್ರಿ ಏನಾಗ ಬಯಸಿದ್ದಾರೆ?**
ಮಾನವನ ಅಜ್ಞಾನ ತೊಲಗಿಸಲು ಕವಯಿತ್ರಿ ವಾಗ್ದೇವಿಯ ಕೈಯಲ್ಲಿರುವ ಗ್ರಂಥವಾಗಬೇಕು ಎಂದು ಬಯಸಿದ್ದಾರೆ.
**37. ಸದಾ ಚಿಮ್ಮುವ ಚಿಲುಮೆಯಾಗಬೇಕು ಏಕೆ?**
ದಾಹಗೊಂಡವರ ತನುವನ್ನು ತಣಿಸುವುದಕ್ಕಾಗಿ ಸದಾ ಚಿಮ್ಮುವ ಚಿಲುಮೆ ಆಗಬೇಕು.

### ಪಠ್ಯಪೋಷಕ ಅಧ್ಯಯನ ಭಾಗ – 1 ಪ್ರಶ್ನೆ

**1. ಮುದ್ದು ಪಾರಿವಾಳಗಳ ಜೋಡಿ ಎಲ್ಲಿ ಸಂಸಾರ ಹೂಡಿತ್ತು?**
ದಟ್ಟ ಕಾಡಿನಲ್ಲಿ ಮರದ ಪೊಟರೆಯಲ್ಲಿ ಮುದ್ದು ಪಾರಿವಾಳಗಳ ಜೋಡಿ ಸಂಸಾರ ಹೂಡಿತ್ತು.
**2. ಜೋಡಿ ಪಾರಿವಾಳಗಳು ಹೇಗೆ ಬಾಳುತ್ತಿದ್ದವು?**
ಜೋಡಿ ಪಾರಿವಾಳಗಳು ಒಂದನ್ನೊಂದು ಅಗಲದಂತೆ ಹಗಲಿರುಳು ಜೊತೆಗೂಡಿ ಬಾಳುತ್ತಿದ್ದವು.
**3. ಪಾರಿವಾಳಗಳ ಆನಂದಕ್ಕೆ ಕಾರಣವೇನು?**
ಪಾರಿವಾಳ ಇಟ್ಟ ಮೊಟ್ಟೆಗಳು ಒಡೆದು ಹೊರಬಂದ ಮುದ್ದು ಮರಿಗಳ ಮಧುರ ಸದ್ದನ್ನು ಕೇಳಿ ಪಾರಿವಾಳಗಳು ಆನಂದಪಟ್ಟವು.

**ಈ ಕೆಳಗಿನವುಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ** **10 * 02 = 20**
**(ಗದ್ಯಭಾಗ 4. ಪದ್ಯಭಾಗ 2 ಮತ್ತು ಪಠ್ಯಪೋಷಕ ಅಧ್ಯಯನ ಭಾಗ 4 ಪ್ರಶ್ನೆಗಳು ಬರುತ್ತವೆ.)**

### ಗದ್ಯಭಾಗ – 4 ಪ್ರಶ್ನೆಗಳು

**1. ರಾಮನು ಗಿರಿವನವನ್ನು ಏನೆಂದು ಪ್ರಾರ್ಥಿಸಿದನು?**
ರಾಮನು ಗಿರಿವನಗಳನ್ನು ಕುರಿತು "ಗಿರಿವನಗಳೇ, ನಾನು ನಿಮ್ಮನ್ನು ಬೇಡಿಕೊಳ್ಳುವೆನು. ಹೇಳಿರಿ, ಪ್ರೀತಿಯ ರಾಣಿ ಸೀತೆಯು ನನಗೆ ದೊರೆಯುವಳೇ? ಅವಳು ಇರುವ ಸ್ಥಳವನ್ನು ನೀವು ತಿಳಿದಿರುವಿರೇ? ನನ್ನ ಹೃದಯದ ಈ ದುಃಖವು ನಾಶವಾಗುತ್ತಿಲ್ಲವಲ್ಲ" ಎಂದು ಪ್ರಾರ್ಥಿಸಿದನು.
**2. ಲಕ್ಷ್ಮಣನು ಅಣ್ಣನನ್ನು ಹೇಗೆ ಸಂತೈಸಿದನು ತಿಳಿಸಿ?**
ಲಕ್ಷ್ಮಣನು ಸೀತೆಗಾಗಿ ಪರಿತಪಿಸುತ್ತಿದ್ದ ಅಣ್ಣನಾದ ರಾಮನನ್ನು ಕುರಿತು "ತಾಳಿಕೋ ಅಣ್ಣ ತಾಳಿಕೋ, ಸೂರ್ಯನೇ ತೇಜಗೆಡಲು ಕಾಂತಿಯನ್ನು ನೀಡುವವರು ಯಾರು? ರಾಮನೇ ಧೈರ್ಯಗೆಡಲು ಲೋಕಕ್ಕೆ ಸ್ಥೈರ್ಯ ನೀಡುವವರು ಯಾರು?" ಎಂದು ಹೇಳಿ ಸಂತೈಸಿದನು.
**3. ರಾಮನ ಸ್ವಾಗತಕ್ಕಾಗಿ ಶಬರಿ ಮಾಡಿಕೊಂಡಿದ್ದ ಸಿದ್ಧತೆಗಳೇನು?**
ರಾಮನ ಸ್ವಾಗತಕ್ಕಾಗಿ ಶಬರಿಯು ಸವಿಯಾದ ಬಗೆಬಗೆಯ ಹಣ್ಣುಗಳನ್ನು, ಜೇನುತುಪ್ಪ ಅಧಿಕವಾಗಿರುವ ಮಧುಪರ್ಕವೆಂಬ ಪಾನೀಯವನ್ನು, ಸುವಾಸನೆಯಿಂದ ಕೂಡಿದ ಬಾಡದ ಹೂವುಗಳನ್ನು ಸಂಗ್ರಹಿಸಿ ಸಿದ್ಧಮಾಡಿಕೊಂಡಿದ್ದಳು.
**4. ಶಬರಿಯು ರಾಮಲಕ್ಷ್ಮಣರನ್ನು ಉಪಚರಿಸಿದ ರೀತಿಯನ್ನು ವಿವರಿಸಿ.**
ಶಬರಿಯು ರಾಮಲಕ್ಷ್ಮಣರನ್ನು ಕಂಡು ಬೆರಗಾಗಿ, ಹತ್ತಿರಕ್ಕೆ ಬಂದು, ಮೈಯನ್ನು ಮುಟ್ಟಿ, ಕಾಲಿಗೆ ಬಿದ್ದು ನಮಸ್ಕರಿಸಿ, ಕೈಯನ್ನು ಕಣ್ಣಿಗೊತ್ತಿಕೊಂಡಳು. ಬಗೆಬಗೆಯ ಸುವಾಸನೆಯುಳ್ಳ ಹೂಮಾಲೆಯನ್ನು ಕೊರಳಿಗೆ ಹಾಕಿ ಸಂತಸಪಟ್ಟಳು. "ಜಗದಲ್ಲಿ ಇದರಷ್ಟು ರುಚಿಯಾದ ಹಣ್ಣೇ ಇಲ್ಲ. ನಿಮಗೆಂದೆ ತಂದೆನು" ಎಂದು ಹೇಳುತ್ತ ಸವಿಯಾದ ಹಣ್ಣುಗಳನ್ನು ನೀಡಿ ಉಪಚರಿಸಿದಳು.
**5. ಆತಿಥ್ಯ ಸ್ವೀಕರಿಸಿದ ರಾಮಲಕ್ಷ್ಮಣರು ಶಬರಿಗೆ ಏನು ಹೇಳಿದರು?**
ಆತಿಥ್ಯ ಸ್ವೀಕರಿಸಿದ ರಾಮಲಕ್ಷ್ಮಣರು ಶಬರಿಗೆ "ನಾವು ನಿನ್ನ ಪ್ರೀತಿಯ ಸ್ವಾಗತದಿಂದ ಸಂತಸಗೊಂಡೆವು. ನಿನ್ನ ಸುಖದಲ್ಲಿ ನಮ್ಮ ಸುಖ ಕಂಡೆವು. ಕಣ್ಣಿಗೆ ಕಾಣದ ಆನಂದವನ್ನು ಅನುಭವಿಸುವ ಪುಣ್ಯ ನಮ್ಮದಾಯಿತು. ನಾವು ನಿನಗೆ ಎಂದೆಂದಿಗೂ ಋಣಿಗಳು" ಎಂದು ಹೇಳಿದರು.

*****

**6. ವಿದ್ಯಾರ್ಥಿಗಳು ಗೊರೂರರರನ್ನು ಕಂಡು ಭಯಗೊಳ್ಳಲು ಕಾರಣವೇನು?**

ಅಗಲವಾದ ಎಂಟೂವರೆ ಮೊಳ ಉದ್ದದ, ನಾಲ್ಕು ಜರಿ ಗೆರೆಗಳುಳ್ಳ ಕೆಂಪು ಕಂಬಿಯ ಖಾದಿ ಕಚ್ಚೆ ಪಂಚೆ, ಕಾವಿ ಬಣ್ಣದ ನೀಳವಾದ ಜುಬ್ಬ, ಕೆಂಪು ಉಣ್ಣೆಯ ಶಾಲು, ಕೊರಳಿನಲ್ಲಿ ಜೋತಾಡುತ್ತಿದ್ದ ಮಫ್ಲರ್, ಹಣೆಯಲ್ಲಿ ಢಾಳಾದ ಕೆಂಪು ನಾಮ, ತಲೆಯ ಮೇಲೆ ಕೆದರಿ ನಿಂತಿದ್ದ ಬಿಳಿ ಕೂದಲು, ಬಿಳಿಗಡ್ಡ, ಮೀಸೆ, ಕಾಲಿಗೆ ದಪ್ಪನಾದ ಎಕ್ಕಡ ಇವುಗಳನ್ನೆಲ್ಲ ಧರಿಸಿದ್ದ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರನ್ನು ಕಂಡು ವಿದ್ಯಾರ್ಥಿಗಳು ಭಯಗೊಂಡರು.

**7. ಶಾಲೆಗೆ ಹೋದ ಉದ್ದೇಶವನ್ನು ಗೊರೂರರು ಮರೆತದ್ದು ಏಕೆ?**

ವಿದ್ಯುತ್ ಒಲೆಯಿಂದ ಬರುತ್ತಿದ್ದ ಕೊಂಬಿನ ಸದ್ದನ್ನು ನಿಲ್ಲಿಸಲು ತಿಳಿಯದೆ, ಯಾರನ್ನಾದರೂ ಕರೆಯೋಣವೆಂದು ಗೊರೂರರು ಸ್ಕೂಲಿನತ್ತ ಹೆಜ್ಜೆ ಹಾಕಿದರು. ಆಗ ಅವರ ವಿಚಿತ್ರವಾದ ವೇಷಭೂಷಣವನ್ನು ಕಂಡು ವಿದ್ಯಾರ್ಥಿಗಳು ಭಯಗೊಂಡರು. ಉಪಾಧ್ಯಾಯರೊಬ್ಬರು "ನಿಮ್ಮ ಉಡುಪು ಸ್ವಲ್ಪ ವಿಚಿತ್ರವಾಗಿದೆ . . ." ಎಂದರೆ, ಉಪಾಧ್ಯಾಯಿನಿ "ನಿಮಗೆ ಚಳಿಯಾಗುವುದಿಲ್ಲವೇ? . . ." ಎಂದು ಕೇಳಿದರು. ಈ ಅವಾಂತರದಲ್ಲಿ ಗೊರೂರರು ಶಾಲೆಗೆ ಬಂದ ಉದ್ದೇಶವನ್ನೇ ಮರೆತುಬಿಟ್ಟರು.

**8. ಗೊರೂರು ರಾಮಸ್ವಾಮಿ ಅಯ್ಯಂಗಾರರು ಇದ್ದ ಮನೆಯಲ್ಲಿ ಬೆಂಕಿ ಹೊತ್ತಿಕೊಂಡೀತು ಎಂದು ಆತಂಕ ಪಟ್ಟದ್ದು ಏಕೆ?**

ಗೊರೂರು ರಾಮಸ್ವಾಮಿ ಅಯ್ಯಂಗಾರರು ಇದ್ದ ಮನೆಯ ಅಡುಗೆಯ ಮನೆಯ ಎಲ್ಲ ಸ್ವಿಚ್‌ಗಳೂ ಆಫ್ ಆಗಿದ್ದರೂ ವಿದ್ಯುತ್ ಒಲೆಯಿಂದ ಕೊಂಬಿನ ಸದ್ದು ಒಂದೇ ಸಮನಾಗಿ ಬರುತ್ತಿತ್ತು. ವಿದ್ಯುತ್ ಒಲೆಗಳ ಸ್ವಿಚ್ ಜೋಡಣೆ ಹೊಸ ತರಹದಾಗಿದ್ದು ಅಸಂಖ್ಯಾತ ಅಂಕಿ, ಗೆರೆ ಮತ್ತು ಬಣ್ಣಗಳಿಂದ ಕೂಡಿತ್ತು. "ಯಾವುದನ್ನು ಮುಟ್ಟಿದರೆ ಏನೋ" ಎಂಬ ಭಯದಿಂದ "ಮನೆಯಲ್ಲಿ ಬೆಂಕಿ ಹೊತ್ತಿ ಕೊಂಡೀತು" ಎಂಬ ಆತಂಕವನ್ನು ಉಂಟುಮಾಡಿತ್ತು.

*****

**9. ಅಂತರ್‌ಜೀವಿಗೆ ಸುಲಭವಾಗಿ ರಕ್ತಗತವಾಗದ ಸಂಗತಿ ಯಾವುದು?**

ಅಂತರ್‌ಜೀವಿಗೆ ಉಳಿದವರ ಯೋಗಕ್ಷೇಮವನ್ನು ನೋಡಿಕೊಳ್ಳುವುದು ಒಂದು ದೊಡ್ಡ ಸಮಸ್ಯೆಯಾಗುತ್ತದೆ. ತನ್ನ ಯೋಗಕ್ಷೇಮವನ್ನೇ ಭಗವಂತನ ಮೇಲೆ ಹೊರಿಸಲು ಕಲ್ಪನೆಯು ಧ್ಯೇಯಗಳ ಜಗತ್ತಿನಲ್ಲಿ ಹೊಳೆಯುವುದು ಸುಲಭವಾಗಿ ರಕ್ತಗತವಾಗುವುದಿಲ್ಲ. ಉಳಿದವರನ್ನು ಪ್ರೀತಿಯಿಂದ ಅವನು ಕಾಣಬಲ್ಲ. ತನ್ನಿಂದ ಆದಷ್ಟು ಯಾರಿಗೂ ತೊಂದರೆಯಾಗಬಾರದೆಂದು ಅವನು ಎಚ್ಚರಪಡಬಲ್ಲ.

**10. ಕಲೋಪಾಸಕನ ಕರ್ತವ್ಯ ಏನು?**

ಕಲೋಪಾಸಕನೂ ಒಬ್ಬ ವ್ಯಕ್ತಿ; ಸಮಾಜದ–ಮನುಕುಲದ–ಒಂದು ಘಟಕ. ಪರಾಂತಃಕರಣಪ್ರವೇಶಿಯಾಗಿ ಜನತೆಯ ಮನವನ್ನೂ, ಅಂತಃಕರಣವನ್ನೂ ಅವನು ತಿದ್ದಬಹುದು. ಆದರೆ ಯಾವ ವ್ಯಕ್ತಿಗಳೊಡನೆ ಅವನ ಸಂಬಂಧ ಬರುವುದೋ ಅವರ ಅಂತಃಕರಣವನ್ನು ನೋಯಿಸದಂತೆ ತನ್ನನ್ನು ಅಲಕ್ಷಿಸಿಯಾದರೂ ಉಳಿದವರ ಹಿತಚಿಂತನೆ ಹಾಗೂ ಹಿತಸಾಧನೆಯಲ್ಲಿ ತೊಡಗುವುದು ಎಲ್ಲ ವ್ಯಕ್ತಿಗಳಂತೆ ಅವನ ಕರ್ತವ್ಯವೂ ಆಗಿದೆ.

**11. ಸಾಧಕನ ಯೋಗಕ್ಷೇಮವನ್ನು ಸಮಾಜ ಹೇಗೆ ನಿರ್ವಹಿಸುತ್ತಿತ್ತು?**

ಸಾಧಕನಿಗೆ ಯಾವ ತೊಂದರೆಯೂ ಆಗಬಾರದೆಂದು, ಅವನನ್ನು ಸಮಾಜವೇ ನೋಡಿಕೊಳ್ಳಬೇಕೆಂದು, ಎಲ್ಲ ಧರ್ಮಗಳು ಹೇಳಿವೆ. ಆದ್ದರಿಂದ ಸಾಧಕರ ಯೋಗಕ್ಷೇಮವನ್ನು ನೋಡಿಕೊಳ್ಳಲು ಧರ್ಮಶಾಲೆಗಳಲ್ಲಿ, ವಿಹಾರಗಳಲ್ಲಿ, ಅನ್ನಛತ್ರಗಳಲ್ಲಿ, ದೇವಸ್ಥಾನಗಳಲ್ಲಿ ಹಾಗೂ ಮಠಗಳಲ್ಲಿ ಉಚಿತ ವ್ಯವಸ್ಥೆಯನ್ನು ಏರ್ಪಡಿಸಲಾಗುತ್ತಿತ್ತು. ಕೆಲವರು ಸಾಧಕರನ್ನು ಮನೆಯಲ್ಲಿಟ್ಟುಕೊಂಡು ಅವರ ಯೋಗಕ್ಷೇಮವನ್ನು ನೋಡಿಕೊಂಡಿದ್ದು ಉಂಟು. ಹೀಗೆ ಸಮಾಜವು ಸಾಧಕನ ಯೋಗಕ್ಷೇಮವನ್ನು ನಿರ್ವಹಿಸುತ್ತಿತ್ತು.

**12. ಸಹಾನುಭೂತಿಗಾಗಿ ಇರಬೇಕಾದ ಎರಡು ಕಣ್ಣುಗಳಾವುವು?**

ಸಹಾನುಭೂತಿಗಾಗಿ ಇರಬೇಕಾದ ಎರಡು ಕಣ್ಣುಗಳೆಂದರೆ ಒಂದು ತನ್ನಿಂದ ಹೆರವರಿಗೆ ಯಾವ ತೊಂದರೆಯೂ ಮಾನಸಿಕ ವ್ಯಥೆಯೂ ಆಗದಂತೆ ಎಚ್ಚರಪಡುವ ಕಣ್ಣು: ಇನ್ನೊಂದು ತನ್ನ ಅಳವಿನಲ್ಲಿ ಹೆರವರ ಐಹಿಕ, ಮಾನಸಿಕ ಇಲ್ಲವೆ ಆತ್ಮಿಕ ಹಿತಚಿಂತನೆ ಎಲ್ಲೆಲ್ಲಿ ಸಾಧ್ಯ ಎಂದು ಸದಾ ಅಭ್ಯಸಿಸುವ ಕಣ್ಣು.

*****

**13. 'ಧರ್ಮಸಮದೃಷ್ಟಿ' ಪಾಠದಲ್ಲಿ ರಾಮಾನುಜಾಚಾರ್ಯರ ಗುಣವಿಶೇಷತೆಯನ್ನು ಹೇಗೆ ಕೊಂಡಾಡಲಾಗಿದೆ?**

'ಧರ್ಮಸಮದೃಷ್ಟಿ' ಪಾಠದಲ್ಲಿ ರಾಮಾನುಜಾಚಾರ್ಯರನ್ನು ಪಾಷಂಡ (ನಾಸ್ತಿಕ) ಸಾಗರ ಮಹಾಬಡಬಾಮುಖಾಗ್ನಿಯಂತಿರುವವರು, ಶ್ರೀರಂಗರಾಜ ಪಾದಕಮಲಗಳಲ್ಲಿ ಮೂಲದಾಸರಾದವರು, ಶ್ರೀವಿಷ್ಣುಲೋಕ ಮುನಿಮಂಟಪ ಮಾರ್ಗ ದಾಯಿಗಳು, ಯತಿರಾಜರಾಜರಂತಿರುವವರು ಎಂದು ಕೊಂಡಾಡಲಾಗಿದೆ.

**14. ಬುಕ್ಕರಾಯನು ನಡೆಸಿದ ಧರ್ಮಸಭೆಗೆ ಯಾರನ್ನೆಲ್ಲ ಆಹ್ವಾನಿಸಿದನು?**

ಕೋವಿಲ್, ತಿರುಮಲೆ, ಪೆರುಮಾಳ್‌ಕೋವಿಲ್, ತಿರು ನಾರಾಯಣಪುರ ಮುಖ್ಯಕ್ಷೇತ್ರಗಳ ಸಕಲಾಚಾರ್ಯರು, ಸಕಲ ಧರ್ಮಾನುಯಾಯಿಗಳು, ಸಕಲ ಸಾತ್ವಿಕರು, ಮೋಷ್ಟಿಕರು, ತಿರುಪಣಿ, ತಿರುವಿಡಿ, ತಣ್ಣೀರವರು, ನಲವತ್ತೆಂಟು ಕುಲದವರು, ಸಾಮಂತರಾದ ಮಲೆನಾಡಿನವರು, ತಿರಿಕುಲ, ಜಾಂಬವಕುಲ ಒಳಗೊಂಡ ಹದಿನೆಂಟು ನಾಡಿನವರನ್ನು ಬುಕ್ಕರಾಯನು ನಡೆಸಿದ ಧರ್ಮಸಭೆಗೆ ಆಹ್ವಾನಿಸಿದನು.

**15. ಜೈನಧರ್ಮದ ಸುಧಾರಣೆಗಾಗಿ ಬುಕ್ಕರಾಯನು ಕೈಗೊಂಡ ಕ್ರಮಗಳೇನು?**

ಜೈನಧರ್ಮದ ಸುಧಾರಣೆಗಾಗಿ ಬುಕ್ಕರಾಯನು ಸಮಸ್ತ ರಾಜ್ಯದ ಜೈನಮತದ ಜನಗಳ ಅನುಮತದಿಂದ "ಬೆಳುಗೊಳದ ಪುಣ್ಯಕ್ಷೇತ್ರದಲ್ಲಿ ವೈಷ್ಣವ ಅಂಗರಕ್ಷೆಗಾಗಿ ಸಮಸ್ತ ರಾಜ್ಯದೊಳಗೆ ಇರುವಂತಹ ಜೈನರ ಬಾಗಿಲು ಕಟ್ಟಳೆಯಾಗಿ ಮನೆಮನೆಗೆ ವರ್ಷಕ್ಕೆ ಒಂದು ಹಣ ಕೊಡುವುದು. ಹಾಗೆ ಸಂಗ್ರಹಿಸಿದ ಆ ಒಂದು ಹಣದಿಂದ ದೇವರ ಅಂಗರಕ್ಷೆಗೆ ಇಪ್ಪತ್ತು ಆಳುಗಳನ್ನು ನೇಮಿಸಿ, ಉಳಿದ ಹೊನ್ನಿನಿಂದ ಜೀರ್ಣಾವಸ್ಥೆಯಲ್ಲಿರುವ ಜಿನಾಲಯಗಳಿಗೆ ಸುಣ್ಣ ಬಳಿಸುವುದು" ಎಂದು ಶಾಸನ ಬರೆಸಿದನು.

*****

**16. ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯ ಅವರು ಏನೆಂದು ಹೇಳಿದ್ದಾರೆ?**

ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯ ಅವರು "ಆಧುನಿಕ ಶಿಕ್ಷಣವೇ ಎಲ್ಲ ಸಮಸ್ಯೆಗಳಿಗೂ ಪರಮೋಚ್ಚ ಪರಿಹಾರ. ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು. ಅದು ಕೆಲವೇ ಜನರ ಸ್ವತ್ತಾಗದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕು" ಎಂದು ಹೇಳಿದ್ದಾರೆ.

**17. ನೆಹರೂ ಅವರು ಸರ್. ಎಂ. ವಿಶ್ವೇಶ್ವರಯ್ಯ ಅವರ ಬಗ್ಗೆ ಏನೆಂದು ಹೇಳಿದ್ದಾರೆ?**

ನೆಹರೂ ಅವರು ಸರ್. ಎಂ. ವಿಶ್ವೇಶ್ವರಯ್ಯ ಅವರ ಶತಮಾನೋತ್ಸವ ಸಮಾರಂಭದಲ್ಲಿ ವಿಶ್ವೇಶ್ವರಯ್ಯ ಅವರನ್ನು ಕುರಿತು "ದುರದೃಷ್ಟವಶಾತ್ ಭಾರತೀಯರಾದ ನಾವು ಹೆಚ್ಚು ಮಾತನಾಡುವವರು ಮತ್ತು ನುಡಿದಂತೆ ನಡೆಯಲಾರದವರು ಎಂಬ ದೂಷಣೆಗೆ ಒಳಗಾಗಿದ್ದೇವೆ. ತಾವು ಈ ಮಾತಿಗೆ ಬಹು ದೊಡ್ಡ ರೀತಿಯಲ್ಲಿ ಹೊರತಾಗಿದ್ದೀರಿ. ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ. ಅದನ್ನು ನಾವು ತಮ್ಮಿಂದ ಕಲಿಯೋಣ" ಎಂದು ಹೇಳಿದ್ದಾರೆ.

**18. ಹೈದರಾಬಾದ್ ನಗರದಲ್ಲಿ ವಿಶ್ವೇಶ್ವರಯ್ಯ ಅವರು ಸಲ್ಲಿಸಿದ ಸೇವೆ ಯಾವುದು?**

ಹೈದರಾಬಾದ್ ನಗರಕ್ಕೆ ಈಸಿ ಮತ್ತು ಮೂಸಿ ನದಿಗಳ ಪ್ರವಾಹದಿಂದ ಅಪಾರ ನಷ್ಟ ಸಂಭವಿಸುತ್ತಿತ್ತು. ಅದನ್ನು ತಡೆಯಲು ಎರಡು ನದಿಗಳಿಗೂ ಪ್ರತ್ಯೇಕ ಜಲಾಶಯ ನಿರ್ಮಿಸುವ ಮೂಲಕ ಸಮಸ್ಯೆಯನ್ನು ವಿಶ್ವೇಶ್ವಯ್ಯನವರು ಬಗೆಹರಿಸಿದರು. ಅವರು ಹೈದರಾಬಾದ್ ನಗರವನ್ನು ಭಾರತದ ಸುಯೋಜಿತ ನಗರಗಳ ಸಾಲಿಗೆ ಸೇರ್ಪಡೆಯಾಗುವಂತೆ ಮಾಡಿದರು.

**19. ಎಂಜಿನಿಯರ್‌ಗಳಿಗೆ ವಿಶ್ವೇಶ್ವರಯ್ಯ ಅವರು ಏನೆಂದು ಮಾರ್ಗದರ್ಶನ ಮಾಡಿದರು?**

ವಿಶ್ವೇಶ್ವರಯ್ಯ ಅವರು ಎಂಜಿನಿಯರುಗಳಿಗೆ "ನಮ್ಮ ಕೆಲಸಗಳು ಪ್ರಮಾಣದಲ್ಲಿ ಚಿಕ್ಕದಿರಬಹುದು, ಆದರೆ ಪ್ರಪಂಚದಾದ್ಯಂತ ಯಾವುದೇ ವರ್ಗದ ಕಾಮಗಾರಿಯ ಎಂಜಿನಿಯರಿಂಗ್ ಗುಣಲಕ್ಷಣಗಳು ಒಂದೇ ಆಗಿರುತ್ತವೆ ಈ ಕಾಮಗಾರಿಗಳನ್ನು ಕುಶಲತೆ ಮತ್ತು ಕಡಿಮೆ ವೆಚ್ಚದಲ್ಲಿ ಕಾರ್ಯಗತಗೊಳಿಸಬೇಕೆಂದರೆ ಇತರ ಯಾವುದೇ ದೇಶದ ಎಂಜಿನಿಯರ್ ಪಡೆಯುವಷ್ಟೇ ತರಬೇತಿ ಮತ್ತು ಜ್ಞಾನವನ್ನು ಪಡೆಯಬೇಕು. ಮಾಹಿತಿಗಳಲ್ಲಾಗಲಿ, ವಿಧಾನಗಳಲ್ಲಾಗಲಿ ನಾವು ಹಿಂದುಳಿಯುವುದು ಉಚಿತವಲ್ಲ" ಎಂದು ಮಾರ್ಗದರ್ಶನ ಮಾಡಿದರು.

**20. ಹಣಕಾಸು ನೀತಿಯಲ್ಲಿ ವಿಶ್ವೇಶ್ವರಯ್ಯ ಅವರು ಮಾಡಿದ ಮಾರ್ಪಾಡುಗಳಾವುವು?**

ವಿಶ್ವೇಶ್ವರಯ್ಯ ಅವರು ಕ್ರಿ.ಶ. 1913ರಲ್ಲಿ ಮೈಸೂರು ಬ್ಯಾಂಕನ್ನು ಸ್ಥಾಪಿಸಿದರು. ಕೈಗಾರಿಕೆಗಳ ಅಭಿವೃದ್ಧಿಗೆ ಫೀಡರ್ ಬ್ಯಾಂಕ್ ಹಾಗೂ ಕೈಗಾರಿಕಾ ಹೂಡಿಕೆ ಮತ್ತು ಅಭಿವೃದ್ಧಿ ನಿಧಿಗಳು ರಚಿತಗೊಂಡವು. ಸಾರ್ವಜನಿಕ ಜೀವವಿಮಾ ಯೋಜನೆ ಜಾರಿಗೆ ತಂದರು. ರೈತರಿಗೆ ಹಾಗೂ ಕರಕುಶಲ ಕೆಲಸಗಾರರಿಗೆ ಸಾಲದ ಸೌಲಭ್ಯ ನೀಡಲು ಪ್ರಾಂತೀಯ ಸಹಕಾರಿ ಬ್ಯಾಂಕ್‌ಗಳನ್ನು ಸ್ಥಾಪಿಸಿದರು. ರಾಜ್ಯದ ಆಸ್ತಿಯನ್ನು ಹೆಚ್ಚಿಸಿ ಆದಾಯ ತರುವುದರ ಮೂಲಕ ಅಭಿವೃದ್ಧಿ ಕಾರ್ಯಗಳ ಪ್ರಭಾವವನ್ನು ಅಳೆಯಲು ಅನುಕೂಲವಾಗುವಂತೆ ಆಯವ್ಯಯದಲ್ಲಿ ಹೊಸ ದೃಷ್ಟಿಕೋನವನ್ನು ಕಂಡುಕೊಂಡರು.

*****

**21. ಅಶೋಕ ಪೈ ಅವರು ಹೇಳಿದ ಸಂಶೋಧನಾ ಸತ್ಯವೇನು?**

ಕೆಲವರು ಒಂದು ಕೊಠಡಿಯಲ್ಲಿ ಕುಳಿತು ಟೆಲಿವಿಷನಲ್ಲಿ ಕೊಲೆ ದೃಶ್ಯವನ್ನು ನೋಡುತ್ತಿರುತ್ತಾರೆ. ಇನ್ನೊಂದು ಕೊಠಡಿಯಲ್ಲಿ ಇದರ ಅರಿವಿಲ್ಲದೆ ತಮ್ಮಷ್ಟಕ್ಕೆ ತಾವಿರುವ ಜನರಿಗೂ ಸ್ವಲ್ಪಮಟ್ಟಿಗೆ ದುಗುಡವಾಗುತ್ತದೆ. ಇದೇ ರೀತಿ ಕೊಠಡಿಯಲ್ಲಿ ನೃತ್ಯ ದೃಶ್ಯ ನೋಡುತ್ತಿರುವವರ ಖುಷಿ ಭಾವನೆಯು ಪಕ್ಕದ ಕೊಠಡಿಯಲ್ಲಿ ಇದನ್ನು ನೋಡದೆ ತಮ್ಮಷ್ಟಕ್ಕೆ ತಾವೇ ಇದ್ದವರ ಮನಸ್ಸಿನ ಮೇಲೂ ಪರಿಣಾಮ ಬೀರಿ ಸ್ವಲ್ಪಮಟ್ಟಿಗೆ ಸಂತೋಷದ ಭಾವನೆ ಉಂಟಾಗುತ್ತದೆ. ಇದು ಅಶೋಕ ಪೈ ಅವರು ಹೇಳಿದ ಸಂಶೋಧನಾ ಸತ್ಯ.

**22. 'ವಚನಧರ್ಮ'ದ ಬಗೆಗೆ ದೇವನೂರರ ಅಭಿಪ್ರಾಯ ಏನು?**

"ಕರ್ನಾಟಕದ ಹನ್ನೆರಡನೆಯ ಶತಮಾನದಲ್ಲಿ ನಡೆದ ವಚನ ಆಂದೋಲನ ಜಗತ್ತಿನಲ್ಲಿ ಎಲ್ಲೂ ನಡೆದಿಲ್ಲ. ಈ ವಚನ ಧರ್ಮವನ್ನು ಜಾತಿಯ ಬಚ್ಚಲಿನಿಂದ ಮೇಲೆತ್ತಿ ರಕ್ಷಿಸಿದರೆ ಜಗತ್ತಿಗೆ ಇದು ಬೆಳಕಾಗಬಹುದು. ಇದು ಜಾತಿಯಾದರೆ ಕೆಟ್ಟ ಜಾತಿ; ಧರ್ಮವಾದರೆ ಮಹೋನ್ನತ ಧರ್ಮ" ಎಂಬುದು 'ವಚನ ಧರ್ಮದ ಬಗೆಗೆ ದೇವನೂರರ ಅಭಿಪ್ರಾಯವಾಗಿದೆ.

**23. ಪರಮಹಂಸರ ವ್ಯಕ್ತಿತ್ವದ ವೈಶಿಷ್ಟ್ಯ ಎಂಥದ್ದು?**

"ಒಂದು ದೇಹ ಮನಸ್ಸು ಅದೆಷ್ಟು ಮಾಧ್ಯಮವಾಗಬಹುದೋ ಅದಷ್ಟೂ ಒಂದೇ ದೇಹದಲ್ಲಿ ಸಂಭವಿಸಿದ ಒಂದು ಉದಾಹರಣೆ ಪರಮಹಂಸ. ಯಾವುದನ್ನೂ ಕೊಲ್ಲದೆ, ಒಳಿತುಗಳನ್ನೇ ಕೂಡಿಸುತ್ತ ಕೂಡಿಸುತ್ತಾ ಹೋದವರು ಪರಮಹಂಸರು" ಎಂಬುದು ದೇವನೂರು ಮಹಾದೇವ ಅವರ ಅಭಿಪ್ರಾಯವಾಗಿದೆ.

**24. ಧರ್ಮಬುದ್ಧಿಗೆ ದುಷ್ಟಬುದ್ಧಿಯು ಯಾವ ಸಲಹೆಯಿತ್ತನು?**
ಅರ್ಧರಾತ್ರಿಯಲ್ಲಿ ಧರ್ಮಬುದ್ಧಿಯು ದುರ್ಬುದ್ಧಿಯಾದ ದುಷ್ಟಬುದ್ಧಿಯನ್ನು ಕರೆದು, "ಚಿನ್ನವನ್ನು ಹಂಚಿಕೊಳ್ಳೋಣ" ಎಂದಾಗ ದುಷ್ಟಬುದ್ಧಿಯು ಪಾಪಬುದ್ಧಿಯವನಾಗಿ "ನಾವು ಈ ಹೊನ್ನನ್ನು ಹಂಚಿಕೊಂಡು ಮನೆಯಲ್ಲಿ ಸ್ವೇಚ್ಛೆಯಿಂದ ಇರುವವರಲ್ಲ. ಮತ್ತೆ ವ್ಯಾಪಾರಕ್ಕೆ ಹೋಗಬೇಕಾಗುತ್ತದೆ. ಆಕಾರಣದಿಂದ ನಿನಗೂ ನನಗೂ ಖರ್ಚಿಗೆ ತಕ್ಕಷ್ಟು ಹೊನ್ನನ್ನು ತೆಗೆದುಕೊಂಡು, ಉಳಿದ ಹೊನ್ನೆಲ್ಲವನ್ನು ಇಲ್ಲೆಯೇ ಇಟ್ಟು ಬಿಡೋಣ" ಎಂದು ಸಲಹೆಯಿತ್ತನು.
**25. ದುಷ್ಟಬುದ್ಧಿಯು ತನ್ನ ತಂದೆಗೆ ಏಕಾಂತದಲ್ಲಿ ಏನೆಂದು ಹೇಳಿದನು?**
ದುಷ್ಟಬುದ್ಧಿಯು ತನ್ನ ತಂದೆಯ ಕೈ ಹಿಡಿದು, ಏಕಾಂತ ಸ್ಥಳಕ್ಕೆ ಕರೆದುಕೊಂಡು ಹೋಗಿ "ನಿನ್ನ ಒಂದು ಮಾತಿನಿಂದ ನಮ್ಮ ಕಷ್ಟಗಳೆಲ್ಲವೂ ಪರಿಹಾರವಾಗಿ, ಹಲವು ಕಾಲ ಹಸಿಯದೆ ಊಟಮಾಡಿ ಬಾಳುವಂತಹ ಸಾಧನೆಯನ್ನು ಮಾಡಬಹುದು. ನೀನು ಆ ಮರದ ಪೊಟರೆಯಲ್ಲಿ ಅಡಗಿದ್ದು, ಧರ್ಮಬುದ್ಧಿಯೇ ಹೊನ್ನು ತೆಗೆದುಕೊಂಡು ಹೋದನೆಂದು ಹೇಳು" ಎಂದು ಹೇಳಿದನು.
**26. ಧರ್ಮಾಧಿಕರಣರು ವಟವೃಕ್ಷಕ್ಕೆ ಏನು ಹೇಳಿದರು?**
ಧರ್ಮಾಧಿಕರಣರು **ವಟವೃಕ್ಷಕ್ಕೆ** "ನೀನಾದರೋ ಯಕ್ಷಾದಿ ದಿವ್ಯ ದೇವತೆಗಳು ವಾಸ ಮಾಡುವಂತಹ ಮತ್ತು ಅವರ ಸೇವೆಯನ್ನು ಮಾಡುವಂತಹವನು ಆಗಿದ್ದೀಯಾ, ಆ ಕಾರಣದಿಂದ ನಿನ್ನನ್ನು ಸಾಕ್ಷಿ ಮಾಡಿ ಕೇಳುತ್ತಿದ್ದೇವೆ, ನೀನು ತಪ್ಪದೆ ಸಾಕ್ಷಿಯನ್ನು ನುಡಿ" ಎಂದು ಹೇಳಿದರು.

*****

**27. ಮದಲಿಂಗನ ಕಣಿವೆಯಲ್ಲಿ ಬರುವಾಗ ಶಾನುಭೋಗರು ಏನೆಂದು ಯೋಚಿಸಿದರು?**
ಶಾನುಭೋಗರು ಇರಸಾಲಿಗಾಗಿ ಚಿಕ್ಕನಾಯಕನ ಹಳ್ಳಿಗೆ ಹೋಗಿ, ಖಜಾನೆಗೆ ಹಣಕಟ್ಟಿ, ವಾಪಸ್ಸು ಹೊರಡುವ ವೇಳೆಗೆ ಸಂಜೆ ಆರುಗಂಟೆಯಾಗಿತ್ತು. ಅವರು ತಮ್ಮ ಹಳ್ಳಿಯನ್ನು ತಲುಪಬೇಕಾದರೆ ಮದಲಿಂಗನ ಕಣಿವೆಯನ್ನು ದಾಟಿಹೋಗಬೇಕಾಗಿತ್ತು. ಮದಲಿಂಗನ ಕಣಿವೆ ಕಾಡುದಾರಿ, ಆದ್ದರಿಂದ "ಸ್ವಲ್ಪ ದೊಡ್ಡ ಹೆಜ್ಜೆ ಹಾಕಿದರೆ ಊಟದ ಹೊತ್ತಿಗೆ ಊರು ಸೇರಿಕೊಳ್ಳಬಹುದು" ಎಂದು ಯೋಚಿಸಿ ಬೇಗಬೇಗ ನಡೆದರು.
**28. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣಗಳೇನು?**
ಯಾವ ನಾಡಿನಲ್ಲಿ ಶ್ರೀರಾಮನಂಥ ದೊರೆಗಳು ಆಳಿದರೋ, ಭಗವದ್ಗೀತೆಯಂಥ ಗ್ರಂಥ ಉದ್ಭವಿಸಿತೋ, ಆ ಭರತಭೂಮಿಯಲ್ಲಿ ಜನಿಸಿದ ಹುಲಿಗಳಾದರೂ ಅಧರ್ಮಕ್ಕೆಡೆ ಗೊಡುವುದುಂಟೇ? ಆದ್ದರಿಂದ ಭರತಖಂಡದ ಹುಲಿಗಳು ಹಿಂದಿನಿಂದ ಹಾರಿ ಕೊಲ್ಲುವುದಿಲ್ಲ. ಏಕೆಂದರೆ ಶತ್ರುಗಳಾದರೂ ಸರಿಯೆ, ಬೆನ್ನು ತಿರುಗಿಸಿರುವಾಗ ಕೊಲ್ಲುವುದು ಧರ್ಮವಲ್ಲ. ಆದ್ದರಿಂದ ಹುಲಿಯು ಶಾನುಭೋಗರ ಬೆನ್ನ ಹಿಂದಿನಿಂದ ಹಾರಿ ಕೊಲ್ಲಲಿಲ್ಲ.
**29. ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಗಳನ್ನು ವಿವರಿಸಿ.**
ಚಿಕ್ಕನಾಯಕನಹಳ್ಳಿಗೆ ತೆಂಗಿನಕಾಯಿ ತುಂಬಿಕೊಂಡು ಹೋಗಿದ್ದ ರೈತರ ಗಾಡಿಯ ಎತ್ತುಗಳು ಮುಂದೆ ಹೋಗದೆ ನಿಂತವು. ಹುಲಿಯ ಗರ್ಜನೆ ಕೇಳಿಸಿತು. ಎತ್ತುಗಳ ಗಂಟೆಯ ಸದ್ದನ್ನು, ರೈತರ ಮಾತನ್ನು ಕೇಳಿದ ಹುಲಿಯು ನಿರಾಶೆಯಿಂದ ಪಲಾಯನ ಮಾಡಿತು. ಅನಂತರ ರೈತರು ತಮ್ಮಲ್ಲಿದ್ದ ಕೋವಿಯಿಂದ ಒಂದೆರಡು ತೋಟಾ ಹಾರಿಸಿ, ಕೈಲಾದಷ್ಟು ಗಲಭೆ ಮಾಡುತ್ತಾ, ತೆಂಗಿನಗರಿಯ ಪಂಜು ಹೊತ್ತಿಸಿಕೊಂಡು, ಜಾಗರೂಕತೆಯಿಂದ ಮುಂದೆ ಬಂದರು. ಮೂರ್ಛೆಯಲ್ಲಿ ಬಿದ್ದಿದ್ದ ಶಾನುಭೋಗರನ್ನು ಕಂಡು, ಮುಖದ ಮೇಲೆ ನೀರೆರಚಿ ಎಚ್ಚರಿಸಿದರು.

## ಪದ್ಯಭಾಗ – 2 ಪ್ರಶ್ನೆಗಳು

**1. ಸಂಧಿಯೇ ಉಚಿತವೆಂದು ಧೃತರಾಷ್ಟ್ರನು ಹೇಗೆ ಸಮರ್ಥಿಸಿದನು?**
ಧೃತರಾಷ್ಟ್ರನು ದುರ್ಯೋಧನನನ್ನು ಕುರಿತು "ನನಗೂ ಪಾಂಡುವಿಗೂ ಭೇದವಿಲ್ಲ. ರಾಜ್ಯವನ್ನು ವಿಭಾಗ ಮಾಡಿ ಆಳೋಣ. ಆ ಪಾಂಡುವಿನ ಮಕ್ಕಳೂ ನಿನ್ನಲ್ಲಿ ಸರಿಯಾಗಿ ಹೊಂದಿಕೊಳ್ಳುವವರೇ; ಈ ಯುದ್ಧವು ನಿನ್ನಿಂದ ಆಯಿತು ಎಂದರೆ ಇನ್ನು ಕೋಪಗೊಳ್ಳುತ್ತೀಯೇ; ಭೀಷ್ಮನಿಗೆ, ದ್ರೋಣನಿಗೆ, ಕರ್ಣನಿಗೆ ಗೆಲ್ಲಲು ಅಸಾಧ್ಯನಾದ ಆ ಅರ್ಜುನನಲ್ಲಿ ಕೋಪಿಸಿ ಯುದ್ಧ ಮಾಡುವವರು ಇನ್ನು ಯಾರಿದ್ದಾರೆ? ಸಂಧಿಯನ್ನು ಮಾಡೋಣ" ಎಂದು ಹೇಳಿ ಸಂಧಿಯೇ ಉಚಿತವೆಂದು ಧೃತರಾಷ್ಟ್ರನು ಸಮರ್ಥಿಸಿದನು.
**2. ದುರ್ಯೋಧನನಿಗೆ ಗಾಂಧಾರಿ ನೀಡಿದ ಉಪದೇಶವೇನು?**
ಗಾಂಧಾರಿಯು ದುರ್ಯೋಧನನನ್ನು ಕುರಿತು "ಕುರುವಂಶವೆಂಬ ತೋಟವು ಭೀಮನೆಂಬ ಮದದಿಂದ ಕುರುಡಾಗಿ ಸೊಕ್ಕೇರಿದ ಆನೆಯು ಕೋಪಿಸಿ ನುಗ್ಗಲು ಧ್ವಂಸವಾದಂತೆ ಆಯಿತು; ಪುಣ್ಯದಿಂದ ಒಂದು ದೊಡ್ಡ ಮರವು ಉಳಿಯುವಂತೆ ನೀನು ಉಳಿದೆ; ಇನ್ನು ಯುದ್ಧ ಮಾಡುವಂಥವರೂ ಇಲ್ಲ; ಮಗನೇ, ಮುದುಕರೂ ಕುರುಡರೂ ಎಂದು ಹೇಳದೆ ನಮ್ಮ ಮಾತನ್ನು ಕೇಳು, ಆಲೋಚಿಸು, ತಂದೆಯ ಮಾತಿಗೆ ಒಪ್ಪಿಗೆ ಕೊಡು" ಎಂದು ಹೇಳುತ್ತಾಳೆ.

*****

**3. ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೇಗೆ ಹೋಲಿಸಿದ್ದಾರೆ?**

ತರತಮರಹಿತ ಸಮದೃಷ್ಟಿಯಿಂದ ಕೂಡಿದ ನೀಲಮೇಘಮಂಡಲ – ಸಮಬಣ್ಣದಂತೆ, ಅನಂತ ಆಕಾಶದಲ್ಲಿರುವ ಮುಗಿಲಿಗೆ ರೆಕ್ಕೆಗಳು ಮೂಡಿದಂತೆ, ನಕ್ಷತ್ರ ಮಾಲೆಯನ್ನು ಧರಿಸಿಕೊಂಡು, ಸೂರ್ಯ ಚಂದ್ರರನ್ನು ಕಣ್ಣಾಗಿಸಿಕೊಂಡು ಹಕ್ಕಿಯು ಹಾರಾಡುತ್ತಿರುವ ನೋಟ ಅದ್ಭುತವಾದುದು ಎಂದು ಕವಿಗಳು ವರ್ಣಿಸುತ್ತಾರೆ.

**4. ಹೊಸಗಾಲದ ಹಸುಮಕ್ಕಳನ್ನು ಹಕ್ಕಿ ಹೇಗೆ ಹರಸಿದೆ?**

ಹಕ್ಕಿಯು (ಕಾಲಪಕ್ಷಿಯು) ಯುಗಯುಗಗಳ ಆಗುಹೋಗುಗಳನ್ನು ಹಿಂದಕ್ಕೆ ತಳ್ಳುತ್ತ, ಹೊಸ ಮನ್ವಂತರದ ಪರಿವರ್ತನೆಗೆ / ಪ್ರಗತಿಗೆ ಕಾರಣವಾಗಿದೆ. ಹಕ್ಕಿಯು (ಕಾಲಪಕ್ಷಿಯು) ತನ್ನ ಹಗಲು ರಾತ್ರಿಗಳೆಂಬ ರೆಕ್ಕೆಗಳನ್ನು ಬೀಸುವ ಮೂಲಕ ಭೂಮಂಡಲದ ಜೀವಿಗಳಿಗೆ ಚೈತನ್ಯ ನೀಡಿ, ಹೊಸಗಾಲದ ಹಸುಮಕ್ಕಳನ್ನು ಹರಸಿ, ಉತ್ತಮ ಭವಿಷ್ಯಕ್ಕಾಗಿ ಶುಭ ಹಾರೈಸುತ್ತಿದೆ ಎಂದು ಕವಿಗಳು ವರ್ಣಿಸುತ್ತಾರೆ.

*****

**5. ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು?**

ಕ್ರಿ.ಶ. 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಬ್ರಿಟಿಷ ಸರ್ಕಾರ ಅನುಮತಿ ಇಲ್ಲದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು ಎಂಬ ಆದೇಶವನ್ನು ನೀಡಿತು ಈ ಆದೇಶವನ್ನು ವಿರೋಧಿಸಿ ಹಲಗಲಿಯ ಪೂಜೇರಿ ಹನುಮ, ಬ್ಯಾಡರ ಬಾಲ, ಜಡಗ, ರಾಮ ಮೊದಲಾದ ವೀರರು ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ ಇದ್ದದ್ದು ಹಲಗಲಿಯ ಬೇಡರು ದಂಗೆ ಏಳಲು ಕಾರಣವಾಯಿತು.

**6. ಹಲಗಲಿಗೆ ದಂಡು ಬರಲು ಕಾರಣವೇನು?**

ಹಲಗಲಿಯ ಬೇಡರಾದ ಪೂಜೇರಿ ಹನುಮ, ಬ್ಯಾಡರ ಬಾಲ, ರಾಮ, ಜಡಗ ಇವರುಗಳು ಬ್ರಿಟಿಷ್ ಸರ್ಕಾರ ಹೊರಡಿಸಿದ್ದ ನಿಶ್ಶಸ್ತ್ರೀಕರಣದ ಆದೇಶವನ್ನು ವಿರೋಧಿಸಿ ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ ದಂಗೆ ಎದ್ದರು. ಈ ದಂಗೆಯನ್ನು ಹತ್ತಿಕ್ಕಲು ಬಂದ ಕಾರಕೂನನ ಕಪಾಳಕ್ಕೆ ಹೊಡೆದು ಸಿಪಾಯಿಗಳನ್ನು ಹೊಡೆದುರುಳಿಸಿದರು ಇದರಿಂದ ಕೋಪಗೊಂಡ ಕುಂಪಣಿ ಸರ್ಕಾರದ ಅಧಿಕಾರಿಗಳು ಹಲಗಲಿಯ ಬೇಡರ ದಂಗೆಯನ್ನು ಬಗ್ಗುಬಡಿಯಲು ದಂಡನ್ನು ಕರೆಯಿಸಿದರು.

**7. ದಂಡು ಹಲಗಲಿಯ ಮೇಲೆ ಹೇಗೆ ದಾಳಿ ನಡೆಸಿತು?**

ನಿಶ್ಶಸ್ತ್ರೀಕರಣದ ಆದೇಶವನ್ನು ವಿರೋಧಿಸಿ ಬ್ರಿಟಿಷ್ ಸರ್ಕಾರದ ವಿರುದ್ಧ ದಂಗೆ ಎದ್ದ ಹಲಗಲಿಯ ಬೇಡರನ್ನು ಬಗ್ಗುಬಡಿಯಲು ಬ್ರಿಟಿಷರ ದಂಡು ಬಂದಿತು. ಬ್ರಿಟಿಷರ ದಂಡಿನ ಸಿಪಾಯಿಗಳು ಹಲಗಲಿಯ ಬೇಡರ ಬೆನ್ನು ಹತ್ತಿ ಕೊಂದರು. ಎದುರಿಗೆ ಸಿಕ್ಕಸಿಕ್ಕವರಿಗೆಲ್ಲ ಕರುಣೆ ಇಲ್ಲದೆ ಗುಂಡು ಹೊಡೆದು ಸಾಯಿಸಿದರು. ಬ್ರಿಟಿಷ್ ಸಿಪಾಯಿಗಳ ಗುಂಡಿಗೆ ಹೆದರಿ ಹಲಗಲಿಯ ಬೇಡರು ಗುಡ್ಡದ ಕಡೆಗೆ ಓಡಿ ತಲೆಮರೆಸಿಕೊಂಡರು.

**8. ಲಾವಣಿಗಳನ್ನು ಏಕೆ ವೀರಗೀತೆಗಳು ಎನ್ನಲಾಗಿದೆ?**

ಲಾವಣಿಗಳು ಜನಪದ ಸಾಹಿತ್ಯದ ಒಂದು ವಿಶಿಷ್ಟ ಪ್ರಕಾರ. ಒಂದು ಘಟನೆಯನ್ನು ಆಧರಿಸಿ, ಕಥನಾತ್ಮಕವಾಗಿ ಕಟ್ಟಿದ ಹಾಡನ್ನು ಲಾವಣಿಗಳೆನ್ನುವರು. ಲಾವಣಿಗಳು ಸಾಮಾನ್ಯವಾಗಿ ವೀರತನ ಹಾಗೂ ಸಾಹಸವನ್ನು ವರ್ಣಿಸುವುದರಿಂದ ಅವುಗಳನ್ನು ವೀರಗೀತೆಗಳು ಎನ್ನುವರು.

*****

**9. ಭಕ್ತಿ ಮತ್ತು ನಿಷ್ಠೆಯ ಬಗ್ಗೆ ಜೇಡರದಾಸಿಮಯ್ಯನ ಅಭಿಪ್ರಾಯವೇನು?**

"ಪತಿ ಪತ್ನಿಯರು ಒಂದಾದ ಭಕ್ತಿ ಶಿವನಿಗೆ ಹಿತ. ಪತಿಪತ್ನಿಯರು ಒಂದಾಗದ ಭಕ್ತಿ ಅಮೃತದಲ್ಲಿ ವಿಷ ಬೆರತಂತೆ. ಇದನ್ನು ಶಿವನು ಮೆಚ್ಚುವುದಿಲ್ಲ. ನಿಷ್ಠನಾದ ಭಕ್ತ ದಟ್ಟವಾದ ಅರಣ್ಯದಲ್ಲಿ ಇದ್ದರೂ ಅದು ಅವನಿಗೆ ಪಟ್ಟಣ ಎನಿಸುವುದು. ನಿಷ್ಠೆಯಿಲ್ಲದ ಭಕ್ತ ನಗರವಾಸಿಯಾದರೂ ಅವನಿಗೆ ಅದು ದಟ್ಟಡವಿಯೇ" ಎಂದು ಜೇಡರ ದಾಸಿಮಯ್ಯ ಭಕ್ತಿ ಮತ್ತು ನಿಷ್ಠೆಯ ಬಗ್ಗೆ ಅಭಿಪ್ರಾಯಪಟ್ಟಿದ್ದಾನೆ.

**10. ಬಸವಣ್ಣನವರ ವಚನಗಳಲ್ಲಿ ಕಂಡುಬರುವ ಚಂಚಲ ಮನಸ್ಸು ಮತ್ತು ಸ್ವಭಾವಗಳನ್ನು ವಿವರಿಸಿ.**

"ಮರ್ಕಟವು ಮರ ಹತ್ತಿ ಹಲವು ಕೊಂಬೆಗಳಿಗೆ ನೆಗೆಯುವಂತೆ ಬೆಂದ ಮನವು ಚಂಚಲವಾಗಿರುತ್ತದೆ. ಹೀಗಾದಾಗ ಮನಸ್ಸು ದೇವರೆಡೆಗೆ ತಿರುಗಲು ಸಾಧ್ಯವಿಲ್ಲ. ಪಲ್ಲಕ್ಕಿಯನ್ನು ಏರಿದ ನಾಯಿ ಹೊಲಸು ಕಂಡಾಗ ತನ್ನ ಸ್ವಭಾವದಂತೆ ಆ ಕಡೆಗೆ ಓಡುತ್ತದೆ. ಅದೇ ರೀತಿ ಚಂಚಲ ಮನಸ್ಸು ವಿಷಯ ಸುಖದ ಕಡೆಗೆ ವಾಲುತ್ತದೆ. ದೇವರನ್ನು ನೆನೆಯಲು ಬಿಡುವುದಿಲ್ಲ" ಎಂದು ಬಸವಣ್ಣನವರು ತಮ್ಮ ವಚನದಲ್ಲಿ ತಿಳಿಸಿದ್ದಾರೆ.

**11. ಮಾತಿನ ಮಹತ್ತ್ವವನ್ನು ಬಸವಣ್ಣನವರು ಹೇಗೆ ವಿಶ್ಲೇಷಿಸಿದ್ದಾರೆ?**

"ಮಾತು ಬೆಲೆ ಬಾಳುವ ಮುತ್ತಿನಹಾರದಂತೆ ಸ್ಪಷ್ಟವಾಗಿ, ಎಲ್ಲರಿಗೂ ಅರ್ಥವಾಗುವಂತೆ ಇರಬೇಕು. ಮಾತು ಮಾಣಿಕ್ಯದ ದೀಪ್ತಿಯಂತೆ ಹಿತವಾಗಿದ್ದು, ಜ್ಞಾನದ ಬೆಳಕನ್ನು ನೀಡಬೇಕು. ಮಾತು ಸ್ಫಟಿಕದ ಸಲಾಕೆಯಂತೆ ಪಾರದರ್ಶಕವಾಗಿದ್ದು ಸತ್ಯದಿಂದ ಕೂಡಿರಬೇಕು. ನಾವಾಡುವ ಮಾತು ದೇವರು ಮೆಚ್ಚುವಂತೆ ಇರಬೇಕು. ಅದೇರೀತಿ ನುಡಿಗೆ ತಕ್ಕ ನಡೆ ಇದ್ದರೆ ಮಾತ್ರ ದೇವರು ಒಲಿಯುವನು" ಎಂಬುದು ಬಸವಣ್ಣನವರ ಅಭಿಪ್ರಾಯವಾಗಿದೆ.

*****

**12. ಹಡಗನ್ನು ಯಾವುದರ ಬೆಳಕಿನಲ್ಲಿ ಮುನ್ನಡೆಸಬೇಕಿದೆ?**
ನಮ್ಮ ಬದುಕಿನ ಸುತ್ತಮುತ್ತಲು ಕವಿದಿರುವ ಕತ್ತಲೆಯನ್ನು ಕಳೆಯಲು ಪ್ರೀತಿಯೆಂಬ ಹಣತೆಯನ್ನು ಹಚ್ಚಬೇಕು. ಸಂಸಾರ ಸಾಗರದಲ್ಲಿ ಬಿರುಗಾಳಿಗೆ ಸಿಲುಕಿ ಹೊಯ್ದಾಡುತ್ತಿರುವ ಬದುಕೆಂಬ ಹಡಗನ್ನು ಜ್ಞಾನದೀವಿಗೆಯ ಮೂಲಕ ಎಚ್ಚರಿಕೆಯಿಂದ ಮುನ್ನಡೆಸಬೇಕಿದೆ.

**13. 'ಬರಡಾಗಿರುವ ಕಾಡುಮೇಡುಗಳನ್ನು ಹೇಗೆ ಮುಟ್ಟಬೇಕಿದೆ' ಎಂದು ಕವಿ ಹೇಳಿದ್ದಾರೆ?**
ಋತುಗಳ ರಾಜನಾದ ವಸಂತನು ಬರಡಾಗಿರುವ ಕಾಡುಮೇಡುಗಳನ್ನು ಹಚ್ಚಹಸಿರಿನಿಂದ ಕಂಗೊಳಿಸುವಂತೆ ಮುಟ್ಟಬೇಕಿದೆ. ವಸಂತನ ಆಗಮನದಿಂದ ಬರಡಾಗಿರುವ ಕಾಡಿನಲ್ಲಿ ಮರಗಿಡಗಳು ಚಿಗುರಿ ಪ್ರಕೃತಿಗೆ ನವಚೈತನ್ಯ ಮೂಡಬೇಕಿದೆ ಎಂಬುದು ಕವಿಯ ಆಶಯವಾಗಿದೆ.

**14. ಹೊಸ ಭರವಸೆಗಳನ್ನು ಮೂಡಿಸಿ ಯಾವುದರ ನಡುವೆ ಸೇತುವೆಯಾಗಬೇಕಿದೆ?**
ಭಾಷೆ, ಜಾತಿ, ಮತಧರ್ಮಗಳ ಭೇದಭಾವದಿಂದ ಮನುಜರ ನಡುವೆ ಅಡ್ಡಗೋಡೆಗಳು ನಿರ್ಮಾಣವಾಗಿವೆ. ಸ್ನೇಹ, ಪ್ರೀತಿ, ನಂಬಿಕೆಯ ಮೂಲಕ ಮನುಜರ ನಡುವಿನ ಈ ಅಡ್ಡಗೋಡೆಗಳನ್ನು ಕೆಡವಬೇಕು. ಬದುಕಿನಲ್ಲಿ ಹೊಸ ಭರವಸೆಗಳನ್ನು ಮೂಡಿಸಿ ಮನುಜ ಮನುಜರ ನಡುವೆ ಸೇತುವೆಯಾಗಬೇಕಿದೆ.

**15. ನಾಳಿನ ಕನಸನ್ನು ಬಿತ್ತಬೇಕಾದರೆ ನಾವು ಹೇಗೆ ಬದುಕಬೇಕು?**
ಎಲ್ಲ ಮತಧರ್ಮಗಳು ದಾರಿ ತೋರಿಸುವ ದೀಪಗಳಾಗಿರುವುದರಿಂದ ಎಲ್ಲಾ ಮತಗಳನ್ನು ಪುರಸ್ಕರಿಸುವ ಎಚ್ಚರಿಕೆಯಲ್ಲಿ ನಾವು ಬದುಕಬೇಕು. ಭಯ ಮತ್ತು ಸಂಶಯಗಳಿಂದ ಮಸುಕಾಗಿರುವ ಮನದ ಕಣ್ಣಿನಲ್ಲಿ ಭವಿಷ್ಯದ ಕನಸನ್ನು ಬಿತ್ತುತ್ತ ಬದುಕು ನಡೆಸಬೇಕು.

*****

**16. ಕೃಷ್ಣನು ಕರ್ಣನ ಮನದಲ್ಲಿ ಯಾವ ರೀತಿಯಲ್ಲಿ ಉಭಯವನ್ನು ಬಿತ್ತಿದನು?**
"ಕರ್ಣ ನಿಮಗೂ ಯಾದವ ಕೌರವರಿಗೂ ವಂಶ ಗೌರವದಲ್ಲಿ ಭೇದವಿಲ್ಲ. ನಿನ್ನಾಣೆ. ನೀನು ನಿಜವಾಗಿ ಭೂಮಿಯ ಒಡೆಯ. ಆದರೆ ನಿನಗೆ ಮನದಲ್ಲಿ ಅದರ ಅರಿವಿಲ್ಲ" ಎಂದು ಹೇಳುತ ಕೃಷ್ಣನು ಕರ್ಣನ ಕಿವಿಯಲ್ಲಿ ಉಭಯವನ್ನು (ದ್ವಂದ್ವವನ್ನು) ಬಿತ್ತಿದನು.

**17. ಕುಂತಿ, ಮಾದ್ರಿಯರು ಯಾರ್ಯಾರ ಅನುಗ್ರಹದಿಂದ ಮಕ್ಕಳನ್ನು ಪಡೆದರು?**
ಕುಂತಿಯು ಸೂರ್ಯನ ಅನುಗ್ರಹದಿಂದ ಕರ್ಣನನ್ನ, ಯಮಧರ್ಮನ ಅನುಗ್ರಹದಿಂದ ಧರ್ಮರಾಯನನ್ನು, ವಾಯುವಿನ ಅನುಗ್ರಹದಿಂದ ಭೀಮನನ್ನು, ಇಂದ್ರನ ಅನುಗ್ರಹದಿಂದ ಅರ್ಜುನನ್ನು ಪಡೆದಳು. ಮಾದ್ರಿಯು ಅಶ್ವಿನೀದೇವತೆಗಳ ಅನುಗ್ರಹದಿಂದ ನಕುಲ ಸಹದೇವರನ್ನು ಪಡೆದಳು.

**18. ಕೃಷ್ಣನು ಆಮಿಷಗಳನ್ನು ಒಡ್ಡಿದಾಗ ಕರ್ಣನ ಮನದಲ್ಲಿ ಮೂಡಿದ ಭಾವನೆಗಳೇನು?**
ಕೃಷನು ಕರ್ಣನಿಗೆ ಆಮಿಷಗಳನ್ನು ಒಡ್ಡಿದಾಗ ಕೊರಳಸೆರೆ ಹಿಗ್ಗಿದವು, ಕಂಬನಿಯು ರಭಸದಿಂದ ಮುಂದೆ ಬಂದು, ಅಧಿಕವಾಗಿ ಕರ್ಣನು ದುಃಖಗೊಂಡು ಮನದೊಳಗೆ "ಅಯ್ಯೋ, ದುರ್ಯೋಧನನಿಗೆ ಕೇಡಾದುದು" ಎಂದನು. ಹರಿಯ ಹಗೆತನವು ಹೋಗೆ ತೋರದೆ ಸುಟ್ಟುಹಾಕುವುದಲ್ಲದೆ; ಸುಮ್ಮನೆ ಹೋಗುವುದೆ. ಕೃಷ್ಣನು "ನನ್ನ ವಂಶದ ರಹಸ್ಯವನ್ನು ತಿಳಿಸಿ ನನ್ನನ್ನು ಕೊಂದನು" ಎಂದು ಮನದಲ್ಲಿ ನೊಂದುಕೊಂಡನು.

**19. ಕೃಷ್ಣನು ಕೌರವೇಂದ್ರನನ್ನು ಕೊಂದನು ಎಂದು ಕರ್ಣ ಹೇಳಲು ಕಾರಣವೇನು?**
ಕರ್ಣನು ಕೃಷ್ಣನಿಗೆ "ನಾನು ರಾಜ್ಯದ ಸಿರಿಸಂಪತ್ತಿಗೆ ಸೋಲುವವನಲ್ಲ, ಪಾಂಡವರು ಕೌರವರು ಸೇವೆಯನ್ನು ಮಾಡುವುದು ನನಗೆ ಇಷ್ಟವಿಲ್ಲ. ಆದರೆ ನನ್ನನ್ನು ಕಾಪಾಡಿದ ಒಡೆಯನಾದ ದುರ್ಯೋಧನನಿಗೆ ಶತ್ರುಗಳ ಶಿರವನ್ನು ಕಡಿದು ತಂದು ಒಪ್ಪಿಸುವ ಉತ್ಸಾಹದಲ್ಲಿ ಇದ್ದೆನು. ಆದರೆ ನೀನು ನನ್ನ ಜನ್ಮ ರಹಸ್ಯವನ್ನು ತಿಳಿಸಿ ದುರ್ಯೋಧನನನ್ನು ಕೊಂದೆ" ಎಂದನು.

**20. ಯುದ್ಧದ ವಿಚಾರದಲ್ಲಿ ಕರ್ಣನ ತೀರ್ಮಾನವೇನು?**
ಕರ್ಣನು ಕೃಷ್ಣನನ್ನು ಕುರಿತು "ನಾಳಿನ ಕೌರವರ ಮತ್ತು ಪಾಂಡವರ ಚತುರಂಗ ಬಲದ ನಡುವಿನ ಯುದ್ಧವು ಮೃತ್ಯುದೇವತೆಗೆ ಭೋಜನ ಕೂಟ ಆಗುವುದು. ನಾನು ಕೌರವನ ಉಪಕಾರದ ಋಣ ತೀರಿಸುವಂತೆ ಹೋರಾಡಿ, ಯುದ್ಧರಂಗದಲ್ಲಿ ಲೆಕ್ಕವಿಲ್ಲದಷ್ಟು ವೀರಯೋಧರನು ಕೊಂದು, ನನ್ನ ಒಡೆಯನಿಗಾಗಿ ಪ್ರಾಣವನ್ನು ಬಿಡುವೆನು. ಸೂರ್ಯನ ಮೇಲಾಣೆ ಪಾಂಡವರನ್ನು ನೋಯಿಸೆನು" ಎಂದನು.

*****

**21. ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ವಿವರಿಸಿ.**
ಶ್ರೀರಾಮನು ಮಹರ್ಷಿಗಳ ಆದೇಶದಂತೆ ಅಶ್ವಮೇಧ ಯಾಗವನ್ನು ಕೈಗೊಂಡು, ಶತ್ರುಘ್ನನ ಬೆಂಗಾವಲಿನಲ್ಲಿ ಯಜ್ಞಾಶ್ವವನ್ನು ಕಳುಹಿಸಿದನು. ರಾಮನ ಆಜ್ಞೆಯಂತೆ ಹೊರಟ ಯಜ್ಞಾಶ್ವವನ್ನು ಭುಜಬಲ ಪರಾಕ್ರಮಿಗಳಾದ ರಾಜರುಗಳು ತಡೆಯಲು ಹೆದರಿ ನಮಸ್ಕರಿಸಿ ಮುಂದೆ ಹೋಗಲು ಬಿಟ್ಟರು. ಹೀಗೆ ಯಜ್ಞಾಶ್ವವು ಭೂಮಿಯಲ್ಲೆಲ್ಲ ಸಂಚರಿಸುತ್ತ ವಾಲ್ಮೀಕಿಯ ಆಶ್ರಮದ ತೋಟದ ಹಸುರಾದ ಹುಲ್ಲನ್ನು ತಿನ್ನಲು ಒಳಹೊಕ್ಕಿತು.

**22. ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ ಏನೆಂದು ಬರೆಯಲಾಗಿತ್ತು?**
ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ "ಭೂಮಂಡಲದಲ್ಲಿ ಕೌಸಲ್ಯೆಯ ಮಗನಾದ ರಾಮನು ಒಬ್ಬನೇ ವೀರನು. ಇದು ಅವನ ಯಜ್ಞ ಕುದುರೆ. ಇದನ್ನು ತಡೆಯುವ ಸಾಮರ್ಥ್ಯವುಳ್ಳವರು ಯಾರೇ ಆದರೂ ತಡೆಯಲಿ" ಎಂದು ಬರೆಯಲಾಗಿತ್ತು.

**23. ಕುದುರೆಯನ್ನು ಕಟ್ಟುವ ವಿಚಾರದಲ್ಲಿ ಮುನಿಸುತರಿಗೂ ಲವನಿಗೂ ನಡೆದ ಸಂವಾದವನ್ನು ಬರೆಯಿರಿ.**
ಲವನು ಆಶ್ರಮವನ್ನು ಹೊಕ್ಕ ಯಜ್ಞಾಶ್ವವನ್ನು ತನ್ನ ಉತ್ತರೀಯದಿಂದ ಬಾಳೆಯ ಗಿಡಕ್ಕೆ ಕಟ್ಟಿ ಹಾಕಿದ್ದನ್ನು ಕಂಡು ಹೆದರಿದ ಮುನಿಸುತರು "ಬೇಡಬೇಡ ಅರಸುಗಳ ಕುದುರೆಯನ್ನು ಬಿಡು, ನಮ್ಮನ್ನು ಹೊಡೆಯವರು" ಎಂದು ಹೇಳಿದರು. ಆಗ ಲವನು ನಗುತ "ಬ್ರಾಹ್ಮಣರ ಮಕ್ಕಳು ಹೆದರಿದರೆ, ಜಾನಕಿಯ ಮಗನು ಇದಕ್ಕೆ ಹೆದರುವನೇ, ನೀವು ಹೋಗಿ" ಎಂದು ಶೌರ್ಯದಿಂದ ಹೇಳಿದನು.

*****

**24. ಗಡಿಯ ಆಚೆ-ಈಚೆ ಜೀವಿಗಳು ಏಕೆ ಶವವಾದವು?**
ಮಾನವನು ಭೂಮಿಯ ಮಾಲೀಕನಾದೆನೆಂಬ ಅಮಲಿನಲ್ಲಿ ಇರುವನು. ಆ ಭೂಮಿಯ ಮೇಲೆ ಗೆರೆ ಎಳೆದು ಗಡಿಯನ್ನು ನಿರ್ಮಿಸಿಕೊಂಡನು. ಈ ಗಡಿ ನನ್ನದು ಎಂದು ಗರ್ವಪಟ್ಟು ಅದರ ರಕ್ಷಣೆಗಾಗಿ ಕಾದಾಟ (ಯುದ್ಧ) ಮಾಡಿದ್ದರಿಂದ ಜೀವಿಗಳು ಶವವಾದವು.

**25. 'ನನ್ನಾಸೆ' ಕವನದಲ್ಲಿ ಕವಯಿತ್ರಿಯವರ ಆಸೆಗಳೇನು?**
ತನ್ನನ್ನೇ ಸುಟ್ಟು ಬೆಳಕು ನೀಡುವ ಬತ್ತಿ, ಪುಣ್ಯವಂತರಿಗೆ ನೆರಳಾಗುವ ಮರ, ದಾಹಗೊಂಡವರ ತಣಿಸುವ ನೀರಿನ ಚಿಲುಮೆ, ಅಳುವ ಕಂದನ ನಗಿಸುವ ಅಮ್ಮನ ಕಂಠದ ಜೋಗುಳ, ಮಾನವನ ಅಜ್ಞಾನವನ್ನು ತೊಲಗಿಸುವ ವಾಗ್ದೇವಿಯ ಕೈಯ ಗ್ರಂಥ, ಮುಸ್ಸಂಜೆ ಹೊಸ್ತಿಲಲ್ಲಿ ದಿಕ್ಕಿಲ್ಲದೆ ನರಳಾಡುವ ದೀನರ ಊರುಗೋಲು, ನೆಲಕ್ಕೆ ಬಿದ್ದು ಹೊರೆಯಾಗುವ ಮುನ್ನ ಅಂತ್ಯ ಆಗಬೇಕು ಎಂಬುದು ಕವಯಿತ್ರಿ ಅವರ ಆಸೆಗಳಾಗಿವೆ.

## ಪಠ್ಯಪೋಷಕ ಅಧ್ಯಯನ ಭಾಗ 4 ಪ್ರಶ್ನೆಗಳು

**1. ವಿಜ್ಞಾನಿಗಳ ವೈರುಧ್ಯ ಭಾವನೆಯನ್ನು ವಿವರಿಸಿರಿ.**
ವಿಜ್ಞಾನಿಗಳು ಪ್ರಯೋಗಶಾಲೆಗಳಲ್ಲಿ ತಮ್ಮ ಹೆಚ್ಚಿನ ವಿಚಾರಶಕ್ತಿಯನ್ನೂ, ವೈಜ್ಞಾನಿಕ ಮನೋಭಾವವನ್ನೂ ಪ್ರದರ್ಶಿಸುತ್ತಾರೆ. ಆದರೆ ನಿಜ ಜೀವನದಲ್ಲಿ ಅವೈಜ್ಞಾನಿಕವಾಗಿ ವರ್ತಿಸುತ್ತಾರೆ. ಒಂದೇ ಮನಸ್ಸು ಒಮ್ಮೆ ತಾರ್ಕಿಕವಾಗಿ ಚಿಂತಿಸಿದರೆ ಮತ್ತೊಮ್ಮೆ ಅತಾರ್ಕಿಕವಾಗಿ ಯೋಚಿಸುತ್ತದೆ. ಯೋಚನೆಯಲ್ಲಿ ಏಕಸೂತ್ರತೆ ಕಂಡುಬರುವುದಿಲ್ಲ.

**2. ವೈಜ್ಞಾನಿಕ ಸಂಶೋಧನೆಗಳು ಯಾವಾಗ ಅರ್ಥರಹಿತವಾಗುತ್ತವೆ?**
ವಿಜ್ಞಾನಿಯೊಬ್ಬನ ವಸ್ತು ಸ್ಥಿರತೆಯ ವಿಶ್ವ ನಿಯಮ ಸಮಾಜದ ಕೆಲವರಿಗೆ ಮಾತ್ರ ಅನ್ವಯಿಸುವುದಿಲ್ಲ ಎಂದರೆ ಅದು ಮೂರ್ಖತನ. ಶೂನ್ಯದಿಂದ ಏನನ್ನಾದರೂ ಸೃಷ್ಟಿಸಬಹುದೆಂದರೆ ಅದು ಮೂರ್ಖತನದ ಪರಮಾವಧಿ. ಅಶಿಕ್ಷಿತನೊಬ್ಬ ಹೀಗೆ ಹೇಳಿದರೆ ಕ್ಷಮೆಯುಂಟು; ಆದರೆ ವಿದ್ಯಾವಂತ ಈ ರೀತಿ ಅಭಿಪ್ರಾಯವನ್ನು ತಿಳಿಸುವುದು ಶೋಚನೀಯ. ಇದು ನಿಜವಾದರೆ ಜಗತ್ತಿನ ವಿಜ್ಞಾನ ಕ್ಷೇತ್ರದಲ್ಲಿ ನಡೆದಿರುವ ಎಲ್ಲ ಶೋಧನೆಗಳು ಅರ್ಥರಹಿತವಾಗುತ್ತವೆ.

**3. ಲೇಖಕರ ಪ್ರಕಾರ 'ವಿಶ್ವಧರ್ಮ' ಯಾವಾಗ ರೂಪಿತವಾಗಬಲ್ಲದು?**
ನಮ್ಮ ಸಮಾಜ ಎದುರಿಸುತ್ತಿರುವ ಜಾತಿಯಂತಹ ಸಾಮಾಜಿಕ ಪಿಡುಗುಗಳ ಪರಿಹಾರವೂ ಸಹ ವಿಜ್ಞಾನ ಮತ್ತು ವೈಜ್ಞಾನಿಕ ಮನೋಭಾವಗಳಿಂದ ಸಾಧ್ಯ. ನಮ್ಮ ದೇಶ ನೂರಾರು ವರ್ಷಗಳಿಂದ ಎದುರಿಸುತ್ತಿರುವ ಜಟಿಲವಾದ ಸಮಸ್ಯೆಗಳನ್ನು ಸಹ ವೈಜ್ಞಾನಿಕ ಮಾರ್ಗಗಳಿಂದ ಪರಿಹರಿಸಲು ಸಾಧ್ಯ. ಹೀಗೆ ವೈಜ್ಞಾನಿಕ ಮನೋಧರ್ಮವನ್ನು ಮೊದಲು ನಮ್ಮಲ್ಲಿ ರೂಢಿಸಿಕೊಂಡಾಗ ಮಾತ್ರ ಮಾನವೀಯ ಮೌಲ್ಯ ಹಾಗೂ ನೀತಿಯಾಧಾರಿತ ವಿಶ್ವಧರ್ಮ ರೂಪಿತವಾಗಬಲ್ಲುದು.

**4. ಸಮಾಜ ಸುಧಾರಣೆ ಯಾವಾಗ ಸಾಧ್ಯವೆಂದು ಲೇಖಕರು ವಿವರಿಸಿದ್ದಾರೆ?**
ವಿಜ್ಞಾನ ಮತ್ತದರ ಬಳಕೆ ಹಾಗೂ ವೈಜ್ಞಾನಿಕ ಮನೋಧರ್ಮವನ್ನು ಪಡೆದು ಕಾರ್ಯಪ್ರವೃತ್ತರಾದಾಗ ಮಾತ್ರ ಬಡತನ ನಿರ್ಮೂಲನ ಮತ್ತು ಶೋಷಣೆಗಳ ನಾಶ ಸಾಧ್ಯವಾಗುತ್ತದೆ. ಅದು ಪ್ರಗತಿವಿರೋಧಿ ಸಿದ್ಧಾಂತಗಳನ್ನೂ ಸ್ವಹಿತಾಸಕ್ತಿಯನ್ನೂ ದೂರಮಾಡಬಲ್ಲುದು. ವಿಜ್ಞಾನಿಗಳು ವಿಜ್ಞಾನದಲ್ಲಿ ಜೀವಂತ ನಂಬಿಕೆ ಹೊಂದಬೇಕು. ಅಂತೆಯೇ ತರ್ಕಬದ್ಧರಾಗಿ ಧೈರ್ಯದಿಂದ ವರ್ತಿಸಬೇಕು. ಆಗ ಸಮಾಜದ ಸುಧಾರಣೆ ಆಗುತ್ತದೆ.

*****

**5. ಪಂಪನು ತನ್ನ ಹೆಸರನ್ನು ಏಕೆ ಕೆತ್ತಿಸಲಿಲ್ಲ?**
ಭರತ ಚಕ್ರವರ್ತಿಯು ಷಟ್ಖಂಡಗಳನ್ನು ಜಯಿಸಿ, ವೃಷಭಾಚಲದಲ್ಲಿ ತನ್ನ ಗೆಲುವಿನ ಬಗ್ಗೆ ಬರೆಸಲು ಹೋದಾಗ ಅಲ್ಲಿ ಅವನಿಗೆ ಸೂಕ್ತ ಸ್ಥಳವೇ ಸಿಗಲಿಲ್ಲ. ಏಕೆಂದರೆ ಅವನ ಹಿಂದಿನ ಚಕ್ರವರ್ತಿಗಳ ಆತ್ಮಪ್ರಶಂಸೆಯೇ ಅಲ್ಲಿ ತುಂಬಿತ್ತು. ಇದರಿಂದ ಭರತನ ಗರ್ವರಸ ಸೋರಿತು. ಈ ವಿಷಯವನ್ನು ಪಂಪನೇ ತನ್ನ ಆದಿಪುರಾಣ ಮಹಾಕಾವ್ಯದಲ್ಲಿ ಸುಂದರವಾಗಿ ನಿರೂಪಿಸಿರುವುದರಿಂದ ಅವನ ಮನಸ್ಸು ಬಂಡೆಯ ಮೇಲೆ ತನ್ನ ಹೆಸರನ್ನು ಕೆತ್ತಿಸಲು ಒಪ್ಪಲಿಲ್ಲ.

**6. ಭರತಚಕ್ರವರ್ತಿಗೆ ತನ್ನ ಹೆಸರನ್ನು ಬರೆಸಲು ಏಕೆ ಸಾಧ್ಯವಾಗಲಿಲ್ಲ?**

ವೃಷಭಾಚಲದಲ್ಲಿ ಹಿಂದಿನ ಅನೇಕ ಚಕ್ರವರ್ತಿಗಳು ಬರೆಸಿದ ಆತ್ಮಪ್ರಶಂಸೆಗಳು ತುಂಬಿಹೋಗಿದ್ದು ಭರತಚಕ್ರವರ್ತಿಗೆ ತನ್ನ ಹೆಸರು ಬರೆಸಲು ಸೂಕ್ತವಾದ ಸ್ಥಳ ದೊರಕಲಿಲ್ಲ. ಆದ್ದರಿಂದ ಭರತಚಕ್ರವರ್ತಿಗೆ ತನ್ನ ಹೆಸರನ್ನು ಬರೆಸಲು ಸಾಧ್ಯವಾಗಲಿಲ್ಲ.

*****

**7. ರಾಜಕೀಯ ಸ್ವಾತಂತ್ರ್ಯದ ಮಹತ್ತ್ವವೇನು?**

ರಾಜಕೀಯ ಸ್ವಾತಂತ್ರ್ಯ ಎನ್ನುವುದು ಮಾನವ ವ್ಯಕ್ತಿತ್ವ ಮತ್ತು ಸಮಾನತೆಗಳ ತತ್ತ್ವದಿಂದ ಅನುಗಮನ ಮಾಡಿದ ತತ್ತ್ವ. ಇದರಿಂದ ಶಾಸನಗಳನ್ನು ರಚಿಸುವುದರಲ್ಲಿ, ಸರಕಾರಗಳ ಸ್ಥಾಪನೆ, ವಿಸರ್ಜನೆಗಳಲ್ಲಿ ವ್ಯಕ್ತಿಗೆ ಪಾಲು ಇರುತ್ತದೆ. ಅಲ್ಲದೆ ಜನರಿಗೆ ಜೀವನ, ಸ್ವಾತಂತ್ರ್ಯ ಸಂತೋಷಾನ್ವೇಷಣೆಗಳನ್ನು ಒದಗಿಸಿ ಕೊಡುವ ಜವಾಬ್ದಾರಿಯೂ ಇರುತ್ತದೆ.

**8. ಅಂದವಾದ ಬರೆವಣಿಗೆಯ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವೇನು?**

ಅಂದವಾದ ಅಕ್ಷರ, ಒಳ್ಳೆಯ ಬರೆವಣಿಗೆ, ಶಿಕ್ಷಣದ ಆವಶ್ಯಕ ಅಂಶವಲ್ಲ ಎನ್ನುವುದು ಅಂದವಾದ ಬರೆವಣಿಗೆಯ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವಾಗಿತ್ತು. ಆದರೆ ದಕ್ಷಿಣ ಅಫ್ರಿಕಾದ ಸುಶಿಕ್ಷಿತರ ಅಂದವಾದ ಬರೆವಣಿಗೆ ನೋಡಿದ ಮೇಲೆ ಗಾಂಧೀಜಿ ಅವರು "ಒಳ್ಳೆಯ ಬರೆವಣಿಗೆ ಉತ್ತಮ ಶಿಕ್ಷಣದ ಅವಶ್ಯವಾದ ಅಂಶವೆಂಬುದನ್ನು ಪ್ರತಿಯೊಬ್ಬ ಯುವಕನೂ ಯುವತಿಯೂ ತಿಳಿದುಕೊಳ್ಳಲಿ" ಎಂದು ಅಭಿಪ್ರಾಯಪಡುತ್ತಾರೆ

**9. ವಿವೇಕಾನಂದರ ದೃಷ್ಟಿಯಲ್ಲಿ ದೇಶದ ಪ್ರಗತಿ ಸ್ಥಿರವಾಗುವುದು ಯಾವಾಗ?**

ಜನರಿಗೆ ಸಂಸ್ಕೃತಿಯನ್ನು ಕೊಡಬೇಕು ಆಗ ಮಾತ್ರ ದೇಶದ ಪ್ರಗತಿ ಸ್ಥಿರವಾಗಲು ಸಾಧ್ಯ ಏಕೆಂದರೆ ಸಂಸ್ಕೃತಿ ಮಾತ್ರ ಆಘಾತವನ್ನು ಸಹಿಸಬಲ್ಲದು ಎಂಬುದು ವಿವೇಕಾನಂದರ ಅಭಿಪ್ರಾಯವಾಗಿತ್ತು.

**10. ಬಾಳಿನಲ್ಲಿ ತೃಪ್ತಿ ದೊರಕಬೇಕಾದರೆ ಏನು ಮಾಡಬೇಕೆಂಬುದು ವಿವೇಕಾನಂದರ ಅಭಿಪ್ರಾಯ?**

"ದೇಶದ ಮತ್ತು ಇಡಿಯ ಜಗತ್ತಿನ ಕಲ್ಯಾಣಕ್ಕಾಗಿ ಕಾರ್ಯೋನ್ಮುಖರಾಗಿ ವೇದಾಂತದ ಸಂದೇಶವನ್ನು ಪ್ರತಿ ಮನೆಗೂ ಸಾರಿ ಪ್ರತಿಯೊಂದು ಆತ್ಮದಲ್ಲಿರುವ ಸುಪ್ತ ಪಾವಿತ್ರ್ಯವನ್ನು ಜಾಗೃತಗೊಳಿಸಲು ದುಡಿದಾಗ ಬಾಳಿನಲ್ಲಿ ತೃಪ್ತಿ ದೊರಕುತ್ತದೆ" ಎನ್ನುವುದು ವಿವೇಕಾನಂದರ ಅಭಿಪ್ರಾಯ.

*****

**11. 'ಜನಪದ ಒಗಟುಗಳು' ಪಾಠದಲ್ಲಿನ ಒಗಟಿನ ಉತ್ತರ 'ಅಂಗಿ' ಎಂಬುದನ್ನು ಸಮರ್ಥಿಸಿರಿ.**

ಅಂಗಿಯ ಎರಡು ತೋಳುಗಳ ಭಾಗವೇ ಕೈ. ಅಂಗಿಗೆ ತಲೆಯಿಲ್ಲ. ಅಂಗಿಯ ಬೇರೆಬೇರೆ ಭಾಗ ಸೇರಿಸಿ ಹೊಲಿಗೆ ಹಾಕಿರುವುದೇ ನವಗಾಯ, ರಾಜಮಹಾರಾಜರನ್ನು ಬಿಡದಂತೆ ಮೆಲ್ಲನೆ ಬಂದು ಶರೀರಕ್ಕೆ ಉಡುಗೆಯಾಗಿ ಏರಿಕೊಳ್ಳುವುದರಿಂದ ಅದು ಅಂಗಿಯಾಗಿ ಎಲ್ಲರಿಗೂ ಪ್ರಚಂಡವಾಗಿದೆ.

**12. 'ಜನಪದ ಒಗಟುಗಳು' ಪಾಠದಲ್ಲಿನ ಒಗಟಿಗೆ 'ಕುಪ್ಪಸ'ವು ಉತ್ತರ ಎಂಬುದನ್ನು ಹೇಗೆ ಹೇಳುವಿರಿ?**

ಕುಪ್ಪಸಕ್ಕೆ ಅಂಗೈಯನ್ನು ತೂರಿಸಿದರೆ ಮುಂಗೈಯನ್ನು ದಾಟಿ ಶರೀರಕ್ಕೆ ಕೂರುತ್ತದೆ. ಆದ್ದರಿಂದ ಅದು ಸಿಂಗಳೀಕನಾಗದೆ ಕುಪ್ಪಸವಾಗಿದೆ.

**13. 'ಜನಪದ ಒಗಟುಗಳು' ಪಾಠದಲ್ಲಿನ ಒಗಟಿಗೆ 'ತಾವರೆ ಬೇರು' ಎಂಬುದು ಉತ್ತರ – ಹೇಗೆ?**

ಕೆಸರಿನಲ್ಲಿ ಹುಟ್ಟಿ ಕೆಸರಿನಲ್ಲಿ ಬೆಳೆದು ಗಿಡವಾಗುವುದೆಂದರೆ ಅದು ತಾವರೆಯೇ ಹೌದು. ತಾವರೆ ಹುಟ್ಟುವುದು ಕೆಸರಿನಲ್ಲೇ ಆಗಿದೆ. ಆದ್ದರಿಂದ ಆ ಒಗಟಿಗೆ ಅರ್ಥ ತಾವರೆ ಬೇರು.

**14. 'ಜನಪದ ಒಗಟುಗಳು' ಪಾಠದಲ್ಲಿನ ಒಗಟಿನ ಉತ್ತರ 'ಕೊಕ್ಕರೆ' ಎಂಬುದನ್ನು ಸಮರ್ಥಿಸಿ.**

ಕೊಕ್ಕರೆ ಕಲ್ಲಿನಲ್ಲಿ ಕುಕ್ಕುವುದಿಲ್ಲ. ನೀರಿನಲ್ಲಿ ಮುಳುಗದೆ ತೇಲುತ್ತದೆ. ಮಡಿಮಡಿಯಾಗಿ ಬಿಳಿಯಾಗಿ ಇರುವುದರಿಂದ ಈ ಒಗಟಿನ ಉತ್ತರ ಕೊಕ್ಕರೆ.

**15. ಒಗಟುಗಳಿಂದ ಶೈಕ್ಷಣಿಕವಾಗಿ ಏನು ಲಾಭ?**

ಒಗಟುಗಳಿಂದ ಚಿಂತನೆ ಮಾಡುವ ಮನೋಭಾವ ಹೆಚ್ಚುತ್ತದೆ. ಉತ್ತರ ಕಂಡುಕೊಳ್ಳಲು ಮನಸ್ಸು ಆಲೋಚಿಸುತ್ತದೆ. ಮುದುಡಿದ ಮನಸ್ಸನ್ನು ಅರಳಿಸಲು, ಮನೋರಂಜನೆ ನೀಡಲು ಒಗಟುಗಳು ಸಹಾಯಕವಾಗುತ್ತವೆ. ಜನಪದರ ಬುದ್ಧಿವಂತಿಕೆಯನ್ನು ತಿಳಿಯುವುದರ ಜೊತೆಗೆ ಒಂದು ವಸ್ತುವನ್ನು ಹೇಗೆಲ್ಲ ಬಣ್ಣಿಸಬಹುದೆಂಬ ಚಿಂತನೆ ಮೂಡುತ್ತದೆ.

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **04 * 03 = 12**

**ಸಂದರ್ಭದ ಅಂಕ ವಿತರಣೆ : –** **ಆಯ್ಕೆ** = 1 ಅಂಕ
**ಸಂದರ್ಭ** = 1 ಅಂಕ
**ಸ್ವಾರಸ್ಯ** = 1 ಅಂಕ

**ಉದಾಹರಣೆ :**

ಆಯ್ಕೆ :– ಈ ಮೇಲಿನ ವಾಕ್ಯವನ್ನು ಶ್ರೀ _______________ ಅವರು ರಚಿಸಿರುವ _______________ ಕೃತಿಯಿಂದ ಆಯ್ದ _________ ಗದ್ಯಭಾಗ / ಪದ್ಯಭಾಗದಿಂದ ಆರಿಸಲಾಗಿದೆ.

**ಮಾದರಿ :–**

**"ತಾವು ಕಡಿಮೆ ಮಾತನಾಡಿದ್ದೀರಿ ಮತ್ತು ಹೆಚ್ಚು ಕೆಲಸ ಮಾಡಿದ್ದೀರಿ"**

**ಆಯ್ಕೆ :** ಈ ವಾಕ್ಯವನ್ನು ಶ್ರೀ **ಡಿ.ಎಸ್. ಜಯಪ್ಪಗೌಡ** ಅವರು ರಚಿಸಿರುವ **'ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು'** ಎಂಬ ಸಂಶೋಧನಾ ಗ್ರಂಥದಿಂದ ಆಯ್ದ **'ಭಾಗ್ಯಶಿಲ್ಪಿ ಸರ್. ಎಂ. ವಿಶ್ವೇಶ್ವರಯ್ಯ'** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :** ಪಂಡಿತ್ ಜವಾಹರಲಾಲ್ ನೆಹರು ಅವರು ಬೆಂಗಳೂರಿನಲ್ಲಿ ನಡೆದ ವಿಶ್ವೇಶ್ವರಯ್ಯ ಅವರ ಶತಮಾನೋತ್ಸವ ಸಮಾರಂಭದಲ್ಲಿ ಭಾಗವಹಿಸಿ, ಪ್ರಧಾನ ಭಾಷಣ ಮಾಡಿದ ಸಂದರ್ಭದಲ್ಲಿ ಈ ವಿಶ್ವೇಶ್ವರಯ್ಯ ಅವರನ್ನು ಕುರಿತು ಈ ಮಾತುಗಳನ್ನು ಹೇಳುತ್ತಾರೆ.

**ಸ್ವಾರಸ್ಯ :** ವಿಶ್ವೇಶ್ವರಯ್ಯ ಅವರು 'ಮಾತಿಗಿಂತ ಕೃತಿ ಲೇಸು' ಎಂದು ತಿಳಿದು ಕಾರ್ಯ ಪ್ರವೃತ್ತರಾಗಿ ಆದರ್ಶಪ್ರಾಯರಾಗಿದ್ದರು ಎಂಬುದನ್ನು ಈ ಮಾತಿನ ಮೂಲಕ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಲಾಗಿದೆ.

**ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ.** **01 * 04 = 04**

**(ಪದ್ಯಭಾಗ 1 ಪ್ರಶ್ನೆ – ಪದ್ಯ 1, 2, 5, ಮತ್ತು 6 ರಲ್ಲಿ ಒಂದು ಮಾತ್ರ)**

**1. ಎಮ್ಮ ನುಡಿಗೇಳ್**

ನೀನುಳ್ಳೊಡೆಲ್ಲರೊಳರೆಮ
ಗೇನುಮಳಲ್ ಮನದೊಳಿಲ್ಲದೆಂತೆನೆ ಮಗನೇ ।
ಭಾನುವೆ ಸಾಲದೆ ಪಗಲೆನಿ
ತಾನುಂ ದೀವಿಗೆಗಳುರಿದೊಡೇಂ ನಂದಿದೊಡೇಂ ॥

**ಅಥವಾ**

ಕುರುಕುಳನಂದನಂ ಪವನನಂದನನೆಂಬ ಮದಾಂಧಗಂಧಸಿಂ
ಧುರಮೆ ಕರುತ್ತು ಪಾಯೆ ಪಡಲಿಟ್ಟವೊಲಾದುದು ಪುಣ್ಯದೊಂದು ಪೆ ।
ರ್ಮರನುಳಿವಂತೆ ನೀನುಳಿದೆಯಿನ್ನಿರಿವನ್ನರುಮಿಲ್ಲ ಮುತ್ತರುಂ
ಕುರುಡರುಮೆನ್ನದೆಮ್ಮ ನುಡಿಗೇಳ್ ಮಗನೇ ಬಗೆ ತಂದೆಗಿಂಬುಕೆಯ್ ॥

**2. ಹಕ್ಕಿ ಹಾರುತಿದೆ ನೋಡಿದಿರಾ**

ನೀಲಮೇಘ ಮಂಡಲ – ಸಮ ಬಣ್ಣ
ಮುಗಿಲಿಗೆ ರೆಕ್ಕೆಗಳೊಡೆದವೋ ಅಣ್ಣಾ
ಚಿಕ್ಕೆಯ ಮಾಲೆಯ ಸೆಕ್ಕಿಸಿಕೊಂಡು
ಸೂರ್ಯ–ಚಂದ್ರರನು ಮಾಡಿದೆ ಕಣ್ಣಾ
ಹಕ್ಕಿ ಹಾರುತಿದೆ ನೋಡಿದಿರಾ?

**ಅಥವಾ**

ಯುಗ–ಯುಗಗಳ ಹಣೆ ಬರೆಹವ ಒರಸಿ
ಮನ್ವಂತರಗಳ ಭಾಗ್ಯವ ತೆರೆಸಿ
ರೆಕ್ಕೆಯ ಬೀಸುತ ಚೇತನಗೊಳಿಸಿ
ಹೊಸಗಾಲದ ಹಸುಮಕ್ಕಳ ಹರಸಿ
ಹಕ್ಕಿ ಹಾರುತಿದೆ ನೋಡಿದಿರಾ?

**3. ಸಂಕಲ್ಪಗೀತೆ**

ಕಲುಷಿತವಾದೀ ನದೀಜಲಗಳಿಗೆ
ಮುಂಗಾರಿನ ಮಳೆಯಾಗೋಣ
ಬರಡಾಗಿರುವೀ ಕಾಡುಮೇಡುಗಳ
ವಸಂತವಾಗುತ ಮುಟ್ಟೋಣ

**ಅಥವಾ**

ಮತಗಳೆಲ್ಲವು ಪಥಗಳು ಎನ್ನುವ
ಹೊಸ ಎಚ್ಚರದೊಳು ಬದುಕೋಣ
ಭಯ ಸಂಶಯದೊಳು ಕಂದಿದ ಕಣ್ಣೊಳು
ನಾಳಿನ ಕನಸನು ಬಿತ್ತೋಣ

**4. ಕೌರವೇಂದ್ರನ ಕೊಂದೆ ನೀನು**

ಕೊರಳ ಸೆರೆ ಹಿಗ್ಗಿದವು ದೃಗುಜಲ
ಉರವಣಿಸಿ ಕಡು ನೊಂದನಕಟಾ
ಕುರುಪತಿಗೆ ಕೇಡಾದುದೆಂದನು ತನ್ನ ಮನದೊಳಗೆ ॥
ಹರಿಯ ಹಗೆ ಹೊಗೆದೋರದುರುಹದೆ
ಬರಿದೆ ಹೋಹುದೆ ತನ್ನ ವಂಶವ
ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ ॥

**ಅಥವಾ**

ಮಾರಿಗೌತಣವಾಯ್ತು ನಾಳಿನ
ಭಾರತವು ಚತುರಂಗ ಬಲದಲಿ
ಕೌರವನ ಋಣ ಹಿಂಗೆ ರಣದಲಿ ಸುಭಟಕೋಟಿಯನು ॥
ತೀರಿಸಿಯೆ ಪತಿಯವಸರಕ್ಕೆ ಶ
ರೀರವನು ನೂಕುವೆನು ನಿನ್ನಯ
ವೀರರೈವರ ನೋಯಿಸೆನು ರಾಜೀವಸಖನಾಣೆ ॥

**ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ.** **01 * 04 = 04**

| | | |
|---|---|---|
| **ಅಂಕ ವಿತರಣೆ :** | **ಮೌಲ್ಯವನ್ನು ಆಧರಿಸಿ ಪದ್ಯದ ವಿವರಣಾತ್ಮಕ ಪಠ್ಯಾಂಶಕ್ಕೆ** | **= 03** |
| | **ಭಾಷೆ ಮತ್ತು ಶೈಲಿ** | **= 01** |
| | **ಒಟ್ಟು** | **= 04** |

**ಮಾದರಿ :–**

**ಬಿದ್ದುದನ್ನು ಮೇಲೆಬ್ಬಿಸಿ ನಿಲ್ಲಿಸಿ**
**ಹೊಸಭರವಸೆಗಳ ಕಟ್ಟೋಣ**
**ಮನುಜರ ನಡುವಿನ ಅಡ್ಡಗೋಡೆಗಳ**
**ಕೆಡವುತ ಸೇತುವೆಯಾಗೋಣ**

ಜನರಲ್ಲಿ ಇಂದು ನಾನಾಕಾರಣಗಳಿಗಾಗಿ ನಂಬಿಕೆ ವಿಶ್ವಾಸ, ಹೊಂದಿ ಬಾಳುವ ಗುಣ ಮುಂತಾದ ಸುಖಭಾವದ ಸ್ಥಂಭಗಳೇ ಬಿದ್ದುಹೋಗಿವೆ. ಹೀಗಾಗಿ ಚೆನ್ನಾಗಿ ಬದುಕುತ್ತೇವೆ ಎಂಬ ಭರವಸೆಯೇ ಹೊರಟುಹೋಗುತ್ತಿದೆ. ಆದ್ದರಿಂದ ನಂಬಿಕೆ, ವಿಶ್ವಾಸ, ಪ್ರೀತಿ ಸ್ನೇಹಗಳೆಂಬ ಆಧಾರಸ್ಥಂಭಗಳನ್ನು ಮತ್ತೆ ಮೇಲೆಬ್ಬಿಸಿ ಮನದಲ್ಲಿ ಸ್ಥಿರವಾಗಿ ನಿಲ್ಲುವಂತೆ ಮಾಡುವ ಹೊಸ ಭರವಸೆಗಳನ್ನು ಕಟ್ಟೋಣ. ಭಾಷೆ, ಜಾತಿ, ಮತ, ಧರ್ಮಗಳಲ್ಲಿನ ಭೇದಭಾವಗಳಿಂದ ಜನರಲ್ಲಿ ಅಸಮಾನತೆ, ಅಪನಂಬಿಕೆ, ಅಸ್ಪೃಶ್ಯತೆ ಮೊದಲಾದ ಅಡ್ಡಗೋಡೆಗಳು ನಿರ್ಮಾಣವಾಗಿವೆ. ಅವನ್ನು ಸಮಾನತೆ, ಸ್ನೇಹ, ಪ್ರೀತಿ, ಒಳ್ಳೆಯ ಚಿಂತನೆಗಳ ಮೂಲಕ ಮನುಜರ ನಡುವಿನ ಅಡ್ಡಗೋಡೆಗಳನ್ನು ಕೆಡವಿ ಪರಸ್ಪರರಲ್ಲಿ ನಂಬಿಕೆ ಮೂಡಿಸುವ ಸಹಬಾಳ್ವೆಗೆ ಸೇತುವೆಯಾಗುವ ಸಂಕಲ್ಪ ತೊಡಬೇಕೆಂದು ಕವಿ ಜಿ. ಎಸ್. ಶಿವರುದ್ರಪ್ಪ ಅವರು ಆಶಿಸುತ್ತಾರೆ. **'ಎಲ್ಲರೂ ಪ್ರೀತಿ ವಿಶ್ವಾಸಗಳಿಂದ ಬದುಕಬೇಕು'** ಎಂಬ ಮೌಲ್ಯಯುತ ಸಂದೇಶವನ್ನು ಪ್ರಸ್ತುತ ಪದ್ಯವು ತಿಳಿಸುತ್ತದೆ.

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಡನೆ ಬರೆಯಿರಿ. 14*01=14**

## ವ್ಯಾಕರಣಾಂಶಗಳು

## 1. ಕನ್ನಡ ವರ್ಣಮಾಲೆ

| ಕನ್ನಡ ವರ್ಣಮಾಲೆ – 49 | | | | | | | | |
|---|---|---|---|---|---|---|---|---|
| ಸ್ವರಗಳು – 13 | | | ವ್ಯಂಜನಗಳು – 34 | | | | ಯೋಗವಾಹಗಳು –2 | |
| | | | ವರ್ಗೀಯ ವ್ಯಂಜನಗಳು 25 | | | | | |
| ಹ್ರಸ್ವ ಸ್ವರಗಳು | ದೀರ್ಘ ಸ್ವರಗಳು | ಪ್ಲುತ ಸ್ವರಗಳು | ಅಲ್ಪ ಪ್ರಾಣಗಳು | ಮಹಾ ಪ್ರಾಣಗಳು | ಅನುನಾಸಿಕಗಳು | ಅವರ್ಗೀಯ ವ್ಯಂಜನಗಳು | ಅನುಸ್ವಾರ | ವಿಸರ್ಗ |
| 6 | 7 | | 10 | 10 | 5 | 9 | 1 | 1 |
| ಅ | ಆ | | ಕ್ ಗ್ | ಖ್ ಘ್ | ಙ್ | ಯ್ | ಂ | ಃ |
| ಇ | ಈ | | ಚ್ ಜ್ | ಛ್ ಝ್ | ಞ್ | ರ್ | | |
| ಉ | ಊ | | ಟ್ ಡ್ | ಠ್ ಢ್ | ಣ್ | ಲ್ | | |
| ಋ | ಏ | | ತ್ ದ್ | ಥ್ ಧ್ | ನ್ | ವ್ | | |
| ಎ | ಐ | | ಪ್ ಬ್ | ಫ್ ಭ್ | ಮ್ | ಶ್ | | |
| ಒ | ಓ | | | | | ಷ್ | | |
| | ಔ | | | | | ಸ್ | | |
| | | | | | | ಹ್ | | |
| | | | | | | ಳ್ | | |

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಡನೆ ಬರೆಯಿರಿ.**

1. ವ್ಯಂಜನಾಕ್ಷರಗಳಲ್ಲಿ ಅಲ್ಪಪ್ರಾಣಾಕ್ಷರಗಳ ಸಂಖ್ಯೆ :
   (ಎ) 6 (ಬಿ) 10
   (ಸಿ) 5 (ಡಿ) 9
2. ಙ್, ಞ್, ಣ್, ನ್, ಮ್ – ಈ ಅಕ್ಷರಗಳು ವರ್ಣಮಾಲೆಯ ಈ ಗುಂಪಿಗೆ ಸೇರಿವೆ :
   (ಎ) ಅಲ್ಪಪ್ರಾಣಗಳು (ಬಿ) ಮಹಾಪ್ರಾಣಗಳು
   ಸಿ) ಅನುನಾಸಿಕಗಳು (ಡಿ) ಸ್ವರಗಳು
3. ಕನ್ನಡ ವರ್ಣಮಾಲೆಯಲ್ಲಿ ಒಂದು ಮಾತ್ರಾಕಾಲದಲ್ಲಿ ಉಚ್ಚರಿಸುವ ಸ್ವರಾಕ್ಷರಗಳು :
   (ಎ) ದೀರ್ಘಸ್ವರ (ಬಿ) ಹ್ರಸ್ವಸ್ವರ
   (ಸಿ) ಪ್ಲುತಸ್ವರ (ಡಿ) ಸುಸ್ವರ
4. 'ರಸಭಾವ' ಈ ಪದದಲ್ಲಿರುವ ಮಹಾಪ್ರಾಣಾಕ್ಷರ :
   (ಎ) ರ (ಬಿ) ಸ
   (ಸಿ) ಭಾ (ಡಿ) ವ

5. ಈ ಕೆಳಗಿನ ಪದಗಳಲ್ಲಿ ವಿಜಾತಿ ಸಂಯುಕ್ತಾಕ್ಷರ ಇರುವ ಪದ :
(ಎ) ಚಪ್ಪಾಳೆ (ಬಿ) ಒತ್ತಡ
(ಸಿ) ಕಟ್ಟಡ (ಡಿ) ಅತ್ಯಾಸೆ

6. ಇವುಗಳಲ್ಲಿ ಅನುಸ್ವಾರ ಮತ್ತು ವಿಸರ್ಗ ಸಹಿತ ಪದ
(ಎ) ಅಂತಃಪುರ (ಬಿ) ದುಃಖ
(ಸಿ) ಆನಂತರ (ಡಿ) ಸನ್ಮಾನ

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದಗಳನ್ನು ಬರೆಯಿರಿ.**

1. ಹ್ರಸ್ವಸ್ವರಗಳು : 06 : : ದೀರ್ಘ ಸ್ವರಗಳು : ______________
2. ಯ್ ರ್ ಲ್ ವ್ : ಅವರ್ಗೀಯ ವ್ಯಂಜನಗಳು : : ಕ್ ಚ್ ಟ್ ತ್ ಪ್ : _________
3. ಹ್ರಸ್ವಸ್ವರ : ಒಂದು ಮಾತ್ರಾಕಾಲ : : ದೀರ್ಘಸ್ವರ : _______________
4. ಅಜ್ಜ : ಸಜಾತಿ ಸಂಯುಕ್ತಾಕ್ಷರ : : ಅಕ್ಷರ : ________________

## 2. ನಾಮಪದಗಳು

| ರೂಢನಾಮಗಳು | | | | |
|---|---|---|---|---|
| ನದಿ | ಪರ್ವತ | ಊರು | ದೇಶ | ಮನುಷ್ಯ |

*****

| ಅಂಕಿತನಾಮಗಳು | | | |
|---|---|---|---|
| ಸಹದೇವ | ಧರ್ಮರಾಯ | ರಾಹುಲ | ಕಮಲಾಕ್ಷ |

*****

| ಅನ್ವರ್ಥನಾಮಗಳು | | | |
|---|---|---|---|
| ವ್ಯಾಪಾರಿ | ವಿದ್ವಾಂಸ | ವಿಜ್ಞಾನಿ | ಪೂಜಾರಿ |

*****

| ಗುಣವಾಚಕಗಳು | | | |
|---|---|---|---|
| ಒಳ್ಳೆಯ | ಕೆಟ್ಟ | ದೊಡ್ಡದು | ಹಳತು |

*****

| ಸಂಖ್ಯಾವಾಚಕಗಳು | | | |
|---|---|---|---|
| ಹನ್ನೆರಡು | ಐವತ್ತು | ಎಂಬತ್ತು | |

*****

| ಸಂಖ್ಯೇಯವಾಚಕಗಳು | | | |
|---|---|---|---|
| ಮೂವರು | ಹನ್ನೆರಡನೆಯ | ಎಂಬತ್ತನೆಯ | ನಾಲ್ವರು |

*****

| ಭಾವನಾಮಗಳು | | | | |
|---|---|---|---|---|
| ಕೆಂಪು | ಹಿರಿಮೆ | ನೋಟ | ಮಾಟ | ಆಟ |

*****

| ಪರಿಮಾಣವಾಚಕಗಳು | | | | |
|---|---|---|---|---|
| ಅಷ್ಟು | ಎಷ್ಟು | ಹಲವು | ಇನಿತು | ಅನಿತು |

*****

| ದಿಗ್ವಾಚಕಗಳು | | | | |
|---|---|---|---|---|
| ಮೂಡಣ | ತೆಂಕಣ | ಪಡುವಣ | ಈಶಾನ್ಯ | ಆಗ್ನೇಯ |

*****

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಡನೆ ಬರೆಯಿರಿ.**

1. ಈ ಕೆಳಗಿನ ಪದಗಳಲ್ಲಿ ರೂಢನಾಮ ಪದ ಗುರುತಿಸಿ ಬರೆಯಿರಿ :
(ಎ) ವ್ಯಾಪಾರಿ (ಬಿ) ಧರ್ಮರಾಯ
(ಸಿ) ನದಿ (ಡಿ) ಕೆಟ್ಟ

2. ‘ಒಳ್ಳೆಯ’ ಈ ಪದವು ನಾಮಪದದ ಈ ಗುಂಪಿಗೆ ಸೇರಿದೆ :
(ಎ) ಸಂಖ್ಯೇಯವಾಚಕ (ಬಿ) ಗುಣವಾಚಕ
(ಸಿ) ದಿಗ್ವಾಚಕ (ಡಿ) ಪರಿಮಾಣವಾಚಕ

3. ಅರ್ಥಕ್ಕೆ ಅನುಗುಣವಾದ ಹೆಸರನ್ನು ಹೀಗೆ ಕರೆಯುತ್ತಾರೆ :

(ಎ) ರೂಢನಾಮ (ಬಿ) ಅಂಕಿತನಾಮ

(ಸಿ) ಅನ್ವರ್ಥನಾಮ (ಡಿ) ಭಾವನಾಮ

4. ವಿಶ್ವೇಶ್ವರಯ್ಯನವರು 'ಶಿಕ್ಷಣವು ಸಂಜೀವಿನಿ' ಎಂದು ಅರಿತಿದ್ದರು.

ಈ ವಾಕ್ಯದಲ್ಲಿರುವ ಅಂಕಿತನಾಮ :

(ಎ) ಶಿಕ್ಷಣ (ಬಿ) ವಿಶ್ವೇಶ್ವರಯ್ಯ

(ಸಿ) ಸಂಜೀವಿನಿ (ಡಿ) ಅರಿತಿದ್ದರು

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಸಂಬಂಧಹೊಂದುವ ಪದಗಳನ್ನು ಬರೆಯಿರಿ.**

1. ನದಿ : ರೂಢನಾಮ : : ವಿದ್ವಾಂಸ : ____________
2. ಹನ್ನೆರಡು : ಸಂಖ್ಯಾವಾಚಕ : : ಹತ್ತನೆಯ : ______
3. ಹಿರಿಮೆ : ಭಾವನಾಮ : : ಎಷ್ಟು : _______
4. ವಿಜ್ಞಾನಿ : ಅನ್ವರ್ಥನಾಮ : : ಮೈಸೂರು : _________
5. ದಕ್ಷಿಣ : ದಿಗ್ವಾಚಕ : : ವ್ಯಾಪಾರಿ : ______________

*****

## 3. ಸರ್ವನಾಮಗಳು

### 1. ಪುರುಷಾರ್ಥಕ ಸರ್ವನಾಮಗಳು

| | |
|---|---|
| ನಾನು | ನಾವು |
| ನೀನು | ನೀವು |
| ಅವನು / ಇವನು<br>ಅವಳು / ಇವಳು<br>ಅದು / ಇದು | ಅವರು / ಇವರು<br>ಅವರು / ಇವರು<br>ಅವು / ಇವು |

*****

| 2. ಆತ್ಮಾರ್ಥಕ ಸರ್ವನಾಮಗಳು | | | |
|---|---|---|---|
| ತಾನು | ತಾವು | ತನ್ನ | ತಮ್ಮ |

*****

| 3. ಪ್ರಶ್ನಾರ್ಥಕ ಸರ್ವನಾಮಗಳು | | | |
|---|---|---|---|
| ಯಾರು? | ಏನು? | ಯಾವುದು? | |

*****

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಡನೆ ಬರೆಯಿರಿ.**

1. ಅವನು ಶಾಲೆಗೆ ದಿನವೂ ಬರುತ್ತಾನೆ. ಈ ವಾಕ್ಯದಲ್ಲಿರುವ ಸರ್ವನಾಮ :

(ಎ) ದಿನವೂ (ಬಿ) ಶಾಲೆಗೆ

(ಸಿ) ಬರುತ್ತಾನೆ (ಡಿ) ಅವನು

2. **'ತಾನು'** ಎಂಬುದು ಈ ಸರ್ವನಾಮಪದವಾಗಿದೆ :

(ಎ) ಪ್ರಶ್ನಾರ್ಥಕ (ಬಿ) ಆತ್ಮಾರ್ಥಕ

(ಸಿ) ಪುರುಷಾರ್ಥಕ (ಡಿ) ದಿಗ್ವಾಚಕ

3. ಇವುಗಳಲ್ಲಿ ಮಧ್ಯಮ ಪುರುಷ ಸರ್ವನಾಮವನ್ನು ಗುರುತಿಸಿ ಬರೆಯಿರಿ.

(ಎ) ನಾನು (ಬಿ) ನೀನು

(ಸಿ) ತಾನು (ಡಿ) ಅವನು

4. **'ಅವರು'** ಪದವು ಈ ಸರ್ವನಾಮಕ್ಕೆ ಉದಾಹರಣೆಯಾಗಿದೆ :

(ಎ) ಉತ್ತಮ ಪುರುಷ (ಬಿ) ಮಧ್ಯಮ ಪುರುಷ

(ಸಿ) ಪ್ರಥಮ ಪುರುಷ (ಡಿ) ಆತ್ಮಾರ್ಥಕ ಸರ್ವನಾಮ

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದಗಳನ್ನು ಬರೆಯಿರಿ.**

1. ನನ್ನ : ಉತ್ತಮಪುರುಷ :: ನಿನ್ನ : ___________
2. ತಾನು : ಆತ್ಮಾರ್ಥಕ :: ಅವನು : _____________
3. ಯಾರು : ಪ್ರಶ್ನಾರ್ಥಕ :: ತಾವು : _____________
4. ರಾಮ : ಅಂಕಿತನಾಮ :: ಅವಳು : ___________

## 4. ತತ್ಸಮ – ತದ್ಭವಗಳು

| ತತ್ಸಮ | ತದ್ಭವ | ತತ್ಸಮ | ತದ್ಭವ |
|---|---|---|---|
| ದೃಷ್ಟಿ | ದಿಟ್ಟಿ | ತಪಸ್ವಿ | ತವಸಿ |
| ಗ್ರಹ | ಗರ | ವಿಜ್ಞಾನ | ಬಿನ್ನಣ |
| ಮುಖಶಾಲೆ | ಮೊಗಸಾಲೆ | ದಾತೃ | ದಾತಾರ |
| ವಿಜ್ಞಾಪನೆ | ಬಿನ್ನಹ / ಬಿನ್ನಪ | ಸಾಮಂತ | ಸಾವಂತ |
| ಸುಧಾ / ಸುಧೆ | ಸೊದೆ | ತಟ | ತಡಿ |
| ವರ್ಷ | ವರುಷ / ಬರಿಸ | ಶ್ರೀ | ಸಿರಿ |
| ರಾಜ | ರಾಯ | ಭಕ್ತ | ಬಕುತ |
| ದಿಶಾ | ದೆಸೆ / ದಿಸೆ / ದಿಶೆ | ಚಂದ್ರ | ಚಂದಿರ |
| ವೀರ | ಬೀರ | ವಂಶ | ಬಂಚ |
| ಸ್ಥಾನ | ತಾಣ | ಯಶ | ಜಸ |
| ಪತ್ತನ | ಪಟ್ಟಣ | ಕಾರ್ಯ | ಕಜ್ಜ |
| ವ್ಯಯ | ಬೀಯ | ಕೋಕಿಲಾ | ಕೋಗಿಲೆ |
| ವ್ಯಾಪಾರಿ | ಬೇಹಾರಿ | ಸಂದೇಹ | ಸಂದೆಯ |
| ಅಮೃತ | ಅಮರ್ದು | ದೀಪಿಕಾ | ದೀವಿಗೆ |
| ಪುಣ್ಯ | ಹೂನ್ಯ | ಖನಿ | ಗಣಿ |
| ಪಕ್ಷಿ | ಹಕ್ಕಿ | ಬ್ರಹ್ಮ | ಬೊಮ್ಮ |
| ಶಶಿ | ಸಸಿ | ಶಿರ | ಸಿರ |
| ಕಲಶ | ಕಳಸ | ಅಂಕುಶ | ಅಂಕುಸ |
| ದ್ಯೂತ | ಜೂಜು | ವಂಧ್ಯಾ | ಬಂಜೆ |
| ವಿದ್ಯಾಧರ | ಬಿಜ್ಜೋದರ | ವೈಶಾಖ | ಬೇಸಗೆ |
| ಕುಠಾರ | ಕೊಡಲಿ | ಪಾದುಕಾ | ಹಾವುಗೆ |
| ಅರ್ಕ | ಎಕ್ಕ | ಶುನಕ | ಸೊಣಗ |
| ಅಟವಿ | ಅಡವಿ | ಪ್ರಸಾದ | ಹಸಾದ |
| ಯಜ್ಞ | ಜನ್ನ | ಕಾವ್ಯ | ಕಬ್ಬ |

*****

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಡನೆ ಬರೆಯಿರಿ.**

1. 'ಅಮೃತ' ಪದದ ತದ್ಭವ ರೂಪ :
   (ಎ) ಆವೃತ (ಬಿ) ಅಮರ್ದು
   (ಸಿ) ಸುಧಾ (ಡಿ) ಹಾಲು
2. ಈ ಕೆಳಗಿನ ಪದಗಳಲ್ಲಿ ತತ್ಸಮ ಪದ :
   (ಎ) ರಾಯ (ಬಿ) ಬಿನ್ನಹ
   (ಸಿ) ಸೊದೆ (ಡಿ) ಸ್ಥಾನ

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಸಂಬಂಧಹೊಂದುವ ಪದಗಳನ್ನು ಬರೆಯಿರಿ.**

1. ರಾಯ : ರಾಜ :: ದೀವಿಗೆ : ______
2. ಭಕ್ತ : ತತ್ಸಮ :: ಬರಿಸ : ______

## 5. ಗ್ರಾಮ್ಯ / ಆಡು ನುಡಿ ರೂಪಗಳು > ಗ್ರಾಂಥಿಕ ರೂಪಗಳು

| ಗ್ರಾಮ್ಯ/ಆಡು ನುಡಿ | ಗ್ರಾಂಥಿಕ ರೂಪ | ಗ್ರಾಮ್ಯ/ಆಡು ನುಡಿ | ಗ್ರಾಂಥಿಕ ರೂಪ |
|---|---|---|---|
| ಹೀಂಗ | ಹೀಗೆ | ಮ್ಯಾಗ | ಮೇಲೆ |
| ಕಳುವ್ಯಾರೆ | ಕಳುಹಿಸಿದ್ದಾರೆ | ಇಲ್ಲದ್ಹಂಗ | ಇಲ್ಲದ ಹಾಗೆ |
| ಇಸವಾಸ | ವಿಶ್ವಾಸ | ಸಕ್ಕಾರಿ | ಸಕ್ಕರೆ |

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಉತ್ತರಗಳಲ್ಲಿ ಸೂಕ್ತ ಉತ್ತರವನ್ನು ಗುರುತಿಸಿ ಬರೆಯಿರಿ.**

1. **'ಮ್ಯಾಗ'** ಪದದ ಗ್ರಾಂಥಿಕ ರೂಪ
   (ಎ) ಮಾಗಿ (ಬಿ) ಮೇಲೆ
   (ಸಿ) ಮೇಘ (ಡಿ) ಯಾಗ
2. **'ಇಸವಾಸ'** ಪದದ ಗ್ರಾಂಥಿಕ ರೂಪ :
   (ಎ) ಸಹವಾಸ (ಬಿ) ವಿಶ್ವಾಸ
   (ಸಿ) ಶ್ವಾಸ (ಡಿ) ನಿವಾಸ

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಸಂಬಂಧಹೊಂದುವ ಪದಗಳನ್ನು ಬರೆಯಿರಿ.**

1. ಹೀಂಗ : ಹೀಗೆ : : ಇಲ್ಲದಂಗ : ____________
2. ಕಳುವ್ಯಾರೆ: ಕಳುಹಿಸಿದ್ದಾರೆ : : ಸಕ್ಕಾರಿ : ____________

## 6. ಅನ್ಯದೇಶ್ಯ ಪದಗಳು

| ಫಾರ್ಸಿ / ಪರ್ಷಿಯನ್ ಭಾಷೆ ಪದಗಳು | | | | |
|---|---|---|---|---|
| ಅಬಕಾರಿ | ರಸ್ತೆ | ದವಾಖಾನೆ | ಚೌಕಾಷಿ | ದಿವಾನ |
| ಆಮೀನು | ಅಜಮಾಯಿಸಿ | ಆಮದು | ದಲ್ಲಾಳಿ | |

*****

| ಗ್ರೀಕ್ ಮತ್ತು ರೋಮನ್ ಭಾಷೆ ಪದಗಳು | | | | |
|---|---|---|---|---|
| ದಮ್ಮಡಿ | ದಮಡಿ | ದಮ್ಮು | ದೀನಾರ | ಗದ್ಯಾಣ |

*****

| ಅರಬ್ಬೀ ಭಾಷೆ ಪದಗಳು | | | |
|---|---|---|---|
| ಅಮಾನತು | ಅಸಲು | ಇನಾಮು | ಕಾಯ್ದೆ |
| ಗಲೀಜು | ತಕರಾರು | ತರಬೇತು | ನಕಲಿ |

*****

| ಪೋರ್ಚ್‌ಗೀಸ್ ಭಾಷೆ ಪದಗಳು | | | | |
|---|---|---|---|---|
| ಮೇಜು | ತಂಬಾಕು | ಅನಾನಸು | ಸಾಬೂನು | ರಸೀದಿ |
| ಆಸ್ಪತ್ರೆ | ಚೊಂಬು | ಚಾ | ಇಸ್ತ್ರಿ | |

*****

| ಉರ್ದು ಭಾಷೆ ಪದಗಳು | | | |
|---|---|---|---|
| ಕಿಮ್ಮತ್ತು | ತಾರೀಖು | ತಾಲೂಕು | ಅಹವಾಲು |
| ಇಲಾಖೆ | ದರ್ಜೆ | ಬಂದೂಕು | ರುಜು |
| ಶುರು | ಶಾಮೀಲು | | |

*****

| ಹಿಂದೂಸ್ಥಾನೀ ಭಾಷೆ ಪದಗಳು | | | |
|---|---|---|---|
| ಅರ್ಜಿ | ಕಚೇರಿ | ಕಾರ್ಖಾನೆ | ಸಲಾಮು |
| ದರ್ಬಾರು | ಕುರ್ಚಿ | ಕಾಗದ | ಹುಕುಂ |

*****

| ಇಂಗ್ಲಿಷ್ ಭಾಷೆ ಪದಗಳು | | | |
|---|---|---|---|
| ಬಸ್ಸು | ಕಾರು | ಕಾಲೇಜು | ಲೈಟು |
| ಪೆನ್ನು | ಸೋಪು | ಡಿಪ್ಲೊಮಾ | |

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಡನೆ ಬರೆಯಿರಿ.**

1. **'ಮೇಜು'** ಪದವು ಈ ಭಾಷೆಯಿಂದ ಕನ್ನಡಕ್ಕೆ ಬಂದಿದೆ :
   (ಎ) ಇಂಗ್ಲೀಷ್ (ಬಿ) ಉರ್ದು
   (ಸಿ) ಪೋರ್ಚುಗೀಸ್ (ಡಿ) ಪಾರ್ಸಿ
2. ಈ ಪದಗಳಲ್ಲಿ ಉರ್ದು ಭಾಷೆಯಿಂದ ಬಂದ ಪದ ಗುರುತಿಸಿ :
   (ಎ) ಇಲಾಖೆ (ಬಿ) ಅರ್ಜಿ
   (ಸಿ) ಬಸ್ಸು (ಡಿ) ಕಾಯಿದೆ

## 7. ದ್ವಿರುಕ್ತಿಗಳು

| | | | |
|---|---|---|---|
| ಹೌದುಹೌದು | ನಿಲ್ಲುನಿಲ್ಲು | ಬಂದೆಬಂದೆ | ದೊಡ್ಡದೊಡ್ಡ. |
| ಹೆಚ್ಚುಹೆಚ್ಚು | ಮನೆಮನೆ | ಕೇರಿಕೇರಿ | ಊರೂರು |
| ನಿಲ್ಲುನಿಲ್ಲು. | ಎಲೇಎಲೇ | ಬನ್ನಿಬನ್ನಿ | ಹತ್ತಿರಹತ್ತಿರ. |
| ಅಗೋಅಗೋ | ಅಬ್ಬಬ್ಬಾ! | ಆಹಾಹಾ | ಬೇಡಬೇಡ |
| ಕೊಡುಕೊಡು | ನಡೆನಡೆ | ಅಮ್ಮಾಅಮ್ಮಾ | ಆಗಲಿಆಗಲಿ |
| ಬೇಗಬೇಗ | ನಡೆನಡೆ | ಓಡುಓಡು | ಅಯ್ಯೋಅಯ್ಯೋ, |
| ದೇವರೆದೇವರೇ | ನೋಡಿನೋಡಿ | ಹಾವುಹಾವು, | ಕೆಟ್ಟೆಕೆಟ್ಟೆ, |
| ಬೆಂಕಿಬೆಂಕಿ. | ದುರುಳಾದುರುಳಾ | ಸಾಕುಸಾಕು | ಈಗೀಗ |
| ತಿರುತಿರುಗಿ | ಒಬ್ಬೊಬ್ಬ | ಇರಲಿ ಇರಲಿ | ಇರುಳಿರುಳು |

**ದ್ವಿರುಕ್ತಿಯಲ್ಲಿ ಬರುವ ಕೆಲವು ವಿಶೇಷ ರೂಪಗಳು.**

| | |
|---|---|
| ಮೊದಲು + ಮೊದಲು | = ಮೊತ್ತಮೊದಲು / ಮೊಟ್ಟಮೊದಲು |
| ಕಡೆಗೆ + ಕಡೆಗೆ | = ಕಟ್ಟಕಡೆಗೆ / ಕಡೆಕಡೆಗೆ |
| ನಡುವೆ + ನಡುವೆ | = ನಟ್ಟನಡುವೆ / ನಡುನಡುವೆ |
| ಬಯಲು +ಬಯಲು | = ಬಟ್ಟಬಯಲು |
| ತುದಿ + ತುದಿ | = ತುತ್ತತುದಿ |
| ಕೊನೆಗೆ + ಕೊನೆಗೆ | = ಕೊನೆಕೊನೆಗೆ |
| ಮೆಲ್ಲನೆ + ಮೆಲ್ಲನೆ | = ಮೆಲ್ಲಮೆಲ್ಲನೆ |

## ಜೋಡುನುಡಿಗಳು

| | | | |
|---|---|---|---|
| ಸತಿಪತಿ | ಕೆನೆಮೊಸರು | ಹಾಲ್ಜೇನು | ಮಕ್ಕಳುಮರಿ |
| ಹುಳಹುಪ್ಪಡಿ | ಸೊಪ್ಪುಸೆದೆ | ಬಟ್ಟೆಬರೆ | |

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಡನೆ ಬರೆಯಿರಿ.**

1. 'ಬಟ್ಟಬಯಲು' ಪದವು ಈ ವ್ಯಾಕರಣಕ್ಕೆ ಸೇರಿದೆ :
   (ಎ) ಜೋಡುನುಡಿ (ಬಿ) ದ್ವಿರುಕ್ತಿ
   (ಸಿ) ಅನುಕರಣಾವ್ಯಯ (ಡಿ) ನುಡಿಗಟ್ಟು
2. ಈ ಪದಗಳಲ್ಲಿ ದ್ವಿರುಕ್ತಿ ಪದವನ್ನು ಗುರುತಿಸಿ ಬರೆಯಿರಿ :
   (ಎ) ನಿಲ್ಲುನಿಲ್ಲು (ಬಿ) ಢಣಢಣ
   (ಸಿ) ಸತಿಪತಿ (ಡಿ) ಗಜಪತಿ
3. 'ಹಾಲ್ಜೇನು' ಪದವು ಈ ವ್ಯಾಕರಣಾಂಶಕ್ಕೆ ಸೇರಿದೆ :
   (ಎ) ದ್ವಿರುಕ್ತಿ (ಬಿ) ನುಡಿಗಟ್ಟು
   (ಸಿ) ಅನುಕರಣಾವ್ಯಯ (ಡಿ) ಜೋಡುನುಡಿ
4. ಈ ಪದಗಳಲ್ಲಿ ಜೋಡುನುಡಿ ಪದವನ್ನು ಗುರುತಿಸಿ.
   (ಎ) ನಟ್ಟನಡುವೆ (ಬಿ) ಸೊಪ್ಪುಸೆದೆ
   (ಸಿ) ಜುಳುಜುಳು (ಡಿ) ಈಗೀಗ

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದಗಳನ್ನು ಬರೆಯಿರಿ**

1. ಬನ್ನಿಬನ್ನಿ : ದ್ವಿರುಕ್ತಿ :: ಹುಳಹುಪ್ಪಡಿ : ____________
2. ಹಾಲ್ಜೇನು : ಜೋಡುನುಡಿ :: ತುತ್ತತುದಿ : ____________

## 8. ವಿಭಕ್ತಿ ಪ್ರತ್ಯಯಗಳು

| ಕ್ರ. ಸಂ. | ವಿಭಕ್ತಿಯ ಹೆಸರು | ಹಳಗನ್ನಡದ ವಿಭಕ್ತಿ ಪ್ರತ್ಯಯ | ಹೊಸಗನ್ನಡದ ವಿಭಕ್ತಿ ಪ್ರತ್ಯಯ | ಕಾರಕಾರ್ಥ |
|---|---|---|---|---|
| 1 | ಪ್ರಥಮ | ಮ್ | ಉ | ಕರ್ತೃ |
| 2 | ದ್ವಿತೀಯಾ | ಅಮ್ | ಅನ್ನು | ಕರ್ಮ |
| 3 | ತೃತೀಯಾ | ಇಮ್ | ಇಂದ | ಕರಣ |
| 4 | ಚತುರ್ಥೀ | ಗೆ/ಇಗೆ/ಕೆ/ಕ್ಕೆ | ಗೆ/ಕೆ/ಕ್ಕೆ | ಸಂಪ್ರದಾನ |
| 5 | ಪಂಚಮೀ | ಅತ್ತಣಿಂ | ದೆಸೆಯಿಂದ | ಅಪಾದಾನ |
| 6 | ಷಷ್ಠೀ | ಅ | ಅ | ಸಂಬಂಧ |
| 7 | ಸಪ್ತಮೀ | ಒಳ್ | ಅಲ್ಲಿ | ಅಧಿಕರಣ |

*****

| ಕ್ರ. ಸಂ. | ವಿಭಕ್ತಿಯ ಹೆಸರು | ಹಳಗನ್ನಡದ ವಿಭಕ್ತಿ ಪ್ರತ್ಯಯ | ಹಳಗನ್ನಡ ಪದರೂಪಗಳು | ಕಾರಕಾರ್ಥ |
|---|---|---|---|---|
| 1 | ಪ್ರಥಮ | ಮ್ | ಸಾವಿತ್ರಿ | ಕರ್ತೃ |
| 2 | ದ್ವಿತೀಯಾ | ಅಮ್ | ಸಾವಿತ್ರಿಯಂ | ಕರ್ಮ |
| 3 | ತೃತೀಯಾ | ಇಮ್ | ಸಾವಿತ್ರಿಯಿಂ | ಕರಣ |
| 4 | ಚತುರ್ಥೀ | ಗೆ/ಇಗೆ/ಕೆ/ಕ್ಕೆ | ಸಾವಿತ್ರಿಂಗೆ | ಸಂಪ್ರದಾನ |
| 5 | ಪಂಚಮೀ | ಅತ್ತಣಿಂ | ಸಾವಿತ್ರಿಯತ್ತಣಿಂ | ಅಪಾದಾನ |
| 6 | ಷಷ್ಠೀ | ಅ | ಸಾವಿತ್ರಿಯ | ಸಂಬಂಧ |
| 7 | ಸಪ್ತಮೀ | ಒಳ್ | ಸಾವಿತ್ರಿಯೊಳ್ | ಅಧಿಕರಣ |

*****

| ಕ್ರ. ಸಂ. | ವಿಭಕ್ತಿಯ ಹೆಸರು | ಹೊಸಗನ್ನಡದ ವಿಭಕ್ತಿ ಪ್ರತ್ಯಯ | ಹಳಗನ್ನಡ ಪದರೂಪಗಳು | ಕಾರಕಾರ್ಥ |
|---|---|---|---|---|
| 1 | ಪ್ರಥಮ | ಉ | ಸಾವಿತ್ರಿಯು | ಕರ್ತೃ |
| 2 | ದ್ವಿತೀಯಾ | ಅನ್ನು | ಸಾವಿತ್ರಿಯನ್ನು | ಕರ್ಮ |
| 3 | ತೃತೀಯಾ | ಇಂದ | ಸಾವಿತ್ರಿಯಿಂದ | ಕರಣ |
| 4 | ಚತುರ್ಥೀ | ಗೆ/ಕೆ/ಕ್ಕೆ | ಸಾವಿತ್ರಿಗೆ | ಸಂಪ್ರದಾನ |
| 5 | ಪಂಚಮೀ | ದೆಸೆಯಿಂದ | ಸಾವಿತ್ರಿಯ ದೆಸೆಯಿಂದ | ಅಪಾದಾನ |
| 6 | ಷಷ್ಠೀ | ಅ | ಸಾವಿತ್ರಿಯ | ಸಂಬಂಧ |
| 7 | ಸಪ್ತಮೀ | ಅಲ್ಲಿ | ಸಾವಿತ್ರಿಯಲ್ಲಿ | ಅಧಿಕರಣ |

*****

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಡನೆ ಬರೆಯಿರಿ.**

1. 'ಕಲೋಪಾಸಕನಿಗೆ' ಈ ಪದದಲ್ಲಿ ಇರುವ ವಿಭಕ್ತಿಯ ಹೆಸರು :
   (ಎ) ಪ್ರಥಮ (ಬಿ) ದ್ವಿತೀಯ
   (ಸಿ) ತೃತೀಯ (ಡಿ) ಚತುರ್ಥಿ
2. 'ಕೆಲದೊಳ್' ಪದದಲ್ಲಿರುವ ವಿಭಕ್ತಿ ಪ್ರತ್ಯಯ :
   (ಎ) ಪಂಚಮಿ (ಬಿ) ಷಷ್ಠಿ
   (ಸಿ) ಸಪ್ತಮಿ (ಡಿ) ಪ್ರಥಮ
3. ದ್ವಿತೀಯ ವಿಭಕ್ತಿಯಲ್ಲಿರುವ ಕಾರಕಾರ್ಥ :
   (ಎ) ಕರ್ತೃಕಾರಕ (ಬಿ) ಕರ್ಮಕಾರಕ
   (ಸಿ) ಕರಣಕಾರಕ (ಡಿ) ಸಂಪ್ರದಾನಕಾರಕ

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಸಂಬಂಧಹೊಂದುವ ಪದಗಳನ್ನು ಬರೆಯಿರಿ.**

1. ಕರ್ಣ೦ಗೆ : ಚತುರ್ಥಿ ವಿಭಕ್ತಿ : : ಗಾಂಡೀವಿಯೊಳ್ : ____________
2. ಚತುರ್ಥಿ ವಿಭಕ್ತಿ : ಸಂಪ್ರದಾನ : : ಪಂಚಮಿ ವಿಭಕ್ತಿ : ____________
3. ಅತ್ತಣಿಂ : ಪಂಚಮಿ ವಿಭಕ್ತಿ : : ಇಂ : ____________
4. ಉತ್ತ : ಕಾಲಪ್ರತ್ಯಯ : : ಇಂದ : ____________

## 9. ಸಂಧಿಗಳು

### ಕನ್ನಡ ಸಂಧಿಗಳು

**'ಲೋಪ ಸಂಧಿ' (ಸ್ವರ ಸಂಧಿ)**

| | | | |
|---|---|---|---|
| ಊರೂರು | ಬಲ್ಲೆನೆಂದು | ಮಾತಂತು | ಸಂಪನ್ನರಾದ |
| ಕಾಣಲಾಗದು | ತಪ್ಪಲೀಯದೆ | ಬಂದಲ್ಲದೆ | ತಕ್ಕನಿತು |
| ಪೊಳ್ದಿಡೆ | ಇರುಳಳಿದು | ತೆರೆದಿಕ್ಕುವ | ಮನದೊಳಗೆ |
| ಚರಿಸುತದ್ವರದ | ಲೇಖನವನೋದಿ | ನಿಂತಿರ್ದನು | ಕಾದಾಟದಾಟ |
| ಆದನೆಂಬ | ನೆತ್ತರೊಂದೆ | ತೆಗೆದುತ್ತರೀಯಮಂ | ಬೇಡಬೇಡರಸುಗಳ |

**'ಆಗಮ ಸಂಧಿ' (ಸ್ವರ ಸಂಧಿ)**

| | | | |
|---|---|---|---|
| ಕೈಯನ್ನು | ಮಳೆಯಿಂದ | ಶಾಲೆಯಲ್ಲಿ | ಮರವನ್ನು |
| ಮಗುವಿಗೆ | ಭೇದವಿಲ್ಲ | ವೃದ್ಧಿಯಾಗಿ | ಭೇದವಾಗಿ |
| ಮನೆಯೊಳಗೆ | ಶವವಾದವು | | |

**'ಆದೇಶ ಸಂಧಿ' (ವ್ಯಂಜನ ಸಂಧಿ)**

| | | | |
|---|---|---|---|
| ಮಳೆಗಾಲ | ಮೈದೋರು | ಬೆಂಬತ್ತು | ಕೈವಿಡಿದು |
| ಧೃತಿಗೆಟ್ಟು | ಪೋಗಲ್ವೇಳ್ಕುಂ | ಹೊಸಗಾಲ | |

### ಸಂಸ್ಕೃತ ಸಂಧಿಗಳು

**'ಸವರ್ಣ ದೀರ್ಘ ಸಂಧಿ' (ಸ್ವರ ಸಂಧಿ)**

| | | | |
|---|---|---|---|
| ಮಹಾತ್ಮ | ಗಿರೀಶ | ಸುರಾಸುರ | ವಧೂಪೇತ |
| ಸಕಳಾಚಾರ್ಯ | ಜಿನಾಲಯ | ಚಂದ್ರಾರ್ಕ | ನಿಜಾಶ್ರಮ |

**'ಗುಣ ಸಂಧಿ' (ಸ್ವರ ಸಂಧಿ)**

| | | | |
|---|---|---|---|
| ದೇವೇಂದ್ರ | ಜ್ಞಾನೇಶ್ವರ | ಸೂರ್ಯೋದಯ | ಮಹರ್ಷಿ |
| ಮಹೇಶ | ಮಂಡಳೇಶ್ವರ | ಕಲೋಪಾಸಕ | |

**'ವೃದ್ಧಿ ಸಂಧಿ' (ಸ್ವರ ಸಂಧಿ)**

| | | | |
|---|---|---|---|
| ಏಕೈಕ | ಜನೈಕ್ಯ | ವನೌಷಧಿ | ಅಷ್ಟೈಶ್ವರ್ಯ |

**'ಯಣ್ ಸಂಧಿ' (ಸ್ವರ ಸಂಧಿ)**

| | | | |
|---|---|---|---|
| ಅತ್ಯವಸರ | ಕೋಟ್ಯಧೀಶ್ವರ | ಕೋಟ್ಯನುಕೋಟಿ | ಜಾತ್ಯತೀತ |

**'ಜಶ್ತ್ವ ಸಂಧಿ' (ವ್ಯಂಜನ ಸಂಧಿ)**

| | | | | |
|---|---|---|---|---|
| ವಾಗ್ದೇವಿ | ಅಜಂತ | ಷಡಾನನ | ದಿಗಂತ | ಅಬ್ಧಿ |

**'ಶ್ಚುತ್ವ ಸಂಧಿ' (ವ್ಯಂಜನ ಸಂಧಿ)**

| | | | |
|---|---|---|---|
| ಪಯಶ್ಶಯನ | ಶರಚ್ಚಂದ್ರ | ಜಗಜ್ಜ್ಯೋತಿ | ಬೃಹಚ್ಛತ್ರ |

**'ಅನುನಾಸಿಕ ಸಂಧಿ' (ವ್ಯಂಜನ ಸಂಧಿ)**

| | | | |
|---|---|---|---|
| ಷಣ್ಮುಖ | ಸನ್ಮಾನ | ವಾಙ್ಮಯ | ಉನ್ಮಾದ |
| ತನ್ಮಯ | ಶ್ರೀಮನ್ಮಹಾ | | |

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಡನೆ ಬರೆಯಿರಿ.**

1. 'ಮಳೆಗಾಲ' ಪದವು ಈ ಸಂಧಿಗೆ ಉದಾಹರಣೆ :
   (ಎ) ಲೋಪ (ಬಿ) ಆಗಮ
   (ಸಿ) ಆದೇಶ (ಡಿ) ಗುಣಸಂಧಿ
2. 'ಮನದೊಳಗೆ' ಪದವನ್ನು ಬಿಡಿಸಿ ಬರೆದಾಗ ಆಗುವ ರೂಪ :
   (ಎ) ಮನದ + ಒಳಗೆ (ಬಿ) ಮನ + ದೊಳಗೆ
   (ಸಿ) ಮನದಲ್ಲಿ + ಒಳಗೆ (ಡಿ) ಮನದಿ + ಒಳಗೆ
3. ಈ ಕೆಳಗಿನ ಪದಗಳಲ್ಲಿ ಗುಣಸಂಧಿಯಾಗಿರುವ ಪದ :
   (ಎ) ಏಕೈಕ (ಬಿ) ಸೂರ್ಯೋದಯ
   (ಸಿ) ಅತ್ಯವಸರ (ಡಿ) ದಿಗಂತ

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದಗಳನ್ನು ಬರೆಯಿರಿ.**

1. ಮಹರ್ಷಿ : ಗುಣಸಂಧಿ :: ವನೌಷಧ : ______
2. ನೆತ್ತರೊಂದೆ : ಲೋಪಸಂಧಿ :: ಹೊಸಗಾಲ : ______
3. ಊರೂರು : ಸ್ವರಸಂಧಿ :: ಮೈದೋರು : ____________

## 10. ಸಮಾಸಗಳು

### ತತ್ಪುರುಷ ಸಮಾಸ

ಬೆಟ್ಟದಾವರೆ ತಲೆನೋವು ದೈವಭಕ್ತಿ ಸ್ವಾಮಿದ್ರೋಹ
ಪರಧನ ಪೂದೋಟ ಕಾಲುಬಳೆ ಧನದಹರಣ

### ಕರ್ಮಧಾರಯ ಸಮಾಸ

ಇಮ್ಮಾವು ಮೆಲ್ವಾತು ಹೊಸಗನ್ನಡ ಅತಿಕುಟಿಲ
ಕಟ್ಟೇಕಾಂತ ಪೆರ್ಮಗ ಪೆರ್ಮರ ನಲ್ಗುದುರೆ ಹೆದ್ದೊರೆ

### ದ್ವಿಗು ಸಮಾಸ

ಮೂಗಾವುದ ಮುಕ್ಕಣ್ಣು ಸಪ್ತಸ್ವರಗಳು

### ಬಹುವ್ರೀಹಿ ಸಮಾಸ

ಹಣೆಗಣ್ಣ ಮುಕ್ಕಣ್ಣ ಚಕ್ರಪಾಣಿ ಅಬ್ಜೋದರ
ಘಟಸಂಭೂತ ಗಾಂಡೀವಿ ಪವನನಂದನ ಮದಾಂಧ
ಇನತನೂಜ ದನುಜರಿಪು ಮುರಾರಿ ಮೇದಿನೀಪತಿ
ರಾಜೀವಸಖ

### ಅಂಶಿ ಸಮಾಸ

ಅಂಗೈ ಹಿಂದಲೆ ಕಡೆಗಣ್ಣು ಮುಂಗೈ
ನಡುರಾತ್ರಿ ನಟ್ಟಡವಿ

### ದ್ವಂದ್ವ ಸಮಾಸ

ಗಿರಿವನದುರ್ಗಗಳು ಕರಿತುರಗರಥಗಳು ಹನುಮಭೀಮರಾಮರು
ಸೂರ್ಯಚಂದ್ರರು ಮಾದ್ರಮಾಗಧಯಾದವರು ಕೆರೆಕಟ್ಟೆಬಾವಿಗಳು

### ಕ್ರಿಯಾ ಸಮಾಸ

ಮೈಮುಚ್ಚು ಕಣ್ದೆರೆ ಕಂಗೆಡು ಕೈಕೊಳ್ವುದು
ಸಾಕ್ಷಿಮಾಡಿ ಬಲವಂದು ಮೋಸಮಾಡು ಕೈಯಾನು
ಹೊಗೆದೋರು ಸೊಲ್ಗೇಳಿ ಬಿಲ್ಗೊಂಡು ಬಿಲ್ದಿರುವನೇರಿಸಿ

### ಗಮಕ ಸಮಾಸ

ಆ ಕಲ್ಲು ಈ ಬೆಕ್ಕು ನೆಯ್ದುವಸ್ತ್ರ

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಡನೆ ಬರೆಯಿರಿ.**

1. **'ಬೆಟ್ಟದಾವರೆ'** ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ :
   (ಎ) ಕರ್ಮಧಾರೆಯ (ಬಿ) ದ್ವಿಗು
   (ಸಿ) ತತ್ಪುರುಷ (ಡಿ) ಬಹುವ್ರೀಹಿ
2. **'ಪೆರ್ಮರ'** ಪದವನ್ನು ವಿಗ್ರಹ ವಾಕ್ಯ ಮಾಡಿದಾಗ :
   (ಎ) ಪಿರಿದು + ಮರ (ಬಿ) ಪಿರಿ + ಮರ
   (ಸಿ) ಪೆರೆ + ಮರ (ಡಿ) ಪೆರ್ + ಮರ

3. ಪೂರ್ವಪದ ಸಂಖ್ಯಾವಾಚಕವಾಗಿದ್ದು ಉತ್ತರಪದ ನಾಮಪದವಾಗಿರುವ ಸಮಾಸ :

(ಎ) ತತ್ಪುರುಷ (ಬಿ) ಅಂಶಿ
(ಸಿ) ಕ್ರಿಯಾ (ಡಿ) ದ್ವಿಗು

4. **'ಅಂಶಿ'** ಸಮಾಸಕ್ಕೆ ಉದಾಹರಣೆ :

(ಎ) ಕೈಯನ್ನು (ಬಿ) ಅಂಗೈ
(ಸಿ) ಅರಮನೆ (ಡಿ) ಕಾರ್ಮೋಡ

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಸಂಬಂಧಹೊಂದುವ ಪದಗಳನ್ನು ಬರೆಯಿರಿ.**

1. ಕಣ್ದೆರೆ : ಕ್ರಿಯಾಸಮಾಸ :: ಕರಿತುರಗರಥಗಳು : ______
2. ಆಕಲ್ಲು : ಗಮಕ :: ಮೆಲ್ವಾತು : __________
3. ಹಣೆಗಣ್ಣ : ಬಹುವ್ರೀಹಿ :: ನೆಯ್ದುವಸ್ತ್ರ : ____________

*****

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದಗಳನ್ನು ಬರೆಯಿರಿ**

1. ಕುರ್ಚಿ : ಹಿಂದೂಸ್ಥಾನಿ :: ಅಮಾನತ್ತು : ____________

## 11. ಕ್ರಿಯಾಪದ

ಕ್ರಿಯಾಪದದ ಮೂಲರೂಪ **ಧಾತು.**
**ಸಕರ್ಮಕ ಧಾತು :** ಕೊಡು, ಬಿಡು, ಉಣ್ಣು, ಉಜ್ಜು, ಇದ್ದು, ಮುಚ್ಚು ಇತ್ಯಾದಿ.
**ಅಕರ್ಮಕ ಧಾತು :** ಮಲಗು, ಓಡು, ಬದುಕು, ಹೋಗು, ನಾಚು ಇತ್ಯಾದಿ.
ಭೂತಕಾಲ ಸೂಚಕ ಪ್ರತ್ಯಯ **'ದ'.**
ವರ್ತಮಾನಕಾಲ ಸೂಚಕ ಪ್ರತ್ಯಯ **'ಉತ್ತ'.**
ಭವಿಷ್ಯತ್ಕಾಲ ಸೂಚಕ ಪ್ರತ್ಯಯ **'ಉವ/ವ'.**

### ಕಾಲರೂಪ ಕ್ರಿಯಾಪದಗಳು

| ಭೂತ ಕಾಲ | ವರ್ತಮಾನ ಕಾಲ | ಭವಿಷ್ಯತ್ ಕಾಲ |
|---|---|---|
| ತಿಂದೆನು<br>ತಿಂದೆವು | ತಿನ್ನುತ್ತೇನೆ<br>ತಿನ್ನುತ್ತೇವೆ | ತಿನ್ನುವೆನು<br>ತಿನ್ನುವೆವು |
| ತಿಂದೆ<br>ತಿಂದಿರಿ | ತಿನ್ನುತ್ತೀಯೆ<br>ತಿನ್ನುತ್ತೀರಿ | ತಿನ್ನುವೆ<br>ತಿನ್ನುವಿರಿ |
| ತಿಂದನು<br>ತಿಂದಳು<br>ತಿಂದಿತು | ತಿನ್ನುತ್ತಾನೆ<br>ತಿನ್ನುತ್ತಾಳೆ<br>ತಿನ್ನುತ್ತದೆ | ತಿನ್ನುವನು<br>ತಿನ್ನುವಳು<br>ತಿನ್ನುವುದು |
| ತಿಂದರು<br>ತಿಂದವು | ತಿನ್ನುತ್ತಾರೆ<br>ತಿನ್ನುತ್ತವೆ | ತಿಂದರು<br>ತಿನ್ನುವುವು |

### ಅರ್ಥರೂಪ ಕ್ರಿಯಾಪದಗಳು

| ವಿಧ್ಯರ್ಥಕ | ಸಂಭಾವನಾರ್ಥಕ | ನಿಷೇಧಾರ್ಥಕ |
|---|---|---|
| ತಿನ್ನುವೆ<br>ತಿನ್ನೋಣ | ತಿಂದೇನು<br>ತಿಂದೇವು | ತಿನ್ನೆನು<br>ತಿನ್ನೆವು |
| ತಿನ್ನು<br>ತಿನ್ನಿರಿ | ತಿಂದೀತು<br>ತಿಂದೀರಿ | ತಿನ್ನೆ<br>ತಿನ್ನರಿ |
| ತಿನ್ನಲಿ<br>ತಿನ್ನಲಿ<br>ತಿನ್ನಲಿ | ತಿಂದಾನು<br>ತಿಂದಾಳು<br>ತಿಂದೀತು | ತಿನ್ನನು<br>ತಿನ್ನಳು<br>ತಿನ್ನದು |
| ತಿನ್ನಲಿ<br>ತಿನ್ನಲಿ<br>ತಿನ್ನಲಿ | ತಿಂದಾರು<br>ತಿಂದಾರು<br>ತಿಂದಾವು | ತಿನ್ನರು<br>ತಿನ್ನರು<br>ತಿನ್ನವು |

**ವಿಧ್ಯರ್ಥಕ :** ಮಾಡಲಿ, ತಿನ್ನಲಿ, ಓದಲಿ.
**ನಿಷೇಧಾರ್ಥಕ :** ಮಾಡನು, ತಿನ್ನಳು, ಓದರು.
**ಸಂಭಾವನಾರ್ಥಕ :** ಮಾಡಿಯಾನು, ತಿಂದಾಳು, ಓದಿಯಾರು.

*****

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಡನೆ ಬರೆಯಿರಿ.**

1. ಕ್ರಿಯಾಪದದ ಮೂಲರೂಪವನ್ನು ಹೀಗೆಂದು ಕರೆಯುತ್ತಾರೆ :
   (ಎ) ಪ್ರತ್ಯಯ (ಬಿ) ಉಪಸರ್ಗ
   (ಸಿ) ಧಾತು (ಡಿ) ಪ್ರಾತಿಪದಿಕ
2. ಇದು ಅಕರ್ಮಕ ಧಾತುವಿಗೆ ಉದಾಹರಣೆ :
   (ಎ) ತಿನ್ನು (ಬಿ) ಮಲಗು
   (ಸಿ) ಉಜ್ಜು (ಡಿ) ಬಿಡು
3. ಇದು ಸಕರ್ಮಕ ಧಾತುವಿಗೆ ಉದಾಹರಣೆ :
   (ಎ) ಓದು (ಬಿ) ನಾಚು
   (ಸಿ) ಕೊಡು (ಡಿ) ಬದುಕು
4. ಧಾತು, ಕಾಲಸೂಚಕ ಪ್ರತ್ಯಯ ಮತ್ತು ಆಖ್ಯಾತ ಪ್ರತ್ಯಯ ಸೇರಿದಾಗ ಆಗುವ ರೂಪ :
   (ಎ) ನಾಮಪದ (ಬಿ) ಕ್ರಿಯಾಪದ
   (ಸಿ) ಅವ್ಯಯ (ಡಿ) ತದ್ಧಿತಾಂತ
5. 'ಶಿಕ್ಷಣವು ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮಸಿದ್ಧ ಹಕ್ಕಾಗಲಿ' ಈ ವಾಕ್ಯದಲ್ಲಿರುವ ವಿಧ್ಯರ್ಥಕ ಕ್ರಿಯಾಪದ :
   (ಎ) ಶಿಕ್ಷಣ (ಬಿ) ಹಕ್ಕಾಗಲಿ
   (ಸಿ) ಪ್ರಗತಿ (ಡಿ) ಎಲ್ಲರ
6. ಕಾರ್ಯವು ಮುಂದೆ ನಡೆಯಲಿದೆ ಎನ್ನುವುದನ್ನು ತಿಳಿಸುವ ಕಾಲ :
   (ಎ) ಭೂತಕಾಲ (ಬಿ) ವರ್ತಮಾನಕಾಲ
   (ಸಿ) ಭವಿಷ್ಯತ್ ಕಾಲ (ಡಿ) ಸಂದಿಗ್ಧಕಾಲ
7. 'ನೋಡುತ್ತಾನೆ' ಕ್ರಿಯಾಪದದ ಭೂತಕಾಲ ರೂಪ :
   (ಎ) ನೋಡಲಿ (ಬಿ) ನೋಡಿದನು
   (ಸಿ) ನೋಡುವವನು (ಡಿ) ನೋಡನು
8. 'ಭೀಮನಿಂದ ಅನ್ನವು ಉಣ್ಣಲ್ಪಟ್ಟಿತ್ತು' ಈ ವಾಕ್ಯವು ಕ್ರಿಯಾಪದದ ಈ ಪ್ರಯೋಗಕ್ಕೆ ಉದಾಹರಣೆ
   (ಎ) ಕರ್ಮಣಿ (ಬಿ) ಕರ್ತರಿ
   (ಸಿ) ಸಕರ್ಮ (ಡಿ) ಅಕರ್ಮ

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದಗಳನ್ನು ಬರೆಯಿರಿ**

1. ಉಜ್ಜು : ಸಕರ್ಮಕ :: ಬದುಕು : ____________
2. ಮಾಡುತ್ತಾನೆ : ಮಾಡು :: ಓದಿದನು : ____________
3. ಸೇರಿದನು : ಭೂತಕಾಲ :: ಸೇರುತ್ತಾನೆ : ____________

## 12. ವಾಕ್ಯ ಪ್ರಕಾರಗಳು

ವಾಕ್ಯದಲ್ಲಿ **ಮೂರು** ವಿಧಗಳಿವೆ.

1. ಸಾಮಾನ್ಯ ವಾಕ್ಯ 2. ಸಂಯೋಜಿತ ವಾಕ್ಯ (ಸಂಯುಕ್ತ ವಾಕ್ಯ) 3. ಮಿಶ್ರ ವಾಕ್ಯ.

**ಸಾಮಾನ್ಯ ವಾಕ್ಯ :–** ಒಂದು ಪೂರ್ಣ ಕ್ರಿಯಾಪದದೊಂದಿಗೆ ಸ್ವತಂತ್ರವಾಗಿರುವ ವಾಕ್ಯವನ್ನು **'ಸಾಮಾನ್ಯ ವಾಕ್ಯ'** ಎಂದು ಕರೆಯುತ್ತಾರೆ.

**ಉದಾ:–**

1. ಕಾರವಾರದಲ್ಲಿ ಮಲೇರಿಯಾ ವ್ಯಾಪಕವಾಗಿ ಹಬ್ಬಿತು.
2. ಕಾರವಾರದಲ್ಲಿ ಉದ್ಯೋಗಿಯಾಗಿದ್ದ ವೀರೇಶ್ವರ ಪಾಠಕ್ ಮಲೇರಿಯಾದಿಂದ ಬಳಲಿದರು.
3. ವೀರೇಶ್ವರ ಪಾಠಕ್‌ರನ್ನು ಬೆಂಗಳೂರಿಗೆ ವರ್ಗಾವಣೆ ಮಾಡಲಾಯಿತು.

**ಸಾಮಾನ್ಯ ವಾಕ್ಯದಲ್ಲಿ ಒಂದು ಕ್ರಿಯಾಪದ ಮಾತ್ರವಿದ್ದು, ಸಾಪೇಕ್ಷ ಕ್ರಿಯಾರೂಪಗಳು ಮಧ್ಯದಲ್ಲಿ ಬರಬಹುದು.**

**ಉದಾ :–** ಕಾರವಾರದಲ್ಲಿ ಮಲೇರಿಯಾ ಹಬ್ಬಿ, ವೀರೇಶ್ವರ ಪಾಠಕ್‌ರವರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಿ, ಅವರು ಅಲ್ಲಿಂದ ವರ್ಗಾವಣೆ ಹೊಂದುವಂತೆ ಆಯಿತು.

**ಸಂಯೋಜಿತ ವಾಕ್ಯ** :– ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ ಅದು **'ಸಂಯೋಜಿತ ವಾಕ್ಯ'** ಎನಿಸುವುದು.

**ಉದಾ:**– ಕಾರವಾರದಲ್ಲಿ ಮಲೇರಿಯಾ ಹಬ್ಬಿತ್ತು ಆದ್ದರಿಂದ ವೀರೇಶ್ವರ ಪಾಠಕ್‌ರವರು ಮಲೇರಿಯಾದಿಂದ ಬಳಲಬೇಕಾಯಿತು ಈ ಕಾರಣದಿಂದ ಅವರನ್ನು ಅಲ್ಲಿಂದ ವರ್ಗಾಯಿಸಲಾಯಿತು.

**ಮಿಶ್ರವಾಕ್ಯ** :– ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನಗಳಾಗಿದ್ದರೆ ಅಂಥ ವಾಕ್ಯವನ್ನು **'ಮಿಶ್ರವಾಕ್ಯ'** ಎನ್ನುತ್ತೇವೆ.

**ಉದಾ:**– ಏನಾದರೂ ಮಾಡಿ ಭಾರತದಲ್ಲಿ ಮೋಟಾರು ಕಾರ್ಖಾನೆಯನ್ನು ಸ್ಥಾಪಿಸಲು ವಿಶ್ವೇಶ್ವರಯ್ಯನವರು ನಿರ್ಧರಿಸಿದರಾದರೂ ಅವರ ನಿರ್ಧಾರಕ್ಕೆ ಬ್ರಿಟಿಷ್ ಸರ್ಕಾರದ ಅಪ್ಪಣೆ ದೊರೆಯಲಿಲ್ಲವೆಂಬ ವಿಷಯ ತಿಳಿದಾಗ ಅವರು ಬಹುವಾಗಿ ಮರುಗಿದರು.

4. *****

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಡನೆ ಬರೆಯಿರಿ.**

1. ಎರಡು ಅಥವಾ ಅನೇಕ ಸ್ವತಂತ್ರ ವಾಕ್ಯಗಳು ಒಟ್ಟಾಗಿ ಸೇರಿ ಪೂರ್ಣಾರ್ಥವನ್ನು ಕೊಡುವ ವಾಕ್ಯವು :

(ಎ) ಸಾಮಾನ್ಯವಾಕ್ಯ (ಬಿ) ಸಂಯೋಜಿತವಾಕ್ಯ

(ಸಿ) ಮಿಶ್ರವಾಕ್ಯ (ಡಿ) ವಿಶೇಷವಾಕ್ಯ

2. 'ಪ್ರವಾಸವು ಅನುಭವವನ್ನು ಹೆಚ್ಚಿಸುತ್ತದೆ' ಈ ವಾಕ್ಯವು :

(ಎ) ಸಾಮಾನ್ಯವಾಕ್ಯ (ಬಿ) ಮಿಶ್ರವಾಕ್ಯ

(ಸಿ) ಸಂಯೋಜಿತವಾಕ್ಯ (ಡಿ) ವಿಶೇಷವಾಕ್ಯ

## 13. ಅವ್ಯಯಗಳು

**ಅವ್ಯಯಗಳು**

ನಾಮಪದ, ಕ್ರಿಯಾಪದಗಳಂತೆ ಲಿಂಗ, ವಚನ, ವಿಭಕ್ತಿಗಳಿಂದ ರೂಪಭೇದವನ್ನು ಹೊಂದದೆ ಏಕರೂಪವಾಗಿರುವ ಪದಗಳನ್ನು **'ಅವ್ಯಯಗಳು'** ಎನ್ನುವರು.

**ಸಾಮಾನ್ಯಾವ್ಯಯಗಳು**

ಯಾವುದಾರೊಂದು ಕ್ರಿಯೆ ನಡೆದ ರೀತಿಯನ್ನು ಹೇಳುವಂಥ ಅವ್ಯಯಗಳೇ **'ಸಾಮಾನ್ಯಾವ್ಯಯಗಳು'** ಎನ್ನುವರು. ಇವು ಹೆಚ್ಚಾಗಿ ವಿಶೇಷಣಗಳಾಗಿರುತ್ತವೆ.

ಉದಾ:– ಬೇಗನೆ, ಮೆಲ್ಲಗೆ, ಸೊಗಸಾಗಿ, ಸುಮ್ಮನೆ
ತಟ್ಟನೆ, ತರುವಾಯ, ಹಾಗೆ, ಅಂತು
ಬೇರೆ, ಬಳಿಕ, ಕೂಡಲೆ, ಚೆನ್ನಾಗಿ

**ಅನುಕರಣಾವ್ಯಯಗಳು**

ನಿರ್ದಿಷ್ಟ ಅರ್ಥವಿಲ್ಲದ ಧ್ವನಿ ವಿಶೇಷಗಳನ್ನು ತಾನು ಕಿವಿಯಿಂದ ಕೇಳಿದಂತೆ ಅನುಕರಣೆ ಮಾಡಿ ಹೇಳುವ ಪದಗಳನ್ನು **'ಅನುಕರಣಾವ್ಯಯಗಳು'** ಎಂದು ಕರೆಯುತ್ತಾರೆ.

ಉದಾ:– ಚಟಚಟ, ಕರಕರ, ಚುರುಚುರು, ಧಗಧಗ
ರೊಯ್ಯನೆ ಸುಯ್ಯನೆ ಘುಳುಘುಳು ದಡದಡ

**ಭಾವಸೂಚಕಾವ್ಯಯಗಳು**

ಮನಸ್ಸಿನಲ್ಲಿ ಉಂಟಾಗುವ ಕೋಪ, ಹರ್ಷ, ದುಃಖ, ಮೆಚ್ಚುಗೆ, ಆಕ್ಷೇಪ, ತಿರಸ್ಕಾರ – ಇತ್ಯಾದಿ ಭಾವಗಳನ್ನು ವ್ಯಕ್ತಪಡಿಸುವಾಗ ಅರ್ಥವಿಲ್ಲದ ಕೆಲವು ಪದಗಳನ್ನು ಬಳಸುತ್ತೇವೆ. ಅಂತಹ ಪದಗಳನ್ನು **'ಭಾವಸೂಚಕಾವ್ಯಯಗಳು'** ಎಂದು ಕರೆಯುತ್ತಾರೆ.

ಉದಾ:– ಅಹಾ! ಭಳಿರೆ! ಓಹೋ! ಹೋ!
ಅಃ! ಆಃ! ಓ!

**ಕ್ರಿಯಾರ್ಥಕಾವ್ಯಯಗಳು**

ಕ್ರಿಯಾಪದದ ಸ್ಥಾನದಲ್ಲಿದ್ದು ವಾಕ್ಯದ ಅರ್ಥವನ್ನು ಪೂರ್ಣಗೊಳಿಸುವ ಅವ್ಯಯಗಳನ್ನು **'ಕ್ರಿಯಾರ್ಥಕ ಅವ್ಯಯಗಳು'** ಎಂದು ಕರೆಯಲಾಗಿದೆ.

ಉದಾ :– ಅಹುದು, ಸಾಕು, ಅಲ್ಲ, ಹೌದು, ಬೇಡ, ಉಂಟು ಇತ್ಯಾದಿ.

**ಸಂಬಂಧಾರ್ಥಕಾವ್ಯಯಗಳು**

ಎರಡು ಪದಗಳನ್ನಾಗಲೀ, ಹಲವು ಪದ ಸಮುಚ್ಚಯಗಳನ್ನಾಗಲೀ, ವಾಕ್ಯಗಳನ್ನಾಗಲೀ ಜೋಡಿಸುವಂತಹ ಅಥವಾ ಸಂಬಂಧಗೊಳಿಸುವಂತಹ ಪದಗಳೇ **'ಸಂಬಂಧಾರ್ಥಕಾವ್ಯಯಗಳು'**

**ಉದಾ:– ಊ, ಉಂ, ಮತ್ತು, ಅಥವಾ, ಆದ್ದರಿಂದ, ಅಲ್ಲದೆ, ಇತ್ಯಾದಿ.**

**ಪದಗಳ ಜೋಡಣೆ :–**
ರಾಮ**ನೂ** ಲಕ್ಷ್ಮಣ**ನೂ** ಸೀತೆ**ಯೂ** ಕಾಡಿಗೆ ಹೊರಟರು.
**ಪದ ಸಮುಚ್ಚಯ ಜೋಡಣೆ :–**
ಅವನು ಬರುವು**ದೂ** ಬೇಡ; ಆ ಕೆಲಸ ಆಗುವು**ದೂ** ಬೇಡ.
**ವಾಕ್ಯಗಳ ಜೋಡಣೆ :–**
ಅವನು ಬರಲಿಲ್ಲ **ಆದ್ದರಿಂದ** ನಾನೂ ಬರಲಿಲ್ಲ.
**ಅವಧಾರಣಾರ್ಥಕಾವ್ಯಯಗಳು**
ಒಂದು ನಿಶ್ಚಯಾರ್ಥದಲ್ಲಿರುವ ಅವ್ಯಯವನ್ನು **'ಅವಧಾರಾಣಾರ್ಥಕಾವ್ಯಯ'** ಎಂದು ಕರೆಯುತ್ತಾರೆ. ಹಲವು ವಸ್ತುಗಳಲ್ಲಿ ಒಂದನ್ನು ನಿಶ್ಚಯವಾಗಿ ಹೇಳುವ ಸಂದರ್ಭದಲ್ಲಿ ಈ ಅವ್ಯಯವನ್ನು ಬಳಸಲಾಗುತ್ತದೆ.
**ಉದಾ:–** ಅವನೇ, ಅದುವೇ, ಅವಳೇ, ನೀನೇ ಅವರೇ

**ಪದಗಳ ಕೊನೆಯಲ್ಲಿರುವ 'ಏ' ಎಂಬ ಅಕ್ಷರವೇ ಅವಧಾರಾಣಾರ್ಥಕಾವ್ಯಯ.**

*****

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಡನೆ ಬರೆಯಿರಿ.**

1. ನಾಮಪದ, ಕ್ರಿಯಾಪದಗಳಂತೆ ಲಿಂಗ, ವಚನ, ವಿಭಕ್ತಿಗಳಿಂದ ರೂಪ ಭೇದವನ್ನು ಹೊಂದದೆ ಏಕರೂಪವಾಗಿರುವ ಪದಗಳನ್ನು ಹೀಗೆನ್ನುತ್ತಾರೆ :
   (ಎ) ಸಮಾಸಗಳು (ಬಿ) ಕೃದಂತಗಳು
   (ಸಿ) ಅವ್ಯಯಗಳು (ಡಿ) ತದ್ಧಿತಾಂತಗಳು
2. ಆ ಗೊಂದಲ ಕ್ಷಣಕಾಲಕ್ಕಿಂತಲು ಹೆಚ್ಚಾಗಿ ನಿಲ್ಲಲಿಲ್ಲ. ಈ ವಾಕ್ಯದಲ್ಲಿರುವ ಅವ್ಯಯ :
   (ಎ) ಗೊಂದಲ (ಬಿ) ಹೆಚ್ಚಾಗಿ
   (ಸಿ) ಕ್ಷಣಕಾಲ (ಡಿ) ನಿಲ್ಲಲಿಲ್ಲ
3. ಉಂಟು – ಇದು ಈ ಅವ್ಯಯ ಪ್ರಕಾರಕ್ಕೆ ಸೇರಿದೆ :
   (ಎ) ಸಾಮಾನ್ಯ (ಬಿ) ಅನುಕರಣ
   (ಸಿ) ಭಾವಸೂಚಕ (ಡಿ) ಕ್ರಿಯಾರ್ಥಕ

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದಗಳನ್ನು ಬರೆಯಿರಿ.**

1. ಧಗಧಗ : ಅನುಕರಣಾವ್ಯಯ : : ಆದ್ದರಿಂದ : ____________
2. ತಟ್ಟನೆ : ಸಾಮಾನ್ಯಾವ್ಯಯ : : ಓಹೋ : ____________
3. ಅವನೇ : ಅವಧಾರಣಾರ್ಥಕಾವ್ಯಯ : : ಸಾಕು : ____________

**ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ. 01 * 03 = 03**

| | | |
|---|---|---|
| **ಅಂಕ ವಿತರಣೆ :–** | **ಗಾದೆಯ ಮಹತ್ವ** | **1 ಅಂಕ** |
| | **ಗಾದೆಯ ಅರ್ಥ ವಿವರಣೆ** | **1 ಅಂಕ** |
| | **ಭಾಷಾ ಶೈಲಿ** | **1 ಅಂಕ** |
| | **ಒಟ್ಟು** | **3 ಅಂಕಗಳು** |

## ಗಾದೆಯ ಮಹತ್ತ್ವ :–

ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಾಗಿವೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತು ಗಾದೆಯ ಮಹತ್ವವನ್ನು ಬಹು ಸುಂದರವಾಗಿ ಅರ್ಥೈಸುತ್ತದೆ.

*******

**ಮಾದರಿ :–**

**ತಾಳಿದವನು ಬಾಳಿಯಾನು :–** ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಾಗಿವೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತು ಗಾದೆಯ ಮಹತ್ವವನ್ನು ಬಹು ಸುಂದರವಾಗಿ ಅರ್ಥೈಸುತ್ತದೆ.

"ತಾಳುವಿಕೆಗಿಂತ ತಪವು ಇಲ್ಲ" ಎಂದಿದ್ದಾರೆ ಕನಕದಾಸರು. ಗಿಡ ನೆಟ್ಟ ಕೂಡಲೇ ಫಲ ಬಿಡಬೇಕು ಎಂದರೆ ಸಾಧ್ಯವಿಲ್ಲ. ಸಂಗೀತಾಭ್ಯಾಸ ಮಾಡಿದರೆ ಒಂದೇ ತಿಂಗಳಿನಲ್ಲಿ ಕಛೇರಿ ನೀಡುವಂತಾಗಬೇಕು ಎನ್ನುವುದು ಸಾಧ್ಯವಿಲ್ಲ. ಪ್ರತಿಯೊಂದು ಸಾಧನೆಯಲ್ಲೂ ತಾಳ್ಮೆ ಬೇಕು. ತಾಳ್ಮೆ ಎಂದರೆ ಆಮೆಗತಿಯಲ್ಲಿ ಸಾಗುವುದು ಎಂದರ್ಥವಲ್ಲ ಯಾವ ಸಾಧನೆಗೆ ಎಷ್ಟು ಸಮಯ ಮತ್ತು ಪ್ರಯತ್ನಗಳು ಬೇಕೋ ಅವನ್ನು ಪೂರ್ಣತೆಯಿಂದ ಮಾಡಲು ಬೇಕಾಗುವ ಶಕ್ತಿಯೇ ತಾಳ್ಮೆ; ತಾಳ್ಮೆಯಿಂದ ಕಟ್ಟಿದ್ದು ಮತ್ತು ಪಡೆದಿದ್ದು ದೀರ್ಘಕಾಲ ಬಾಳುತ್ತದೆ.

**ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ.**

| **ಅಂಕ ವಿತರಣೆ :-** | **ಪ್ರಸ್ತಾರ** | **1 ಅಂಕ** |
|---|---|---|
| | **ಗಣ ವಿಭಾಗ** | **1 ಅಂಕ** |
| | **ಛಂದಸ್ಸಿನ ಹೆಸರು** | **1 ಅಂಕ** |
| | **ಒಟ್ಟು** | **3 ಅಂಕಗಳು** |

**1. ಎನಗಂ ಪಾಂಡುಗಮಿಲ್ಲ ಭೇದಮಿಳೆಯಂ ಪಚ್ಚಾಳ್ವಮಾ ಪಾಂಡುನಂ**

| | | | | | | |
|---|---|---|---|---|---|---|
| ಸ | ಭ | ರ | ನ | ಮ | ಯ | ಲ ಗು |
| ∪ ∪ — | — ∪ ∪ | — ∪— | ∪ ∪ ∪ | — — — | ∪ — — | ∪ — |
| ಎನಗಂ | ಪಾಂಡುಗ | ಮಿಲ್ಲಭೇ | ದಮಿಳೆ | ಯುಂಪಚ್ಚಾ | ಳ್ವಮಾಪಾಂ | ಡುನಂ |

ಈ ಮೇಲಿನ ಪದ್ಯವು ಅಕ್ಷರ ಗಣದ **'ಮತ್ತೇಭವಿಕ್ರೀಡಿತ ವೃತ್ತ'**ದಲ್ಲಿ ರಚಿತವಾಗಿದೆ.

*****

**2. ಕುರುಕುಳನಂದನಂ ಪವನನಂದನನೆಂಬ ಮದಾಂಧಗಂಧಸಿಂ**

| | | | | | | |
|---|---|---|---|---|---|---|
| ನ | ಜ | ಭ | ಜ | ಜ | ಜ | ರ |
| ∪ ∪ ∪ | ∪ — ∪ | — ∪ ∪ | ∪ — ∪ | ∪ — ∪ | ∪ — ∪ | — ∪ — |
| ಕುರುಕು | ಳನಂದ | ನಂಪವ | ನನಂದ | ನನೆಂಬ | ಮದಾಂಧ | ಗಂಧಸಿಂ |

ಈ ಮೇಲಿನ ಪದ್ಯವು ಅಕ್ಷರ ಗಣದ **'ಚಂಪಕಮಾಲಾ ವೃತ್ತ'**ದಲ್ಲಿ ರಚಿತವಾಗಿದೆ.

******

**3. ಮೇದಿನಿಯಂ ಕ್ರಮಕ್ರಮದೆ ಪರ್ವಿದುದಾತ್ತನಭೋವಿಭಾಗಮಾ**

| | | | | | | |
|---|---|---|---|---|---|---|
| ಭ | ರ | ನ | ಭ | ಭ | ರ | ಲ ಗು |
| — ∪∪ | — ∪— | ∪ ∪ ∪ | — ∪ ∪ | — ∪∪ | — ∪ — | ∪ — |
| ಮೇದಿನಿ | ಯಂಕ್ರಮ | ಕ್ರಮದೆ | ಪರ್ವಿದು | ದಾತ್ತನ | ಭೋವಿಭಾ | ಗಮಾ |

**ಈ ಮೇಲಿನ ಪದ್ಯವು ಅಕ್ಷರ ಗಣದ 'ಉತ್ಪಲಮಾಲಾ ವೃತ್ತ'ದಲ್ಲಿ ರಚಿತವಾಗಿದೆ.**

*****

**4. ನೀನುಳ್ಕೊಡೆಲ್ಲರೊಳರೆಮ**
**ಗೇನುಮಳಲ್ ಮನದೊಳಿಲ್ಲದೆಂತೆನೆ ಮಗನೇ ।**

| | | |
|---|---|---|
| 4 | 4 | 4 |
| — — | ∪ —∪ | ∪ ∪ ∪ ∪ |
| ನೀನು | ಳ್ಕೊಡೆಲ್ಲ | ರೊಳರೆಮ |

| | | | | |
|---|---|---|---|---|
| 4 | 4 | 4 | 4 | 4 |
| — ∪ ∪ | —∪ ∪ | ∪ — ∪ | — ∪ ∪ | ∪ ∪ — |
| ಗೇನುಮ | ಳಲ್‌ಮನ | ದೊಳಿಲ್ಲ | ದೆಂತೆನೆ | ಮಗನೇ |

ಈ ಮೇಲಿನ ಪದ್ಯವು ಮಾತ್ರಾಗಣದ **'ಕಂದ ಪದ್ಯ'**ದಲ್ಲಿ ರಚಿತವಾಗಿದೆ.

**5. ಅತಿಕುಟಿಲಮನಂ ಧನಲು**
**ಬ್ಧತೆಯಿಂದಂ ದುಷ್ಟಬುದ್ಧಿ ನುಡಿದಂ ಪುಸಿಯಂ**

| | | |
|---|---|---|
| 4 | 4 | 4 |
| ∪∪ ∪∪ | ∪ ∪ — | ∪ ∪ — |
| ಅತಿಕುಟಿ | ಲಮನಂ | ಧನಲು |

| | | | | |
|---|---|---|---|---|
| 4 | 4 | 4 | 4 | 4 |
| ∪ ∪ — | — — | ∪ — ∪ | ∪ ∪ — | ∪ ∪ — |
| ಬ್ಧತೆಯಿಂ | ದಂ ದು | ಷ್ಟಬುದ್ಧಿ | ನುಡಿದಂ | ಪುಸಿಯಂ |

**ಈ ಮೇಲಿನ ಪದ್ಯವು ಮಾತ್ರಾಗಣದ ಕಂದಪದ್ಯದಲ್ಲಿ ರಚಿತವಾಗಿದೆ.**

**6.** **ಏನು ಹೇಳ್ವೈ ಕರ್ಣ ಚಿತ್ತ**
**ಗ್ಲಾನಿ ಯಾವುದು ಮನಕೆ ಕುಂತೀ**
**ಸೂನುಗಳ ಬೆಸಕೈಸಿಕೊಂಬುದು ಸೇರದೇ ನಿನಗೆ ॥**

| | | | |
|---|---|---|---|
| 3 | 4 | 3 | 4 |
| — ∪ | — — | — ∪ | — — |
| ಏನು | ಹೇಳ್ವೈ | ಕರ್ಣ | ಚಿತ್ತ |

| | | | |
|---|---|---|---|
| 3 | 4 | 3 | 4 |
| — ∪ | — ∪ ∪ | ∪ ∪ ∪ | — — |
| ಗ್ಲಾನಿ | ಯಾವುದು | ಮನಕೆ | ಕುಂತೀ |

| | | | | | | |
|---|---|---|---|---|---|---|
| 3 | 4 | 3 | 4 | 3 | 4 | ಗುರು |
| — ∪ | ∪ ∪ ∪ ∪ | — ∪ | — ∪ ∪ | — ∪ | — ∪ ∪ | — |
| ಸೂನು | ಗಳಬೆಸೆ | ಕೈಸಿ | ಕೊಂಬುದು | ಸೇರ | ದೇನಿನ | ಗೆ |

ಈ ಮೇಲಿನ ಪದ್ಯವು ಮಾತ್ರಾ ಗಣದ **'ಭಾಮಿನಿ ಷಟ್ಪದಿ'**ಯಲ್ಲಿ ರಚಿತವಾಗಿದೆ.

**7.** **ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ**
**ನೊರ್ವನೇ ವೀರನಾತನ ಯಜ್ಞತುರಗಮಿದು**
**ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ ॥**

| | | | |
|---|---|---|---|
| 5 | 5 | 5 | 5 |
| — ∪ — | — — ∪ | ∪∪∪∪∪ | — ∪ — |
| ಉರ್ವಿಯೊಳ್ | ಕೌಸಲ್ಯೆ | ಪಡೆದಕುವ | ರಂ ರಾಮ |

| | | | |
|---|---|---|---|
| 5 | 5 | 5 | 5 |
| — ∪ — | — ∪ — | ∪ ∪ — ∪ | ∪ ∪ ∪ ∪ ∪ |
| ನೊರ್ವನೇ | ವೀರನಾ | ತನಯಜ್ಞ | ತುರಗಮಿದು |

| | | | | | | |
|---|---|---|---|---|---|---|
| 5 | 5 | 5 | 5 | 5 | 5 | ಗು |
| — ∪∪∪ | — ∪ — | — ∪ — | ∪∪ ∪ — | — ∪ — | ∪∪∪ — | — |
| ನಿರ್ವಹಿಸ | ಲಾರ್ಪರಾ | ರಾದೊಡಂ | ತಡೆಯಲೆಂ | ದಿರ್ದಲೇ | ಖನವನೋ | ದಿ |

ಈ ಮೇಲಿನ ಪದ್ಯವು ಮಾತ್ರಾ ಗಣದ **'ವಾರ್ಧಕ ಷಟ್ಪದಿ'**ಯಲ್ಲಿ ರಚಿತವಾಗಿದೆ.

**ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಿಸಿ. 01 * 03 =03**

| | | |
|---|---|---|
| **ಅಂಕ ವಿತರಣೆ :–** | **ಅಲಂಕಾರದ ಹೆಸರು** | **1 ಅಂಕ** |
| | **ಸಮನ್ವಯ** | **1 ಅಂಕ** |
| | **ಲಕ್ಷಣ** | **1 ಅಂಕ** |
| | **ಒಟ್ಟು** | **3 ಅಂಕಗಳು** |

**ಮಾದರಿ :–**

**1. ಸತಿಪತಿಗಳೊಂದಾಗದವನ ಭಕ್ತಿ ಅಮೃತದೊಳು ವಿಷಬೆರೆದಂತೆ**

**ಅಲಂಕಾರ** :– ಉಪಮಾಲಂಕಾರ.

**ಲಕ್ಷಣ** : – **ಎರಡು ವಸ್ತುಗಳಿಗಿರುವ (ಉಪಮಾನ ಉಪಮೇಯಗಳಿಗಿರುವ) ಸಾದೃಶ್ಯ ಸಂಪತ್ತನ್ನು ಪರಸ್ಪರ ಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ' ಎನಿಸುತ್ತದೆ.**

**ಉಪಮೇಯ** :– ಸತಿಪತಿಗಳೊಂದಾಗದವನ ಭಕ್ತಿ

**ಉಪಮಾನ** :– ಅಮೃತದೊಳು ಬೆರೆದ ವಿಷ

**ಉಪಮಾ ವಾಚಕ** :– ಅಂತೆ

**ಸಮಾನ ಧರ್ಮ** :– ಸ್ಪಷ್ಟವಾಗಿಲ್ಲ (ನಿಷ್ಪ್ರಯೋಜಕವಾದುದು)

**ಸಮನ್ವಯ** :– ಇಲ್ಲಿ ಉಪಮೇಯವಾದ ಸತಿಪತಿಗಳೊಂದಾಗದ ಭಕ್ತಿಯನ್ನು ಉಪಮಾನವಾದ ಅಮೃತದೊಳು ಬೆರೆತ ವಿಷಕ್ಕೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ. ಆದುದರಿಂದ ಈ ವಾಕ್ಯವು ಉಪಮಾಲಂಕಾರಕ್ಕೆ ಉದಾಹರಣೆಯಾಗಿದೆ.

**2. "ಮಾರಿಗೌತಣವಾಯ್ತು ನಾಳಿನ ಭಾರತವು"**

**ಅಲಂಕಾರ** :– **ರೂಪಕಾಲಂಕಾರ**

**ಲಕ್ಷಣ** :– ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡುಬರದೆ ಅವೆರಡೂ ಒಂದೇ ಎಂದು ವರ್ಣಿಸಿದರೆ ಅದೇ **'ರೂಪಕಾಲಂಕಾರ'**.

**ಉಪಮೇಯ** :– ನಾಳಿನ ಭಾರತ ಯುದ್ಧ

**ಉಪಮಾನ** :– ಮಾರಿಗೆ ಔತಣ

**ಸಮನ್ವಯ** :– ಇಲ್ಲಿ ಉಪಮೇಯವಾದ ನಾಳಿನ ಭಾರತ ಯುದ್ಧವನ್ನು ಉಪಮಾನವಾದ ಮಾರಿಯ ಔತಣಕ್ಕೆ ಅಭೇದವಾಗಿ ವರ್ಣಿಸಲಾಗಿದೆ. ಆದುದರಿಂದ ಈ ವಾಕ್ಯವು ರೂಪಕಾಲಂಕಾರಕ್ಕೆ ಉದಾಹರಣೆ ಆಗಿದೆ.

**ಉಪಮಾಲಂಕಾರಗಳು :–**

**1.. ಒಳಗಿನ ಮಂದಿ ಗುಂಡು ಹೊಡಿಸಿದರೊ ಮುಂಗಾರಿ ಸಿಡಿಲ ಸಿಡಿದ್ಹಾಂಗ**

**2. ಸಿಡಿಲು ಸಿಡಿದ್ಹಾಂಗ ಗುಂಡು ಸುರಿದಾವ**

3. ನೀಚರಿಗೆ ಮಾಡಿದ ಉಪಕಾರವು ಹಾವಿಗೆ **ಹಾಲೆರೆದಂತೆ.**

4. ಭೀಮ ದುರ್ಯೋಧನರು **ಮದಗಜಗಳಂತೆ** ಹೋರಾಡಿದರು.

**ರೂಪಕಾಲಂಕಾರ :–**

1. ಅಳ್ಳಿರಿಯುತಿಪ್ಪ ಎಮ್ಮ ಒಡಲಬೇಗೆಯ ಬೆಂಕಿಯುರಿ ನಿನ್ನನಿರಿಯದೆ.
2. ಮಾರಿಗೌತಣವಾಯ್ತು ನಾಳಿನ ಭಾರತವು.

**ಅರ್ಥಾಂತರನ್ಯಾಸ ಅಲಂಕಾರ :–**

1. ಆತನು ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದು ಉತ್ತೀರ್ಣನಾದನು; ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?

**ದೃಷ್ಟಾಂತಾಲಂಕಾರ :–**

1. ಮಾತು ಬಲ್ಲವನಿಗೆ ಜಗಳವಿಲ್ಲ; ಊಟ ಬಲ್ಲವನಿಗೆ ರೋಗವಿಲ್ಲ.

**ಉತ್ಪ್ರೇಕ್ಷಾಲಂಕಾರ : –**

1. ಅಚ್ಛೋದ ಸರೋವರವು ತ್ರೈಲೋಕ್ಯಲಕ್ಷ್ಮಿಯು ತನ್ನ ಸೌಂದರ್ಯವನ್ನು ನೋಡಲು ಮಾಡಿಟ್ಟ ರನ್ನಗನ್ನಡಿಯೋ **ಎಂಬಂತೆ** ಶೋಭಿಸಿತು.

*****

# ಪತ್ರ ಲೇಖನ

**ಮಾದರಿ ವ್ಯಾವಹಾರಿಕ ಪತ್ರ**

ಇಂದ,

________________
________________
________________
________________

ಇವರಿಗೆ,

________________
________________
________________
________________

ಮಾನ್ಯರೇ,

ವಿಷಯ : ________________________________________
________________________________________

________________________________________________________
____________________________________________________________
____________________________________________________________
____________________________________________________________
____________________________________________________________
________________

ವಂದನೆಗಳೊಡನೆ

ಸ್ಥಳ : ತಮ್ಮ ನಂಬುಗೆಯ

ದಿನಾಂಕ :

ಹೊರ ವಿಳಾಸ

| ಇಂದ, | ಇವರಿಗೆ, |
|---|---|
| __________<br>__________<br>__________<br>__________ | __________<br>__________<br>__________<br>__________ |

**ಅಂಕ ವಿತರಣೆ :–**

| | |
|---|---|
| **ಪತ್ರದ ಪ್ರಾರಂಭದ ಒಕ್ಕಣಿಕೆ** | **1 ಅಂಕ** |
| **ಪತ್ರದ ಒಡಲು** | **2 ಅಂಕಗಳು** |
| **ಪತ್ರದ ಮುಕ್ತಾಯದ ಒಕ್ಕಣಿಕೆ** | **1 ಅಂಕ** |
| **ಭಾಷಾಶೈಲಿ** | **1 ಅಂಕ** |
| **ಒಟ್ಟು** | **5 ಅಂಕಗಳು** |

# ಪತ್ರಲೇಖನ

**1. ನಿಮ್ಮನ್ನು ಮೈಸೂರಿನ ಮಹಾರಾಜ ಪ್ರೌಢಶಾಲೆಯ 10 ನೆಯ ತರಗತಿ ವಿದ್ಯಾರ್ಥಿ ಅಭಿಲಾಷ ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ನಡೆದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದ ವರದಿಯನ್ನು ಪ್ರಕಟಿಸುವಂತೆ ಬೆಂಗಳೂರಿನ ವಿಜಯವಾಣಿ ದಿನಪತ್ರಿಕೆಯ ಸಂಪಾದಕರಿಗೆ ಮನವಿ ಪತ್ರವನ್ನು ಬರೆಯಿರಿ.**

ಇಂದ,

ಅಭಿಲಾಷ,
10 ನೆಯ ತರಗತಿ,
ಮಹಾರಾಜ ಪ್ರೌಢಶಾಲೆ,
ಮೈಸೂರು.

ಇವರಿಗೆ,

ಮಾನ್ಯ ಸಂಪಾದಕರು,
'ವಿಜಯವಾಣಿ' ದಿನಪತ್ರಿಕೆ,
ಬೆಂಗಳೂರು.

ಮಾನ್ಯರೇ,

ವಿಷಯ : **ನಮ್ಮ ಶಾಲೆಯ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದ ವರದಿಯನ್ನು ಪ್ರಕಟಿಸುವಂತೆ ಮನವಿ.**

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಶಾಲೆಯಲ್ಲಿ ದಿನಾಂಕ : 01-11-2015 ರಂದು 'ಕನ್ನಡ ರಾಜ್ಯೋತ್ಸವ' ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ನಮ್ಮ ಕ್ಷೇತ್ರದ ಮಾನ್ಯ ಶಾಸಕರು ಅಧ್ಯಕ್ಷತೆಯನ್ನು ವಹಿಸಿದ್ದರು. ಅವರು ತಮ್ಮ ಭಾಷಣದಲ್ಲಿ ಕನ್ನಡತನವನ್ನು ಮೈಗೂಡಿಸಿಕೊಳ್ಳುವಂತೆ ಕರೆ ನೀಡಿದರು, ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆಯಿಸಿಕೊಟ್ಟರು. ಪೋಷಕರು ಕಾರ್ಯಕ್ರಮದ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಮುಖ್ಯಶಿಕ್ಷಕರು ಹಾಗೂ ಶಿಕ್ಷಕ ವರ್ಗದವರು ಕಾರ್ಯಕ್ರಮದಲ್ಲಿ ಹಾಜರಿದ್ದರು. ಈ ಕಾರ್ಯಕ್ರಮದ ಸವಿವರದ ವರದಿಯನ್ನು ಈ ಪತ್ರದೊಂದಿಗೆ ಲಗತ್ತಿಸಿದ್ದು, ದಯಮಾಡಿ ಕಾರ್ಯಕ್ರಮದ ವರದಿಯನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಈ ನನ್ನ ಕೋರಿಕೆಯು ಈಡೇರುವುದೆಂದು ನಂಬಿರುತ್ತೇನೆ.

ವಂದನೆಗಳೊಡನೆ,

ಸ್ಥಳ : ಮೈಸೂರು
ದಿನಾಂಕ : 02-11-2015

ತಮ್ಮ ನಂಬುಗೆಯ
ಸಹಿ/-
(ಅಭಿಲಾಷ)

ಹೊರ ವಿಳಾಸ

| ಇಂದ, | ಇವರಿಗೆ, |
|---|---|
| ಅಭಿಲಾಷ,<br>10 ನೆಯ ತರಗತಿ,<br>ಮಹಾರಾಜ ಪ್ರೌಢಶಾಲೆ,<br>ಮೈಸೂರು. | ಮಾನ್ಯ ಸಂಪಾದಕರು,<br>'ವಿಜಯವಾಣಿ' ದಿನಪತ್ರಿಕೆ,<br>ಬೆಂಗಳೂರು. |

**ಈ ಸಾಹಿತಿ/ಕವಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.**

**02*03 =06**

**ಕವಿ ಪರಿಚಯ :**

ಅಂಕ ವಿತರಣೆ : ಕವಿಯ ಸ್ಥಳ, ಕಾಲ = 1 ಅಂಕ
ಕೃತಿಗಳು, ಪ್ರಶಸ್ತಿಗಳು = 1 ಅಂಕ
ವಾಕ್ಯರೂಪದಲ್ಲಿ ಬರೆಯುವುದಕ್ಕೆ ಮತ್ತು ಭಾಷಾ ಶೈಲಿ = 1 ಅಂಕ
ಒಟ್ಟು = 3 ಅಂಕಗಳು

ಶ್ರೀ ______________ ಅವರು ಕ್ರಿ. ಶ. ________ ರಲ್ಲಿ ______________ ಎಂಬಲ್ಲಿ ಜನಿಸಿದರು. ಇವರು ____ ________ _______ __________ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರಿಗೆ ________ ____________ ________ ಪ್ರಶಸ್ತಿಗಳನ್ನು / ಬಿರುದುಗಳನ್ನು ನೀಡಿ ಗೌರವಿಸಲಾಗಿದೆ.

**ಮಾದರಿ :**

1. ಶ್ರೀ **ದೇವನೂರು ಮಹಾದೇವ** ಅವರು **ಕ್ರಿ. ಶ. 1947** ರಲ್ಲಿ **ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ದೇವನೂರು** ಎಂಬಲ್ಲಿ ಜನಿಸಿದರು. ಇವರು **ಎದೆಗೆ ಬಿದ್ದ ಅಕ್ಷರ, ದ್ಯಾವನೂರು, ಒಡಲಾಳ, ಕುಸುಮಬಾಲೆ** ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರಿಗೆ **ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಭಾರತೀಯ ಭಾಷಾ ಪರಿಷತ್ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ** ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ.

2. **ಕುಮಾರವ್ಯಾಸ : ಕುಮಾರವ್ಯಾಸ** ಎಂದು ಪ್ರಸಿದ್ಧನಾಗಿರುವ **ಗದುಗಿನ ನಾರಣಪ್ಪ** ಅವರು **ಕ್ರಿ. ಶ. ಸುಮಾರು 1430** ರಲ್ಲಿ ಗದಗ ಪ್ರಾಂತ್ಯದ **ಕೋಳಿವಾಡ**ದಲ್ಲಿ ಜನಿಸಿದರು. ಇವರು ವ್ಯಾಸರ ಸಂಸ್ಕೃತ ಮಹಾಭಾರತವನ್ನು ಕನ್ನಡದಲ್ಲಿ ರಚಿಸಿ ಕುಮಾರವ್ಯಾಸ ಎಂಬ ಅಭಿದಾನಕ್ಕೆ ಪಾತ್ರರಾದರು. ಇವರು ಕರ್ನಾಟ ಭಾರತ ಕಥಾ ಮಂಜರಿ ಮತ್ತು ಐರಾವತ ಎಂಬ ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರಿಗೆ **ರೂಪಕ ಸಾಮ್ರಾಜ್ಯ ಚಕ್ರವರ್ತಿ** ಎಂಬ ಬಿರುದನ್ನು ನೀಡಿ ಗೌರವಿಸಲಾಗಿದೆ. ನಡುಗನ್ನಡ ಕಾವ್ಯ ಪರಂಪರೆಯಲ್ಲಿ ಗದುಗಿನ ಭಾರತ ಅತ್ಯಂತ ಜನಪ್ರಿಯವಾದ ಮಹಾಕಾವ್ಯವಾಗಿದೆ.

## ಲೇಖಕರ ಪರಿಚಯ ಪಟ್ಟಿ

| ಕ್ರ. ಸಂ. | ಪಾಠದ ಹೆಸರು | ಲೇಖಕರ / ಕವಿಗಳ ಹೆಸರು | ಕಾಲ | ಜನ್ಮಸ್ಥಳ | ಪ್ರಮುಖ ಕೃತಿಗಳು | ಪ್ರಶಸ್ತಿಗಳು / ಬಿರುದುಗಳು |
|---|---|---|---|---|---|---|
| 1 | ಶಬರಿ | ಪು. ತಿ. ನರಸಿಂಹಾಚಾರ್ | ಕ್ರಿ. ಶ. 1905 | ಮಂಡ್ಯ ಜಿಲ್ಲೆಯ ಮೇಲುಕೋಟೆ | ಶಬರಿ ಗೀತ ನಾಟಕ ಶ್ರೀಹರಿ ಚರಿತೆ ಹಂಸ ದಮಯಂತಿ | ಪಂಪ ಪ್ರಶಸ್ತಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ |
| 2 | ಅಮೆರಿಕಾದಲ್ಲಿ ಗೊರೂರು | ಗೊರೂರು ರಾಮಸ್ವಾಮಿ ಅಯ್ಯಂಗಾರ್ | ಕ್ರಿ. ಶ. 1904 | ಹಾಸನ ಜಿಲ್ಲೆಯ ಗೊರೂರು | ಅಮೆರಿಕಾದಲ್ಲಿ ಗೊರೂರು, ಮೆರೆವಣಿಗೆ | ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಗೌರವ ಡಿ. ಲಿಟ್. |
| 3 | ಜೀವನದೃಷ್ಟಿ | ಡಾ. ವಿ. ಕೃ. ಗೋಕಾಕ್ 'ವಿನಾಯಕ' | ಕ್ರಿ. ಶ. 1909 | ಹಾವೇರಿ ಜಿಲ್ಲೆಯ ಸವಣೂರು | ಜೀವನಪಾಠಗಳು, ಸಮುದ್ರಗೀತೆಗಳು, ಭಾರತ ಸಿಂಧೂರಶ್ಮಿ | ಭಾರತೀಯ ಜ್ಞಾನಪೀಠ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, |
| 4 | ಧರ್ಮಸಮದೃಷ್ಟಿ | | | | | |
| 5 | ಭಾಗ್ಯಶಿಲ್ಪಿ ಸರ್. ಎಂ. ವಿಶ್ವೇಶ್ವರಯ್ಯ | ಡಿ. ಎಸ್. ಜಯಪ್ಪಗೌಡ | ಕ್ರಿ. ಶ. 1947 | ಚಿಕ್ಕಮಗಳೂರು ಜಿಲ್ಲೆಯ ದಾರದಹಳ್ಳಿ | ಸರ್. ಎಂ. ವಿಶ್ವೇಶ್ವರಯ್ಯ ಅವರ ಕಾರ್ಯಸಾಧನೆಗಳು, ಕರ್ನಾಟಕದ ಕಡಲಾಚೆಯ ಸಂಪರ್ಕಗಳು ಮೈಸೂರು ಒಡೆಯರು | ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಧಾರವಾಡ ಕರ್ನಾಟಕ ಸಂಘದ ಸಂಶೋಧನಾ ಬಹುಮಾನ |
| 6 | ಎದೆಗೆ ಬಿದ್ದ ಅಕ್ಷರ | ದೇವನೂರು ಮಹಾದೇವ | ಕ್ರಿ. ಶ. 1949 | ಮೈಸೂರು ಜಿಲ್ಲೆಯ ದೇವನೂರು | ಎದೆಗೆ ಬಿದ್ದ ಅಕ್ಷರ, ಕುಸುಮ ಬಾಲೆ, ದ್ಯಾವನೂರು | ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ |
| 7 | ವೃಕ್ಷಸಾಕ್ಷಿ | ದುರ್ಗಸಿಂಹ | ಕ್ರಿ. ಶ. ಸು. 1031 | ಕಿಸುಕಾಡು ನಾಡಿನ ಸಯ್ಯಡಿ | ಕರ್ನಾಟಕ ಪಂಚತಂತ್ರಂ | |
| 8 | ವ್ಯಾಘ್ರಗೀತೆ | ಎ. ಎನ್. ಮೂರ್ತಿರಾವ್ | ಕ್ರಿ. ಶ. 1900 | ಮಂಡ್ಯ ಜಿಲ್ಲೆಯ ಅಕ್ಕಿ ಹೆಬ್ಬಾಳು | ಸಮಗ್ರ ಲಲಿತ ಪ್ರಬಂಧಗಳು, ದೇವರು, ಅಪರ ವಯಸ್ಕನ ಅಮೆರಿಕಾ ಯಾತ್ರೆ. | ಪಂಪ ಪ್ರಶಸ್ತಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ |

## ಕವಿಗಳ ಪರಿಚಯ ಪಟ್ಟಿ

| ಕ್ರ. ಸಂ. | ಪಾಠದ ಹೆಸರು | ಲೇಖಕರ / ಕವಿಗಳ ಹೆಸರು | ಕಾಲ | ಜನ್ಮಸ್ಥಳ | ಪ್ರಮುಖ ಕೃತಿಗಳು | ಪ್ರಶಸ್ತಿಗಳು / ಬಿರುದುಗಳು |
|---|---|---|---|---|---|---|
| 1 | ಎಮ್ಮ ನುಡಿಗೇಳ್ | ಆದಿಕವಿ ಪಂಪ | ಕ್ರಿ. ಶ. ಸು. 941 | ವೆಂಗಿಪಳು | ಆದಿಪುರಾಣ, ವಿಕ್ರಮಾರ್ಜುನ ವಿಜಯಂ | ಕವಿತಾ ಗುಣಾರ್ಣವ, ಸರಸ್ವತೀ ಮಣೀಹಾರ, ಸಂಸಾರಸಾರೋದಯ |
| 2 | ಹಕ್ಕಿ ಹಾರುತಿದೆ ನೋಡಿದಿರಾ | ದ. ರಾ. ಬೇಂದ್ರೆ 'ಅಂಬಿಕಾತನಯದತ್ತಾ' | ಕ್ರಿ. ಶ. 1896 | ಧಾರವಾಡ | ಗರಿ, ನಾಕುತಂತಿ, ನಾದಲೀಲೆ | ಪದ್ಮಶ್ರೀ ಪ್ರಶಸ್ತಿ, ಭಾರತೀಯ ಜ್ಞಾನಪೀಠ ಪ್ರಶಸ್ತಿ/ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ. |
| 3 | ಹಲಗಲಿಯ ಬೇಡರು | | | | | |
| 4 | ವಚನ ಸೌರಭ | ಜೇಡರ ದಾಸಿಮಯ್ಯ 'ರಾಮನಾಥ' | ಕ್ರಿ. ಶ. ಸು. 1150 | ಯಾದಗಿರಿ ಜಿಲ್ಲೆಯ ಮುದೇನೂರು | ಜೇಡರ ದಾಸಿಮಯ್ಯನ ವಚನಗಳು | |
| | | ಬಸವಣ್ಣ 'ಕೂಡಲ ಸಂಗಮದೇವ' | ಕ್ರಿ. ಶ. ಸು. 1260 | ಬಿಜಾಪುರ ಜಿಲ್ಲೆಯ ಬಾಗೇವಾಡಿ | ವಚನ ಸಾಹಿತ್ಯ ಸಂಗ್ರಹ | |
| 5 | ಸಂಕಲ್ಪಗೀತೆ | ಡಾ. ಜಿ. ಎಸ್. ಶಿವರುದ್ರಪ್ಪ | ಕ್ರಿ. ಶ. 1926 | ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ | ಎದೆ ತುಂಬಿ ಹಾಡಿದೆನು, ಸಾಮಗಾನ, ಚೆಲುವು | ರಾಷ್ಟ್ರಕವಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ನಾಡೋಜ. |
| 6 | ಕೌರವೇಂದ್ರನ ಕೊಂದೆ ನೀನು | ಗದುಗಿನ ನಾರಣಪ್ಪ 'ಕುಮಾರ ವ್ಯಾಸ' | ಕ್ರಿ. ಶ. ಸು. 1430 | ಗದಗ ಪ್ರಾಂತ್ಯದ ಕೋಳಿವಾಡ | ಕರ್ಣಾಟ ಭಾರತ ಕಥಾಮಂಜರಿ | ರೂಪಕ ಸಾಮ್ರಾಜ್ಯ ಚಕ್ರವರ್ತಿ |
| 7 | ವೀರಲವ | ಲಕ್ಷ್ಮೀಶ | ಕ್ರಿ. ಶ. ಸು. 1550 | ಚಿಕ್ಕಮಗಳೂರು ಜಿಲ್ಲೆಯ ದೇವನೂರು | ಜೈಮಿನಿ ಭಾರತ | ಉಪಮಾಲೋಲ, ಕರ್ನಾಟ ಕವಿ ಚೂತವನ ಚೈತ್ರ |
| 8 | ಸಾರ್ಥಕತೆ 1. ಸಂಕಟಕೆ ಗಡಿ ಇಲ್ಲ | ದು. ಸರಸ್ವತಿ | ಕ್ರಿ. ಶ. 1963 | ಬೆಂಗಳೂರು | ಹೆಣೆದರೆ ಜೇಡನಂತೆ, ಜೀವ ಸಂಪಿಗೆ | |
| | 2. ನನ್ನಾಸೆ | ಇಂದುಮತಿ ಲಮಾಣಿ | ಕ್ರಿ. ಶ. 1959 | ವಿಜಯಪುರ ಜಿಲ್ಲೆಯ ಬರಟಗಿಯ ಮೂರನೆಯ ತಾಂಡ | ನನ್ನ ಸುತ್ತಲಿನ ಸತ್ಯಗಳು, ತಾಯಿಲೋಕ, | ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ, ಮೈತ್ರೇಯಿ ಪ್ರಶಸ್ತಿ, ಡಾಟರ್ ಆಫ್ ನೈಲ್ ಪ್ರಶಸ್ತಿ. |